BUDGET ESTIMATES FOR 1974-75 DEMAND FOR GRANTS DEMAND NO : 27, 28 AND 29 (DEBATE CONTD)

ಶ್ರೀ ಕೋಣಂದೂರು ಲಿಂಗಪ್ಪ.—ಮೊದಲು ಅಲ್ಲಿ ಕುಳಿತಿರುವ ವಿದ್ಯಾರ್ಥಿಗಳ ಬಗ್ಗೆ ಹೇಳಿ.

†ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಚಾರ, ನಿಮಗೆ ಅಭಿರುಚಿ ಇರತಕ್ಕ ವಿಚಾರ, ಎಲ್ಲ ವಿಷಯದ ಮೇಲೆಯೂ ಉತ್ತರ ಕೊಡುತ್ತೇನೆ. ನಿನ್ನೆ ದಿವಸ ಟೀಕೆ ಮಾಡಿದಂಥ ಎಲ್ಲ ವಿಷಯಗಳ ಬಗ್ಗೆಯೂ ಹೇಳುತ್ತೇನೆ. ಆದಿಮೂರ್ತಿ, ಆದಿಜಾಂಬವ ಎಂದು ಏನೇನೋ ಟೈಟಲ್ ಕೊಟ್ಟಿದ್ದಾರೆ. ಆ ಎಲ್ಲ ವಿಚಾರಗಳ ಬಗ್ಗೆಯೂ ಹೇಳುತ್ತೇನೆ. ನನ್ನ ವಿಚಾರದಲ್ಲಿ ಏನಾದರೂ ಹೇಳುವುದಿದ್ದರೆ ಒಂದು ಪೂರ್ತಿ ದಿನ ಅವಕಾಶ ಕೊಡಿ ಅದಕ್ಕೆ ನಾನು ಜವಾಬು ಕೊಡುತ್ತೇನೆ ಎಂದು ಮಾನ್ಯ ಅಧ್ಯಕ್ಷಿಣಿಯವರಲ್ಲಿ ಹೇಳಿದ್ದೇನೆ. ಈ ಟೀಕೆಗಳೆಲ್ಲ ಏನು ಬರುತ್ತಿವೆ ಇದರ ಹಿನ್ನೆಲೆ ಏನು ಹೇಗೆ ಆಗುತ್ತಿವೆ, ಎನ್ನುವ ವಿಚಾರವನ್ನೆಲ್ಲ ನಾನು ಹೇಳುತ್ತೇನೆ. ಈ ಹೊತ್ತಿನ ದಿವಸ ನಾವು ನೋಡುತ್ತಿದ್ದೇವೆ, ಒಬ್ಬೊಬ್ಬರನ್ನಾಗಿ ಅವರು ಟೀಕೆ ಮಾಡುತ್ತಿದ್ದಾರೆ. ನಾವು ವಿರೋಧಪಕ್ಷದಲ್ಲಿದ್ದಾಗ ಶ್ರೀ ದೇವೆಗೌಡರು ಇತ್ತ ಕಡೆ ಇದ್ದರು. ಒಂದುಸಾರಿಯಾದರೂ ನಾವು ಯಾರ ಮೇಲೂ ವೈಯಕ್ತಿಕವಾಗಿ ಈ ರೀತಿ ಹಣೆಯುವ ಕಸೂತಿಯ ಕೆಲಸವನ್ನು ಮಾಡಿರಲಿಲ್ಲ. ಮೊದಲು ಮಾನ್ಯ ಚನ್ನಬಪ್ಪನವರ ಮೇಲಾಯಿತು. ಎರಡನೆಯದಾಗಿ ಮಾನ್ಯ ಘೋರ್ಪಡೆ ಅವರ ಮೇಲಾಯಿತು, ಮೂರನೆಯದಾಗಿ ನನ್ನ ಮೇಲೆ ಟೀಕೆ ಮಾಡುತ್ತಿದ್ದಾರೆ. ಎದುರು ಪಕ್ಷದವರು ಮಾತನಾಡುತ್ತಿರಬೇಕಾದರೆ ನಾವು ಸುಮ್ಮನೆ ಕುಳಿತುಕೊಂಡಿದ್ದೆವು, ಬಾಯಿ ಹೊಲಿದುಕೊಂಡು ಕುಳಿತುಕೊಂಡು ಕೇಳಿದೆವು. ಅವರೂ ದಯಮಾಡಿ ಹಾಗೆಯೇ ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಹೇಳಿದಾಗ ಚುಚ್ಚಿದಾಗ ಹೇಗೆ ಚುಚ್ಚಿಸಿಕೊಂಡೆವೋ ಹಾಗೆಯೇ ನಾವು ನಮಗೆ ತಿಳಿದುದನ್ನೂ ಹೇಳಬೇಕಾದಿದೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಭಾ ನಾಯಕರು ಇಲ್ಲಿಯೇ ಕುಳಿತಿದ್ದಾರೆ. ನೀವು ಚುಚ್ಚಿದಹಾಗೆ ನಮ್ಮ ಕೈಯಲ್ಲಿ ಚುಚ್ಚುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ನಾವು ಈ ರೀತಿಯಾಗಿ ಹಿಟಿಂಗ್ ಬಿನೀತ್ ದಿ ಬೆಲ್ಟ್ ಮಾಡಿಲ್ಲ. ಆ ರೀತಿ ಮಾಡಿಲ್ಲ: ನಾವು ಪ್ರಜಾಪ್ರಭುತ್ವ ಯುಗದಲ್ಲಿದ್ದೇವೆ ಪ್ರಜಾಪ್ರಭುತ್ವದಲ್ಲಿ ಟೀಕೆಗೆ ಅತ್ಯಂತ ಆದರ ಉಂಟು, ಸ್ವಾಗತ ಉಂಟು. ಟೀಕೆ ಮಾಡುವುದರಲ್ಲಿ ಅದನ್ನು ವೈಯಕ್ತಿಕವಾಗಿ ತೆಗೆದುಕೊಂಡು ಹೋಗುವುದು ಸೌಜನ್ಯವಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಅನೇಕ ವಿಷಯಗಳು ನನ್ನ ಗಮನಕ್ಕೆ ಬಂದಿವೆ. ಸಂದಿಗ್ಧಗಳು ಎಲ್ಲಿ ತಯಾರಾಗುತ್ತವೆ, ಏನು ಕಾರಣ, ಏತಕ್ಕೋಸ್ಕರವಾಗಿ ಟೀಕೆಗಳು ಬರುತ್ತಿವೆ ಎನ್ನುವುದು ನಮಗೂ ಗೊತ್ತಿದೆ.

ಅಧ್ಯಕ್ಷಿಣಿಯವರೇ, ಹಿಂದೆ ನಾನು ಒಂದು ಸಾರಿ ಗೃಹಮಂತ್ರಿಯಾಗಿದ್ದಾಗ ಇವೆಲ್ಲವೂ ಹೇಗೆ ನಡೆಯುತ್ತವೆ ಎನ್ನುವುದನ್ನು ಸ್ವಲ್ಪ ತಿಳಿದುಕೊಂಡಿದ್ದೇನೆ ಇನ್ನೂ ಆ ವಾಸನೆ ಹೋಗಿಲ್ಲ. ಈ ಹೊತ್ತು ನಾನು ನೋಡುತ್ತಿದ್ದೇನೆ ಒಂದು ಉದ್ದೇಶದಿಂದ ವಿರೋಧಪಕ್ಷದಿಂದ ಟೀಕೆಗಳು ಬರುತ್ತಿವೆ.

ನಮ್ಮ ಪಕ್ಷವನ್ನು ಒಡೆಯಬೇಕು, ನಮ್ಮ ಮುಖಂಡದಲ್ಲಿ ಏನೋ ಒಂದು ರೀತಿಯಾದ ಭಿನ್ನಾಭಿಪ್ರಾಯ ಬರುವ ಹಾಗೆ ಮಾಡಬೇಕು, ಒಂದು ರೀತಿಯಾದ ಭಿನ್ನಾಭಿಪ್ರಾಯ ನಮ್ಮ ಪಕ್ಷದೊಳಗೆ ನಮ್ಮಲ್ಲಿ ಬೆಳೆಯುತ್ತ ಬರಲಿ ಎಂದು.........

1-30 P.M.

ಶ್ರೀ ಕೋಣಂದೂರು ಲಿಂಗಪ್ಪ.—ವಿರೋಧ ಪಕ್ಷದವರು ನಿಮ್ಮನ್ನು ರಕ್ಷಣೆ ಮಾಡುವುದಕ್ಕೆ ಇದ್ದಾರೆ. ಎಂದು ನೀವು ತಿಳಿದಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ರಕ್ಷಣೆ ಮಾಡುವ ಕೆಲಸ ನಿಮಗೆ ಬೇಕಾಗಿಲ್ಲ. ನಮ್ಮ ಕಡೆ ಇರುವ ಸೈನ್ಯವೇ ದೊಡ್ಡದಾಗಿದೆ. ಆದುದರಿಂದ ನನಗನ್ನಿಸುವುದು......—

(ಇಂಟರ್‌ಪ್ಷನ್‌ಗಳು)

ಶ್ರೀ ಎಸ್. ಬಂಗಾರಪ್ಪ.—ಕೌರವರಲ್ಲಿ ಅಕ್ಷೋಹಿಣಿ ಸೈನ್ಯವಿರುವ ಹಾಗೆ.......

ಶ್ರೀ ಹೆಚ್. ಸಿದ್ದವೀರಪ್ಪ.—ನಾವು ಕೌರವರಾಗಿದ್ದರೆ ತಪ್ಪೇನಿಲ್ಲ, ನೀವು ಧರ್ಮರಾಯರ ಹಾಗೆ ನಿಮ್ಮ ನಿಮ್ಮ ಧರ್ಮಗಳನ್ನು ಕಾಪಾಡಿಕೊಳ್ಳುತ್ತಿದ್ದೀರಾ ? ಅದನ್ನು ನೀವು ನೋಡಿಕೊಳ್ಳಿ. ಹಿಂದೆ ಪಂಚ ಪಾಂಡವರು ಎಂದು ಐದೇ ಜನರು ಇದರೂ ಅವರು ಹೇಗೆ ಧರ್ಮವನ್ನು ಕಾಪಾಡಿಕೊಂಡು ಬಂದರು ಎನ್ನುವುದು ನಮಗೂ ಗೊತ್ತಿದೆ. ನಿಮ್ಮನ್ನು ನೀವು ಮೊದಲು ನೋಡಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಕೌರವರಲ್ಲಿದ್ದ ಹನ್ನೊಂದು ಅಕ್ಷೋಹಿಣಿ ಸೈನ್ಯವನ್ನು ರಕ್ಷಣೆ ಮಾಡಿದಂತೆ ನೀವೂ ಕರ್ಣಾಟಕವನ್ನು ರಕ್ಷಣೆ ಮಾಡುವುದಕ್ಕೆ ಹೋಗುತ್ತಿದ್ದೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ಇವೊತ್ತಿನ ದಿವಸ ನನಗೆ ಇವುಗಳ ಎಲ್ಲ ಮಾಹಿತಿಗಳೂ ಇವೆ. ಅವನ್ನು ವ್ಯಸನದಿಂದ ಹೇಳುತ್ತೇನೆ ಇವೊತ್ತಿನ ದಿವಸ ನಿಮಗೆ ಒಂದು ಅನುಮಾನ ಹಾಗೂ ಇದರ ಹಿನ್ನೆಲೆ ಏನು ಏನ್ನುವುದು ನನಗೆ ಗೊತ್ತಾಗಿದೆ,

There is a regular conspiracy on that side to see that all of us are out limb. Irrespective of the fact whether there is any substanial evidence or not, we have been able to see it. I would like to comment on it, if necessary, in greater detail on some other occasion. We have full faith in our Leader. They want to see that some other lesders names are also brought in

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಏನೋ ಒಳಸಂಚು ಉಂಟಾಗಿದೆ ಎನ್ನುವುದನ್ನು ಪ್ರಸ್ತಾಪ ಕರಿಸುತ್ತಾ ಅವರು ಇಲ್ಲಿ ಹೇಳುತ್ತಿದ್ದಾರೆ. ಎಂದರೆ ಇದನ್ನು ನೇರವಾಗಿ ವಿರೋಧ ಪಕ್ಷದವರ ಮೇಲೆ ಮಾಡಿದ ಅಪಾದನೆ ಎಂದತಾಗುತ್ತದೆ. ಇದಕ್ಕಾಗಿ ನಾವು ಹೇಳುವುದು ಸರಕಾರದ ಮೇಲೆ ನೇರವಾಗಿ ಅಪಾದನೆಗಳನ್ನು ಮಾಡಿರುವಾಗ ಅದನ್ನು ನಾವು ಆಧಾರಸಹಿತವಾಗಿ ರುಜುವಾತು ಮಾಡುತ್ತೇವೆ. ತಾವು ಹೇಳುವ ಅಪಾದನೆಗಳು ಸರಿಯಾಗಿವೆ ಎಂದರೆ ಅದಕ್ಕೆ ಸಕಾರಣಗಳನ್ನೂ ತಾವು ಕೊಡಬೇಕು.

SRI KAGODU THIMMAPPA —If the Hon'ble Minister is honest, he mu t prove it.

SRI H. SIDDAVEERAPPA.-With my experience of parliamentary life of so many years...... ...

ಅಧ್ಯಕ್ಷರು.—ಹೀಗೆ ಒಟ್ಟಿಗೆ ಎಲ್ಲರೂ ಸ್ಪ್ರಿಂಗ್ ಎದ್ದಹಾಗೆ ಎದ್ದು ನಿಂತರೆ (Interruption) ಅವರು ಹೇಗೆ ತಾನೆ ಇಲ್ಲಿ ಭಾಷಣಮಾಡಲು ಸಾಧ್ಯ ? ಮಾನ್ಯ ಸದಸ್ಯರು ಸಾವಧಾನವಾಗಿ ಕುಳಿತುಕೊಂಡು ಅವರು ಹೇಳುವುದನ್ನು ಕೇಳಬೇಕು,

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಸ್ಪ್ರಿಂಗ್ ಎದ್ದಂತೆ ಹೇಳಲು ಕಾರಣ ಅವರು ಹೇಳುವ ಮಾತುಗಳಿಂದಾಗಿ.

ಶ್ರೀ ಟಿ. ಎಂ ಮಂಜುನಾಥ. ಆಡಳಿತ ಕಾಂಗ್ರೆಸ್ಸಿನೊಳಗಿರುವವರೇ ಇದರಲ್ಲಿ ಸೇರಿಕೊಂಡು ನಿಮ್ಮ ಮೇಲೆ ಹೇಳುತ್ತಿರುವುದು ನಿಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ:—ಸನ್ಮಾನ್ಯ ಅಧ್ಯಕ್ಷರೇ ತಾವು ಆ ಕಡೆಗಿಂತ ನಮ್ಮ ಕಡೆಗೂ ರಕ್ಷಣೆ ಕೊಡಬೇಕಾಗಿದೆ.

SRI KAGODU THIMMAPPA —The Hon'ble Minister is trying to undermine their own leadership.

SRI H. SIDDAVDVEERAPPA.—I know they have been saying that with a design and purpose, The Hon'ble Member himself is coming out to say what he has stated.

ಶ್ರೀ ಎಸ್. ಬಂಗಾರಪ್ಪ.—ನಾವೇನು ಇಲ್ಲಿ ಅಪಾದನೆಗಳನ್ನು ಮಾಡಿದ್ದೇವೆ ಅದನ್ನು ಮಾನ್ಯ ಸಚಿವರ ಮೇಲೇನೂ ಮಾಡಿಲ್ಲ. ಮಾನ್ಯ ಸಚಿವರು ಇಲ್ಲಿ ಅಪಾದನೆ ಮಾಡುವಾಗ ಅದನ್ನು ಸರಿಯಾದ ಆಧಾರಗಳ ಮೇಲೆ ಇಲ್ಲಿ ಅದನ್ನು ಸಾಬೀತು ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಬೇಕಾಗಿದೆ.

SRI H. SIDDAVEERAPPA.—I have not yielded ; I am not going to yield...............

ಶ್ರೀ ಎಚ್.ಡಿ. ದೇವೇಗೌಡ –ಪಾಯಿಂಟ್ ಆರ್ಡರ್ ಮೇಲೆ ಹೇಳಬೇಕಾಗಿದೆ, ಒಂದು ಗುರುತರವಾದ ಆರೋಪವನ್ನು ವಿರೋಧ ಪಕ್ಷಗಳ ಮೇಲೆ ಮಾಡುತ್ತಿದ್ದಾರೆ. ಇಂದು ವಿರೋಧ ಪಕ್ಷಗಳಲ್ಲಿ ಅನೇಕ ರಾಜಕೀಯ ಪಕ್ಷಗಳೂ ಇರುತ್ತವೆ, ಆ ಪಕ್ಷಗಳು ಯಾವ ರೀತಿಯಲ್ಲೇ ಇರಲಿ ಅವರೂ ಜನರ ಪ್ರತಿನಿಧಿಗಳಾಗಿ ಜವಾಬುದಾರಿಯಿಂದ ಇಲ್ಲಿ ಕೆಲಸ ಮಾಡಲು ಬಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ಮಾನ್ಯಮಂತ್ರಿಗಳು ಏನನ್ನೂ ಹೇಳಿಕೊಡಬೇಕಾಗಿಲ್ಲ. ಅವರು ಹೇಳತಕ್ಕ ಅಪಾದನೆಗಳು ಬಹಳ ಗುರುತರವಾದಂತಹ ಅಪಾದನೆಗಳು. ಅಂತಹ ಶಬ್ದಗಳನ್ನು ಅವರು ಉಪಯೋಗಿಸಬಾರದಾಗಿತ್ತು, ಅವರನ್ನೆಲ್ಲಾ ಅಂಗಅಂಗವಾಗಿ ಕತ್ತರಿಸುವ ಕೆಲಸದ ವಿರೋಧ ಪಕ್ಷದವರು ಮಾಡುತ್ತಿದ್ದಾರೆ ಎಂದು ಅವರು ಹೇಳುತ್ತಿರುವುದನ್ನು ಇಲ್ಲಿ ನಾವು ಕುಳಿತುಕೊಂಡು ಕೇಳುವುದು ಕಷ್ಟವಾಗುತ್ತದೆ. ವಿರೋಧ ಪಕ್ಷದ ನಮ್ಮ ಸ್ನೇಹಿತರಾರೂ ನಿಮ್ಮ ಕಾಲನ್ನೂ ಕತ್ತರಿಸಲಿಕ್ಕೆ ಹೋಗುವುದಿಲ್ಲ. ತಮಗೆ ಇದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ನಿರ್ದಿಷ್ಟವಾಗಿ ಇಂತಹ ಆಪಾದನೆಗಳು ನಿರಾಧಾರವಾದವು ಎಂದು ನಮ್ಮ ಮೇಲೆ ಹೇಳಬಹುದು. ಆದರೆ ನಾವು ಯಾರೂ ನಿಮ್ಮ ಮೇಲೆ ಅಪಾದನೆಗಳನ್ನು ಮಾಡುವಾಗ ನಿಮ್ಮ ಕೈಕಾಲುಗಳನ್ನು ಕತ್ತರಿಸಿ ಹಾಕಲಿಕ್ಕೆ ಹೋಗುತ್ತಿಲ್ಲ. ಅವರು ಇದಕ್ಕೆ ಸಕಾರಣಗಳನ್ನು ಹೇಳಬೇಕು. ಇಲ್ಲದಿದ್ದರೆ ಅವರು ಉಪಯೋಗಿಸಿರುವ ಪದವನ್ನು ವಾಪಸ್ಸು ತಗೆದುಕೊಳ್ಳಬೇಕಾಗುತ್ತದೆ, ವಿರೋಧ ಪಕ್ಷಗಳ ಮೇಲೆ ಈ ರೀತಿ ಹೇಳಲಿಕ್ಕೆ ಹೋಗುವುದು ಸಾಧುವಲ್ಲ ಮತ್ತು ಹೀಗೆ ಸ್ವೀಪಿಂಗ್ ರಿಮಾರ್ಕ್ಸ್‌ನ್ನು ಮಾಡಬಾರದು.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಯಾವ ಯಾವ ಅಪಾದನೆಗಳನ್ನು ಮಾಡಿದ್ದೇವೆ ಎನ್ನುವುದನ್ನು ಹೇಳಿದ್ದೇವೆ. ಕೇವಲ ಆಧಾರವಿಲ್ಲದೆ ಅಥವಾ ನಂಬಿಕೆ ಇಲ್ಲದೆ ನಾವು ಇಲ್ಲಿ ಏನನು ಹೇಳಲಿಲ್ಲ. ಯಾವ ಯಾವ ಅಪಾದನೆಗಳನ್ನು ಹೇಳಿದ್ದೇವೆ ಅದಕ್ಕೆ ಯಾವ ಯಾವ ಜನರು ಕಾರಣರು ಎನ್ನುವುದನ್ನೂ ಹೇಳಲು ಹಾಗೂ ಅವನ್ನು ರುಜುವಾತುಪಡಿಸಲು ಸಾಕಷ್ಟು ಮಾಹಿತಿಗಳು ನಮ್ಮಲ್ಲಿವೆ. ನಾವು ನಿರಾಧಾರವಾದ ಯಾವ ಅಪಾದನೆಯನ್ನೂ ಮಾಡಿಲ್ಲ ಮತ್ತು ನಾವು ಈ ನಿರ್ಣಯಕ್ಕೆ ಬರಲು ಆ ಕಡೆ ಇರುವ ಸರಕಾರದಲ್ಲಿ ಅಧಿಕಾರಕ್ಕೆ ಬರಬೇಕೆಂದು ಮಾಡಲಿಲ್ಲ ಮತ್ತು ನಮಗೆ ಅಧಿಕಾರ ಸ್ಥಾನ ಪಡೆಯಬೇಕೆ ಎನ್ನುವ ಆಕಾಂಕ್ಷೆಯೂ ಇಲ್ಲ ನಮಗೆ ಅಧಿಕಾರ ಬೇಕಿಲ್ಲ. ನಾನು ಮಾಡಿರತಕ್ಕ ಅಪಾದನೆ ಮಾನ್ಯ ಸಚಿವರ ಇಲಾಖೆಯ ಮೇಲೆ ಮಾಡಿದ್ದೇನೆ ಮತ್ತು ನಾನು ಏನೇನು ಹೇಳಿದ್ದೇನೆ, ಎನ್ನುವುದು ರಿಕಾರ್ಡುಗಳಲ್ಲಿವೆ. ಇಂತಹ ಅಪಾದನೆಗಳನ್ನು ಮಾಡಬೇಕಾದ ಅಗತ್ಯವಿದೆ ಎಂದು ಮಾಡಿದ್ದೇವೆ. ಅವರೇ ಹೇಳಿರುವ ರಿಪೋರ್ಟಿನಲ್ಲಿ ಕೂಡ ಎಷ್ಟೋ ಡಿಸ್‌ಕ್ರಿಪೆನ್ಸೀಗಳು ಇವೆ. ಇದನ್ನು ಸಾಬೀತು ಮಾಡಿ ಅವರಿಗೆ ತೋರಿಸಬಹುದು. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಕ್ಕೆ ಕೊಡಬೇಕಾದ ಗೌರವ ಹಾಗೂ ಮರ್ಯಾದೆ ಏನಿದೆ ಅದನ್ನು ಇಲ್ಲಿ ಕೊಡುತ್ತಿಲ್ಲ. ವಿರೋಧ ಪಕ್ಷಗಳು ಕೆಲಸ ಮಾಡಬೇಕಾದರೆ ಅವರು ಒಂದು ಇತಿ ಮಿತಿಯೊಳಗೆ ಮಾಡಬೇಕಾಗುತ್ತದೆ. ಆದರೆ ಮಾನ್ಯ ಮಂತ್ರಿಗಳು ಮೊದಲು ಇಂತಹ ಮಾತುಗಳನ್ನು ಇಲ್ಲಿ ಬಳಸಲು ಹೋಗಬಾರದು. ಅವರು ಹೇಳುತ್ತಿರುವುದನ್ನು ನೋಡಿದರೆ ವಿರೋಧ ಪಕ್ಷಗಳೇ ಏನೋ ದೊಡ್ಡ ಅಪರಾಧ ಮಾಡಿದ್ದಾರೆ ಎನ್ನುವಂತಹ ಮಾತುಗಳನ್ನು ಆಡಿದಾರೆ, ಅಂತಹ ಮಾತುಗಳನ್ನು ಇಲ್ಲಿ ಆಡಬಾರದು. ನಾವು ಅಪಾದನೆಗಳನ್ನು ಮಾಡಿರುವುದು ನಿರಾಧಾರ ಎಂದು ಹೇಳಲಿ, ಇಲ್ಲವೇ ಆಧಾರವಿಲ್ಲದವು ಎಂದು ಬೇಕಾದರೂ ಹೇಳಲಿ. ನಾವು ಮಾನ್ಯ ಶ್ರೀ ಚನ್ನಬಸಪ್ಪನವರ ಮನೆ ವಿಚಾರದಲ್ಲಿ ಅಪಾದನೆಗಳನ್ನು ಮಾಡಿದಾಗ ಅದರ ಬಗ್ಗೆ ನಮಗೆ ಒದಗಿಸಿರುವ ಅಂಕೆ ಅಂಶಗಳು ಎಲ್ಲ ಇವೆ. ಅದರಲ್ಲೇ ನಿರಾಧಾರವಾದ ಎಷ್ಟೋ ತಪ್ಪುಗಳೂ ಇವೆ. ಬೇಕಾದರೆ ಅವನ್ನು ತೋರಿಸಬಹುದು. ಹಾಗೇ ನಾವು ಶ್ರೀಮಾನ್ ಸಿದ್ದವೀರಪ್ಪನವರ ಇಲಾಖೆಯ ಫರ್ನಿಚರು ಬಗ್ಗೆ ಅವ್ಯವಹಾರಗಳಾಗಿರುವುದರ ಬಗ್ಗೆ ಅವರ ಮೇಲೆ ಹೇಳಿದ್ದೆವು. ಅದು ಸರಿಯಲ್ಲ ಎಂದು ಅವರ ಅಭಿಪ್ರಾಯವಿರಬಹುದು. ಅವರ ಇಲಾಖೆಯಲ್ಲಿ ನಡೆದಿರುವುದರಿಂದ ಇವೊತ್ತು ಅದರ ಎಲ್ಲ ರಿಕಾರ್ಡುಗಳನ್ನೂ ಅವರು ಇಲ್ಲಿಡಬಹುದು. ಆ ರೀತಿ ಇಟ್ಟು ಅದು ಸರಿಯಾಗಿದೆ ಎಂದಿದ್ದರೆ, ಅದರಲ್ಲಿ ತಪ್ಪಿದೆಯೇ ಇಲ್ಲವೇ ಎನ್ನುವುದನ್ನು ನೋಡಿ ಒಪ್ಪಬಹುದಾಗಿತ್ತು. ಅದರಲ್ಲಿ ತಪ್ಪಾಗಿದೆ ಮತ್ತು ಅದರಲ್ಲೇನೋ ದೋಷಗಳಿವೆ ಎನ್ನುವ ಅನುಮಾನಗಳು ನಮಗೆ ಬಂದಾಗ ಅದನ್ನು ನಾವು ಸರಕಾರದ ಮುಂದೆ ತಂದು ಹೇಳಲೇ ಬೇಕಾಗುತ್ತದೆ. ಯಾವ ರೀತಿ ಅನುಮಾನ ಬಂತು ಎಂದು ಹೇಳಿದರೆ ಅದನ್ನು ಅನರೂ ಒಪ್ಪುತ್ತಾರೆ. ಒಂದು ವೇಳೆ ನಾವು ಕೊಡತಕ್ಕಂತಹ ಕಾರಣಗಳು ಹಾಗೂ ಆಪಾದನೆಗಳು ಏನಿವೆ ಅವು ಸರಿಯಾಗಿಲ್ಲದಿದ್ದರೆ, ಸರಿಯಾಗಿಲ್ಲ ಎಂದು ಹೇಳುವುದಕ್ಕೆ ಮತ್ತು ಅವನ್ನು ಸಾಬೀತು ಮಾಡಲಿಕ್ಕೆ ಅವರು ತಯಾರಾಗಿರಬೇಕು,

SRI H SIDDAVEERAPPA.—Let it come; I am going to prove it. ಫರ್ನಿಚರ ವಿಚಾರದಲ್ಲಿ ಆವೊತ್ತಿನ ದಿವಸ ಏಕ್‌ದಂ ಸದಸ್ಯರು ಇಲ್ಲಿ ಹೇಳಿಬಿಟ್ಟರು. ಇದರಲ್ಲಿ ಸುಮಾರು ೨೯ ಲಕ್ಷ ರೂಪಾಯಿಗಳಷ್ಟು ಇಲಾಖೆಯವರು ಖರ್ಚು ಮಾಡಿದ್ದರೂ ಸಹ ಅಂತಹ ಫರ್ನಿಚರೇ ಇಲ್ಲ. ಕೇವಲ ಹತ್ತು ಇಪ್ಪತ್ತು ಕುರ್ಚಿಗಳು ಮಾತ್ರ ಇವೆ ಎಂದು ಹೇಳಿದರು. ಇದೆಲ್ಲಿ ಹೋಯಿತು ಎಂದು ಆಗಲೇ ನಾನು ಹೇಳುವ ಪಟ್ಟದಲ್ಲಿರಲಿಲ್ಲ. ಆದರೆ ನಾನು ಯಾವ ಇಲಾಖೆಯ ಜವಾಬುದಾರಿಯನ್ನು ಹೊತ್ತಿದ್ದೇನೋ ಅದರ ಎಲ್ಲ ತಪ್ಪುಗಳನ್ನೂ ಹೊರಲಿಕ್ಕೆ ತಯಾರಾಗಿದ್ದೇನೆ. ಅವರು ಮಾಡಿರತಕ್ಕ ಅಪಾದನೆಗಳು ಸರಿಯಾಗಿಲ್ಲ ಎಂದು ಹೇಳದೇ ಇದ್ದರೆ that shows I am incapable, I am insipid, I am ineffeminate I cannot control. ಅವೊತ್ತಿನ ದಿವಸ ಅವರು ಇಲ್ಲಿ ಅಪಾದನೆ ಮಾಡಿದಾಗ ಅವರು ನನ್ನನ್ನು ಒಬ್ಬ ಪೋಲೀಸು ಆಫೀಸರಾಗಿ ನನ್ನೊಡನೆ ಬರಲಿ ಅಲ್ಲಿರುವ ಅವ್ಯವಹಾರಗಳನ್ನು ತೋರಿಸುತ್ತೇವೆ ಎಂದರು. I said 'No'. I know my responsibility as a Minister. ಇದರಲ್ಲಿ ಹೇಗೆ ಕೆಲಸಗಳು ನಡೆದಿವೆ ಎಂದು ವಿಚಾರ ಮಾಡಿದಾಗ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಬಹಳ ಅರಿತು ನುರಿತಂತಹ ವಕೀಲರೂ ಆಗಿ ಅವರು ಹೇಗೆ ಇಲ್ಲಿ ಕೆಲಸ ಮಾಡಿದರು ಎಂದರೆ ಈ ಇಲಾಖೆಗೆ ಹೋಗಿ ಟ್ರೆಸ್ ಪಾಸು ಮಾಡಿದರು. ಯಾವುದಾದರೂ ಒಂದು ಇಲಾಖೆಗೆ ಹೋಗಬೇಕಾದರೆ ಅಲ್ಲಿರುವ ಡೈರೆಕ್ಟರ್‌ರವರ ಅಪ್ಪಣೆ ಪಡೆದುಕೊಂಡು ಅನಂತರ ಅಲ್ಲಿರುವ ವಿಚಾರಗಳನ್ನು ತಿಳಿಯಬೇಕಾಗುತ್ತದೆ. ಅಲ್ಲಿರುವ ಡೈರಕ್ಟರನ್ನು ಕೇಳದೆ ಅಲ್ಲಿರುವ ಒಬ್ಬರು ಗುಮಾಸ್ತರನ್ನು ಕರೆದುಕೊಂಡು ಹೋಗಿ ನೋಡಿ ಬಂದಿದ್ದಾರೆ. ಮಾರನೆಯ ದಿವಸ ನಾನು ಇಲ್ಲಿ ಆದರ ಬಗ್ಗೆ ಸ್ಟೇಟುಮೆಂಟ್ ಕೂಡ ಇಲ್ಲಿ ಮಾಡಿದ್ದೇನೆ. ಆದರ ಮೇಲೆ ನಡೆದ ಘಟನೆಗಳನ್ನೂ ವಿವರಿಸಿದ್ದೇನೆ, ಇದರಲ್ಲೇನಾಗಿದೆ ಎಂದರೆ ಈ ಸ್ಕೀಂ ಸೆಂಟ್ರಲ್ ಗವರ್ನಮೆಂಟು ಕೊಡುತ್ತಿರುವ ಫ್ಯಾಮಿಲಿ ಪ್ಲಾನಿಂಗ್ ಸ್ಕೀಂ, ಇದು ೧೯೬೭-೬೮ನೇ ಸಾಲಿನಿಂದಲೂ ಬರುತ್ತಿದೆ ಮತ್ತು ನಮಗೆ ಔಷಧಿಗಳನ್ನು ಕೊಂಡುಕೊಳ್ಳಲಿಕ್ಕೆ ಅವರು ಕೊಡುವ ಹಣವನ್ನು ಬಳಸಿಕೊಳ್ಳಲಾಗುತ್ತಿದೆ, ಅದರಂತೆ ಇಲ್ಲಿ ಔಷಧಿಗಳನ್ನು ಕೊಂಡುಕೊಳ್ಳಲು ಇವರಿಗೆ ದುಡ್ಡು ಕೊಡಲಾಗುತ್ತಿದೆ, ಇಲ್ಲಿಯವರೆಗೆ ಯಾರೂ ತೆಗೆದುಕೊಂಡಿರಲಿಲ್ಲ. ಲ್ಯಾಪ್ಸ್ ಮಾಡಿದ್ದಾರೆ. ಅದರಮೇಲೆ ಡೆಪ್ಯುಟಿ ಡೈರೆಕ್ಟರ್ ನೋಡಿ ಇಷ್ಟೊಂದು ಹಣ ಇದೆ, ನಮಗೆ ಫರ್ನಿಚರ್ ಇಲ್ಲ ಆದುದರಿಂದ ಫರ್ನಿಚರ್ ತೆಗೆದುಕೊಳ್ಳಬೇಕು ಎಂದು ಹೇಳಿ ಸೆಂಟ್‌ಪರ್ಸೆಂಟ್ ಸೆಂಟ್ರಲ್ ಗೌವರ್ನಮೆಂಟ್ ಗ್ರಾಂಟನ್ನು ತೆಗೆದುಕೊಂಡು ಒಂದು ಒಳ್ಳೆಯ ಕೆಲಸ ಮಾಡಿದರೆ, ಅವರು ಅನ್ಯಾಯ ಮಾಡಿಬಿಟ್ಟಿದ್ದಾರೆ, ಇಲ್ಲ ಮಿನಿಸ್ಟರು ಮಾಡಿರಬೇಕು, ಇಲ್ಲಿ ಅಧಿಕಾರಿಗಳು ಮಾಡಿರಬೇಕು ಎಂದು ಹೇಳಿದರೆ ಹೇಗೆ ? ಈ ದೇಶದಲ್ಲಿ ಯಾವ ತರಹ ಆಡಳಿತ ಮಾಡುವುದು ? ಈಗ ಏನಾಗಿದೆ ಎಂದರೆ ಹೊಳೆಯ ನೀರು ಸರಾಯಿ, ಬೇವಿನ ಸೊಪ್ಪು ಭಂಗಿ ಸೊಪ್ಪು ಆದರೆ ದೇಶದಲ್ಲಿ ಆಡಳಿತ ಮಾಡುವುದು ಹೇಗೆ ? ಅಧಿಕಾರಿಗಳು ಏನಾದರೂ ತಪ್ಪು ಮಾಡಿದರೆ ಹೋಗಿ ಕೇಳಿ, ಅವರಿಗೆ ಶಿಕ್ಷೆ ಮಾಡೋಣ. ತಪ್ಪು ಮಾಡಿದವರನ್ನು ಬೆನ್ನಹಿಂದೆ ಹಾಕಿಕೊಳ್ಳಬೇಕು ಎಂದಲ್ಲ, ಶ್ರೀ ಕಾಗೋಡು ತಿಮ್ಮಪ್ಪನವರು ಬಹಳ ಒಳ್ಳೆಯವರು ಹೊಸದಾಗಿ ಇಲ್ಲಿಗೆ ಸದಸ್ಯರಾಗಿ ಬಂದಿದ್ದಾರೆ, ಅವರು ಜಾಗ್ರತೆ ಮುಂದೆ ಬರಬೇಕು. ಅವರು ಬಂದಮೇಲೆ star performance ಮಾಡಬೇಕು ಎಂದು ಅಭಿಲಾಷೆ ಉಳ್ಳವರಲ್ಲಿ ಅವರಂತೆ ನಾನು ಒಬ್ಬನಾಗಿದ್ದೇನೆ. ಈವತ್ತು ನಾವು ಇರಬಹುದು, ನಾಳೆ ಹೋಗಬಹುದು, ಇವತ್ತಿನ ದಿವಸ ವಿಚ್ ಹಂಟಿಗ್ ಶುರು ಮಾಡಿದರೆ ಇದು ಎಲ್ಲಿಗೆ ಹೋಗುತ್ತದೆ ? ನಾವು ಅಧಿಕಾರದಲ್ಲಿ ಈವೊತ್ತು ಇರಬಹುದು, ನಾಳೆ ಹೋಗಬಹುದು. ಆದುದರಿಂದ ನಾನು ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಈವತ್ತು ಅವರು ಕೇಳಿದ್ದನ್ನೆಲ್ಲಾ ಬಯಲಿಗೆ ಇಡುವುದರಲ್ಲಿ ಅಭ್ಯಂತರವಿಲ್ಲ. ಹಿಂದೆ ಒಂದು ಸಾರಿ ಕಾಗೋಡು ತಿಮ್ಮಪ್ಪನವರು ಒಂದೊಂದು ಮೆಡಿಕಲ್ ಸೀಟಿಗೆ ೩ ಸಾವಿರ ರೂಪಾಯಿ ತೆಗೆದುಕೊಳ್ಳುತ್ತೇವೆ, ಯಾವುದೋ ಕಾಗದ ಬಂದಿದೆ ಎಂದು ಹೇಳಿದರು. That was sufficiently published in the Press naturally. ಆವತ್ತಿನ ದಿವಸ ನಾನು ಹೇಳಿದ್ದೇನೆ ನನ್ನ ಕ್ಯಾರೆಕ್ಟರ್ ವಿಚಾರದಲ್ಲಿ, ನನ್ನ ಇಂಟಿಗ್ರಿಟಿ ವಿಚಾರದಲ್ಲಿ, ನನ್ನ ಆನೆಸ್ಟಿ ವಿಚಾರದಲ್ಲಿ ಯಾರಾದರೂ ತೃಣ ತೋರಿಸಿದರೆ I am prepared to get get my neck cut off. ಇನ್ನು ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲ. ಈ ಸೀಟಿನಲ್ಲಿ ನನಗೆ ಕುಳಿತುಕೊಳ್ಳತಕ್ಕ ಆಶೆ ಇಲ್ಲ. ಇದು ಕಣಿಕ. ಎಲ್ಲಿಯವರೆಗೆ ನನಗೆ ಸೇವೆ ಮಾಡತಕ್ಕ ಅವಕಾಶ ಪರಮಾತ್ಮ ಕೊಡುತ್ತಾನೆ, ಅಲ್ಲಿಯವರೆಗೆ ನಾವು ಇರಬೇಕೆ ಹೊರತು, ಮಾನ್ಯ ಸದಸ್ಯರು ಹೇಳಿದ ಹಾಗೆ ಅನಿಸಿಕೊಂಡು ಕುಳಿತುಕೊಳ್ಳತಕ್ಕ ಇಚ್ಛೆ ನನಗೆ ಎಂದೂ ಇಲ್ಲ. ವಿಷಯ ಗೊತ್ತಿರುವುದರಿಂದ ಹೇಳುತ್ತೇನೆ. ಹಳ್ಳಿಗಳಲ್ಲಿ ಹೊಸ ಹೋರಿಗಳು ಇರುತ್ತವೆ, ಅವು ಗಾಡಿಗೆ ಕಟ್ಟಿದ ಕೂಡಲೆ ಅತ್ತ ಇತ್ತ ಎಳೆದುಕೊಂಡು ಕೋಡು ಮುರಿದುಕೊಂಡುಬಿಡುತ್ತವೆ. ಹಗ್ಗ ಹಿಡಿದಿರುವ ಕೈಯಲ್ಲಿ ರಕ್ತ ಬಂದರೂ ಬಿಡುವುದಿಲ್ಲ. ನಾವು ಬಂಡಿ ಎತ್ತುಗಳ ಹಾಗೆ ಅತ್ತ ಇತ್ತ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ .—ನೆನ್ನೆ ಈ ವಿಚಾರ ಸಾಕಷ್ಟು ಚರ್ಚೆ ಆಗಿದೆ. ರೆಕಾರ್ಡ್ ಸಭೆಯ ಮುಂದೆ ಇಡುತ್ತೇನೆ ಎಂದು ಹೇಳಿದಿರಿ, ಇಟ್ಟರೆ ಇಡಿರಿ ನೋಡೋಣ. ನಾನು ಹೇಳುವುದರಲ್ಲಿ ತಪ್ಪು ಇದ್ದರೆ ವಾಪಸ್ ತೆಗೆದುಕೊಳ್ಳುತ್ತೇನೆ.

SRI H. SIDDAVEERAPPA .—As I have said the other day that there is the Estimates Committee and the Public Accounts Committee. They are two legally constituted bodies of this House, I respect them ; let them go and see anything they like. If they find anything illegal or irregular, whatever it is, I am prepare l to see that I take the punishment along with my officers. I d› not den y it.

ಶ್ರೀ ಎಚ್. ಡಿ. ದೇವೇಗೌಡ .—ಇಲಾಖೆಯೊಳಗೆ ತಪ್ಪು ಮಾಡಿದರೆ ನೀವು ಪನಿಷಮೆಂಟ್ ಏತಕ್ಕೆ ತೆಗೆದುಕೊಳ್ಳುತ್ತೀರೋ ನನಗೆ ಗೊತ್ತಾಗುವುದಿಲ್ಲ. ರೈಲ್ವೆ ಆಕ್ಸಿಡೆಂಟ್ ಆದಾದ ಲಾಲ್‌ಬಹದ್ದೂರ ಶಾಸ್ತ್ರಿಯವರು ರಾಜಿನಾಮೆ ಕೊಟ್ಟು ಹೋದರು ಯಾರೋ ಒಂದು ಕುರ್ಚಿ ಕಮ್ಮಿ ತೆಗೆದುಕೊಂಡಿದ್ದರೆ, ನನ್ನ ಕಂತ್ತಿಗೆ ಕಟ್‌ಆಫ್ ಮಾಡಿಕೊಳ್ಳುತ್ತೇನೆ ಎನ್ನುವ ಭಾಷಣ ಏತಕ್ಕೆ ? ಸಾರ್ವಜನಿಕ ಆಸ್ಪತ್ರೆಯಲ್ಲಿ ಏನಾದರೂ ಮಿಸ್ ಆಗಿದೆ ಎಂದರೆ ತಾವು ತಲೆ ಕಟ್‌ಆಫ್ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೋ ?

SRI H. SIDDAVEERAPPA .—Wherever it affects my integrity and honesty.

ಶ್ರೀ ಎಚ್. ಡಿ ದೇವೇಗೌಡ .—ತಾವು ಫರ್ನಿಚರ್ ಮನೆಗೆ ತೆಗೆದುಕೊಂಡು ಹೋಗಿದ್ದೀರಿ ಎಂದು ಹೇಳಿದ್ದಾರೆಯೋ ? What does the hon. Minister mean by that ?

ಶ್ರೀ ಕಾಗೋಡು ತಿಮ್ಮಪ್ಪ .—ರೆಕಾರ್ಡ್ ನೋಡುವುದಕ್ಕೆ ಅವಕಾಶವಿದೆಯೋ ?

ಶ್ರೀ ಡಿ. ದೇವರಾಜ ಅರಸ್ .—ಆಗಲೇ ಹೇಳಿದ್ದಾರಲ್ಲಾ.

ಶ್ರೀ ಎಚ್. ಸಿದ್ದವೀರಪ್ಪ .—ನಿನ್ನೆ ದಿವಸ ಭಾಷಣ ಪ್ರಾರಂಭವಾದಾಗ ಚರ್ಚೆಯು ಧಾಟಿ ಹೀಗೆ ಹೋಗುತ್ತದೆ ಎಂದು ನನ್ನ ಅನುಭವದಿಂದ ತಿಳಿದಿದ್ದೆ. ಮೊದಲುಸಾರಿ ಬಂದಾಗ ಹೂವಿನ ಹಾರ ಸಿಕ್ಕಿತ್ತು, ಆದರೆ ಈಸಾರಿ ನಮ್ಮ ಅಧಿಕಾರಿಗಳಿಗೆ ಹೇಳಿದ್ದೆ ಈವೊತ್ತೆಲ್ಲ ನಿಮಗೆ ಸಿಗುವುದು brickbats, you must be prepared to answer fully and thoroughly ಎಂದು ನಮ್ಮಲ್ಲಿ ಏನಾದರೂ ತಪ್ಪು ಇದ್ದರೆ ತಿದ್ದಿಕೊಳ್ಳಬೇಕು ಎಂದು ಮುನ್‌ಸೂಚಿಯಾಗಿ ಸಭೆಗೆ ಬರುವುದಕ್ಕೆ ಮುಂಚಿತವಾಗಿ ಅವರಿಗೆ ತಿಳಿಸಿದ್ದೆ. ಬಹಳ ಸಂತೋಷ. ಮಾನ್ಯ ಸದಸ್ಯರು ಎಷ್ಟು ಕಟುವಾಗಿ ಟೀಕೆ ಮಾಡಿದ್ದರೂ ನಾನು ಅದನ್ನು ಸ್ವಾಗತಿಸುತ್ತೇನೆ. ಟೀಕೆ ಮಾಡದೇ ಇದ್ದರೆ ಪ್ರಜಾಪ್ರಭುತ್ವದಲ್ಲಿ ನಮ್ಮ ತಪ್ಪುಗಳು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಅದಕ್ಕೆ ಪುರಂದರದಾಸರು ನಿಂದಕರು ಇರಬೇಕು, ಇರಬೇಕು ಜಗದೊಳಗೆ ಎಂದು ಹೇಳಿದರು. ಇಲ್ಲದಿದ್ದರೆ ಏನು ಆಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ .—ನಾಯಿಗಳ ಹಾಗೆ ಇರುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ .—ನಿಂದಕರು ಎಂದರೆ ಟೀಕೆ ಮಾಡುವವರು ಎಂದು ಅರ್ಥ. ನಿನ್ನೆ ದಿವಸ ಮಾತನಾಡುವಾಗ ಶ್ರೀಮಾನ್ ಸನಧಿಯವರು ಬಹಳ ಚೆನ್ನಾಗಿ ಮಾತನಾಡಿದರು. ಅವರು ಕವಿಗಳು, ಕವಿಗಳಾಗಿ ಬಹಳ ಚೆನ್ನಾಗಿ ಹೇಳಿದರು. ಈ ಬೋರ್ಡ್ ಆಫ್ ವಿಸಿಟರ್ಸ್ ಮಾಡುವ ಉದ್ದೇಶ ಏನು ಎಂದರೆ ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಎತ್ತಿ ತೋರಿಸಬೇಕು ಅವರ ವರದಿಯನ್ನು ನನ್ನ ಹತ್ತಿರ ಕಳುಹಿಸಿದರೆ ಮುಂದೆ ಅದರಲ್ಲಿ ಏನಾದರೂ ತಪ್ಪುಗಳಿದ್ದರೆ, ನ್ಯೂನತೆಗಳಿದ್ದರೆ ಅದನ್ನು ತಿದ್ದುತ್ತೇನೆಂದು ಹೇಳಿದ್ದೇನೆ. ಇನ್ನೊಂದು ಮಾತು ಹೇಳಿದರು. ನಾನು ಮೊದಲು ಹುಲಿಯಾಗಿದ್ದೆ, ಈಗ ಇಲಿ ಆಗಿದ್ದೇನೆಂದು. ೨೧ಳ ಜನ ಕೋವಿ ಹಿಡಿದುಕೊಂಡು ನಿಂತಾಗ ನಾವು ಏನು ಮಾಡೋಣ ? ಕೆಲವು ವಿಷಯದಲ್ಲಿ ನಾನು ಎರಡೂವರೆ ವರ್ಷಗಳಲ್ಲಿ ಇಲಾಖೆಯ ಒಳಹೊಕ್ಕು ನೋಡಿದ್ದೇನೆ. ಅದರಲ್ಲಿ ಏನೇನು ತೊಂದರೆಗಳು ಇವೆ ಎನ್ನುವುದನ್ನು ನೋಡಿದ್ದೇನೆ. ಬಹುಶಃ ಈವತ್ತಿನದಿವಸ ಯಾವ ಇಲಾಖೆಯನ್ನಾದರೂ ಹತೋಟಿಯಲ್ಲಿ ತೆಗೆದುಕೊಂಡು ಹೋಗಬಹುದು. ಆದರೆ ಈ ಇಲಾಖೆಯನ್ನು ಹತೋಟಿಗೆ ತರಬೇಕಾದರೆ ಕೆಲವು ಕಷ್ಟಗಳು ಇವೆ. ಹೀಗೆ ಹೇಳದನೆಂದು ದಯಮಾಡಿ ಯಾರು ಏನು ತಪ್ಪು ತಿಳಿದುಕೊಳ್ಳಬಾರದು ಎಂದು ತಮ್ಮಲ್ಲಿ ಅತಿ ವಿನಯದಿಂದ ಬೇಡಿಕೊಳ್ಳುತ್ತೇನೆ. ಆರು ತಿಂಗಳ ಕಾಲ

ತಾವು ಯಾರೂಕೂಡ ಟ್ರಾನ್ಸಫರ್ ವಿಚಾರದಲ್ಲಿ ಕೈಹಾಕಬೇಡಿ. ನಮಗೆ ಒಂದು ಕಾಗದವನ್ನು ಬರೆಯ ಬೇಡಿ, ಒಂದು ಫೋನ್ ಕೂಡ ಮಾಡಬೇಡಿ. ನಮ್ಮ ಇಲಾಖೆಯ ಆಡಳಿತ ಅಧಿಕಾರಿಗಳಿಗೆ ಬಿ.ಡಿ. ಕ್ಲಾಸ್ ಎರಡು ಮತ್ತು ಅದರ ಕೆಳಗಿನ ಅಧಿಕಾರಿಗಳ ಟ್ರಾನ್ಸ್‌ಫರ್ ಎಲ್ಲಾ ಅವರೇ ಮಾಡಬೇಕು ಎಂದು ಹೇಳುತ್ತೇನೆ. I have told them ten times.

ಶ್ರೀ ಎಚ್. ಡಿ. ದೇವೇಗೌಡ.—ಆರ್ಡರ್ ಇಷ್ಯೂಮಾಡಿ.

ಶ್ರೀ ಎಚ್. ಸಿದ್ದವೀರಪ್ಪ.—ಅದರಮೇಲೆ ಏನಾದರೂ ತಪ್ಪುಗಳು ಆದರೆ by way of appeal, a man may come to Government. Of course, Government canot say tha they will not look into it. ಅನೇಕ ಸಾರಿ ಟ್ರಾನ್ಸ್‌ಫರ್ ಬಗ್ಗೆ ನಾಲ್ಕು ಇಂಚ್, ಮೂರು ಇಂಚ್ ಚೀಟಿಗಳು ಬರುತ್ತವೆ. ನಾನು ಮಂತ್ರಿಯಾದಮೇಲೆ ಆಯಾಗಳು ಮತ್ತು ನರ್ಸ್‌ಗಳನ್ನು ಟ್ರಾನ್ಸ್‌ಫರ್ ಮಾಡುವುದು ಹೊರತಾಗಿ ಬೇರೆ ಏನು ಕೆಲಸ ಇದ್ದಹಾಗೆ ಕಾಣುವುದಿಲ್ಲ ಎಂದು ಇದನ್ನೆಲ್ಲ ನಾನು ಮುಖ್ಯ ಮಂತ್ರಿಗಳಲ್ಲಿ ಹೇಳಿದೆ. ಈವತ್ತಿನ ದಿವಸ ಮಾನ್ಯ ಸದಸ್ಯರಿಗೆ ಈ ಡಿಪಾರ್ಟ್‌ಮೆಂಟನ್ನು ಏನಾದರೂ ಸರಿಪಡಿಸಬೇಕು ಎಂದು ಮನಸ್ಸು ಇದ್ದರೆ ?

ಶ್ರೀ ಎಚ್. ಡಿ. ದೇವೇಗೌಡ.—ಬೇರೆ ಇಲಾಖೆ ಬಗ್ಗೆ ಕೂಡ ಏತಕ್ಕೆ ಹೇಳಬಾರದು.

ಶ್ರೀ ಎಚ್. ಸಿದ್ದವೀರಪ್ಪ.—ಟ್ರಾನ್ಸ್‌ಫರ್ಸ್ ಪ್ರಮೋಷನ್ನುಗಳು ಮುಂತಾದುವುಗಳು ಏನೇ ಇರಲಿ, ಅದರಲ್ಲಿ ತಪ್ಪು ಮಾಡಿದ್ದರೆ, if anything has gone wrong, the Hon, Members may find fault with us. Therefore, if the Hon. Members want the Department to be improved do not interfere my humble request to you all is for heaven's sake.

ಶ್ರೀ ಡಿ. ದೇವರಾಜ ಅರಸ್.—ಅಪೋಸಿಷನ್‌ನವರು ಇನ್‌ಟರ್‌ಫಿಯರ್ ಆಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಒಂದು ವೇಳೆ ಯಾವುದಾದರೂ ಅಧಿಕಾರಿ ಯಾವ ರೀತಿಯಾದ ಒತ್ತಡವನ್ನು ನಮ್ಮ ಇಲಾಖೆಯ ಅಧಿಕಾರಿಗಳ ಮೇಲಾಗಲೀ ನನ್ನ ಮೇಲಾಗಲೀ ಏನಾದರೂ ತಂದರೆ, ಆತನನ್ನು ತಕ್ಷಣ ಎನ್‌ಕ್ವೈರ್ ಆಗುವವರೆಗೆ ಸಸ್ಪೆನ್‌ಷನ್‌ನಲ್ಲಿ ಇಡಬೇಕು ಎಂದು ಈ ಸಭೆಯ ಮೂಲಕ ತಿಳಿಸುತ್ತೇನೆ. ಈಗ ಟ್ರಾನ್ಸ್‌ಫರ್‌ಗಳ ಸುಗ್ಗಿ ಪ್ರಾರಂಭ ಆಯಿತು. ಏಪ್ರಿಲ್, ಮೇ, ಮತ್ತು ಜೂನ್ ನಲ್ಲಿ ರೇಸಸ್ ಸುಗ್ಗಿ ಪ್ರಾರಂಭವಾದ ಹಾಗೆ.

ಶ್ರೀ ಎಂ. ಎಸ್. ಕೃಷ್ಣನ್.—ಟ್ರಾನ್ಸ್‌ಫರ್ಸ್ ವಿಷಯದಲ್ಲಿ ಒತ್ತಡ ತರಬೇಡಿ, ತಂದರೆ ನೋಡು ವುದಿಲ್ಲ ಎಂದು ಹೇಳುತ್ತೀರಿ. ಯಾರೇ ತೆಗೆದುಕೊಂಡು ಬರಲಿ ದೊಡ್ಡ ತನ ತೋರಿಸಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಕಾನ್‌ಫಿಡೆನ್‌ಷಿಯಲ್ ಆಗಿ ಆಫೀಸರಿಗೆ ಬರೆದಿದ್ದೇನೆ. ಅನೇಕ ಜನ ನನ್ನ ಸ್ನೇಹಿತರು ಕೇಳುತ್ತಾರೆ, ನಾನೂ ಎಂ.ಎಲ್.ಎ. ಈವೊತ್ತು ಮಂತ್ರಿಯಾಗಿರಬಹುದು, ವಿಚಾರ ಮಾಡಿ ಕಳಿಸುತ್ತೇನೆ ಎಂದು ನಾನು ಕಳುಹಿಸಿದಾಕ್ಷಣ ನಾನು ಕಳುಹಿಸಿದ ರೀತಿ ಆರ್ಡರ್ ಮಾಡ ಬೇಕು ಎಂದು ಅಲ್ಲ, ನಿಮ್ಮ ಡಿಸ್‌ಕ್ರಿಷನ್ ಉಪಯೋಗಿಸಿ ಕೆಲಸ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಭಾಷಿತ ಬೇಡ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಏನಾದರೂ ಕಾಗದ ಬರೆದರೆ ಕಳಿಸಬೇಡಿ ಎಂದು ಹೇಳಿ. I will simply say that they are filed in my office. ಅದು ಸೌಜನ್ಯ ಆಗಲಾರದು. You are all responsible MLL. As belonging to a sovereign body which governs the State. If there is anything I can only ask the Director to look into it. If the Hon. Members say that he need not look into it, I do not bother.

Sri M. S. KRISHNAN.—Let the M.L.As go to the concerned Officer if he has a fit case.

Sri H. SIDDAVEERAPPA.—That is my desire.

ಏಪ್ರಿಲ್, ಮೇನಲ್ಲಿ ಟ್ರಾನ್ಸ್‌ಫರ್ ಸುಗ್ಗಿ ಬಂತು. ಯಾವ ಹೋಟೆಲಿನಲ್ಲಿ ನೋಡಿ, ಡಾಕ್ಟರುಗಳು ಇರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ತಾವು ಆ ಪಾಲಿಸಿ ಜಾರಿಗೆ ತೆಗೆದುಕೊಂಡು ಬಂದರೆ ಗಟ್ಟಿಯಾಗಿ ಕಂಟ್ರೋಲ್ ಮಾಡಿಕೊಳ್ಳಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಹಾಗೇನಾದರೂ ತಪ್ಪು ಆಗಿದೆ ಎಂದು ಕಂಡು ಬಂದರೆ ಅವತ್ತೇ ನನ್ನ ಕೈ ಹಿಡಿದುಕೊಳ್ಳಿರಿ. I have taken an oath as it is within myself after having heard yesterday so many things. ಅದಲ್ಲದೆ ಶ್ರೀಮಾನ್ ಪುಟ್ಟಸ್ವಾಮಯ್ಯನವರು ನನನು ಅಧಿಮೂರ್ತಿಗೆ ಹೋಲಿಸಿದ ಮೇಲೆ ನಾನು ಅಧಿಮೂರ್ತಿಯಲ್ಲ ಎನ್ನತಕ್ಕ ಮಾನಸ್ಸು ಬಂದಿದೆ. ಈವತ್ತಿನ್ನ ದಿವಸ ನಾನು ಇರತಕ್ಕ ಇಲಾಖೆ ಸಾರ್ವಜನಿಕವಾದುದು. ಸಾರ್ವಜನಿಕ ಕಾಂಟ್ಯಾಕ್ಟ್ ಇರತಕ್ಕದ್ದು ಬಂದವರ ಜೊತೆಗೆ ಮಾತನಾಡಿದರೆ, ಅವರೆಲ್ಲರೂ ಬಂದರೆ ತಪ್ಪು ಇಲ್ಲ ಎನ್ನುವ ದೃಷ್ಟಿಯಿಂದ ಮಾತನಾಡ ತಕ್ಕವನಿಗೆ ನಾವು ಏನೋ ಮಾಡಿದ್ದೇವೆ ಎಂದು ತಿಳಿದುಕೊಳ್ಳತಕ್ಕದ್ದು ಸರಿ ಇಲ್ಲ ಎಂದು ನಿಮ್ಮಲ್ಲಿ ನನ್ನ ಸವಿನಯ ಪ್ರಾರ್ಥನೆ. ಈವತ್ತಿನ ದಿವಸ ಅಧಿಕಾರಿಗಳಾದರೂ ಅಷ್ಟೆ ಡೈರೆಕ್ಟರ್‌ರವರಿಗೆ ಹೇಳಿದ್ದೇನೆ ಯಾರಾದರೂ ಆ ರೀತಿ ಒತ್ತಡ ತಂದದ್ದು ಗಮನಕ್ಕೆ ಬಂದರೆ, ಸರ್ಕಾರಕ್ಕೆ ತಿಳಿಸಬೇಕು ಮತ್ತು ಕೂಡಲೇ ಸಸ್ಪೆನ್‌ಷನ್‌ನಲ್ಲಿ ಇಡಬೇಕು ಎಂದು. For sometime let us see the whole thing is brought out of chaos. To-day it is chaotic. ಅದರಲ್ಲಿ ಅನುಮಾನ ಇಲ್ಲ. ನರ್ಸ್‌ಗಳು ಟ್ರಾನ್ಸ್‌ಫರ್ ಬಗ್ಗೆ ಮಿನಿಸ್ಟರ್ ಹತ್ತಿರ ಬರುತ್ತಾರೆ. ನಾನು ಹೇಳಿದ್ದನ್ನು ದಯಮಾಡಿ ನಡೆಸಿಕೊಟ್ಟರೆ ಬಹುಶಃ I will be able to control the Department to some extent. ಅನೇಕರು ಅನೇಕ ರೀತಿಯಿಂದ ನಮ್ಮಲ್ಲಿ ತಮ್ಮ ಸ್ವಾರ್ಥಕ್ಕಾಗಿ ಹೇಳಲಿಕ್ಕೆ ಬರುತ್ತಾರೆ. ಈವತ್ತಿನ ದಿವಸ ಪ್ರಮೋಷನ್ ಮಾಡಲಿಕ್ಕೆ ಒಂದು ಕಮಿಟಿ ಇದೆ. We have constituted a Committee called the Promotion Committee. ಏನಾದರೂ ಪಿ.ಎಸ್.ಸಿ. ಅಪಾಯಿಂಟ್‌ಮೆಂಟ್ ಮಾಡುವುದಾದರೆ ಅವರು ಮಾಡುತ್ತಾರೆ. ಪ್ರಮೋಷನ್ ಪ್ರಮೋಷನ್ ಮಾಡುವುದಾದರೆ ಕಮಿಟಿ ಅವರು ಮಾಡುತ್ತಾರೆ. There is not a single instances I may tell you where I have disagreed with the recommendation of the Promotion Committe. They will have seen it.

ಒಂದು ಡಿಪಾರ್ಟ್‌ಮೆಂಟಿನಲ್ಲಿ ಕಾರಣಾಂತರಗಳಿಂದ ಡಿಪಾರ್ಟ್‌ಮೆಂಟ್ ಆಫ್ ಮೆಡಿಸಿನ್‌ನಲ್ಲಿ ಸೀನಿಯಾರಿಟಿ ಲಿಸ್ಟ್ ಆಗದೆ ಹಾಗೆಯೇ ಉಳಿದಿದೆ. ಅದು ಕಠಿಣವಾಗಿರುತ್ತದೆ. ಆದುದರಿಂದ ಅದನ್ನು ಮುಖ್ಯಮಂತ್ರಿಗಳು ನೋಡುತ್ತಾರೆ. ಅವರು ನೋಡಿಬಿಟ್ಟು ಅದನ್ನು ಯಾವ ರೀತಿ ಮಾಡಬೇಕೋ ಆ ರೀತಿ ಮಾಡಲಾಗುತ್ತದೆ. ಕೆಲವು ಡಾಕ್ಟರುಗಳು ಇದ್ದಾರೆ. ಅವರಿಗೆ ಬೇರೆ ಕೆಲಸವೇನೂ ಇರುವುದಿಲ್ಲ. ಲೆಜಿಸ್ಲೇಚರ್ ಸೆಷನ್ ಶುರುವಾಯಿತು ಎಂದರೆ ಎಲ್ಲಾ ಸದಸ್ಯರನ್ನೂ ಸುತ್ತುವರಿಯುತ್ತಾರೆ. ನಮ್ಮ ಸ್ನೇಹಿತರಿಗೆ ಗೊತ್ತಿರುವುದಿಲ್ಲ. ಲಿಂಗಾಯಿತರು ಮೆಂಬರ್ ಇದ್ದಾರೆ. ಲಿಂಗಾಯಿತರಿಗೆ ಅನ್ಯಾಯ ಮಾಡಿದ್ದಾರೆ ಎಂದು ಹೇಳುತ್ತಾರೆ, ಒಕ್ಕಲಿಗ ಸದಸ್ಯರ ಹತ್ತಿರ ಒಕ್ಕಲಿಗರಿಗೆ ಅನ್ಯಾಯ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದಸ್ಯರ ಹತ್ತಿರ ಒಕ್ಕಲಿಗರು ಮತ್ತು ಲಿಂಗಾಯಿತರು ಅನ್ಯಾಯ ಮಾಡಿದ್ದಾರೆ ಎಂದು ಹೇಳುತ್ತಾರೆ. ಇದು ಒಂದು ಕಾನ್ಸರ್ ಗ್ರೋತ್ ಆಗಿದೆ. ನಮ್ಮ ದೇಶದಲ್ಲಿ ಇದೇ ರೀತಿ ನಾವು ಹೋದರೆ, ನಾವು ಎಂದೆಂದೂ ಪ್ರಜಾ ಪ್ರಭುತ್ವವನ್ನು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಗಳಿಸಿಕೊಂಡು ಹೋಗುವುದಕ್ಕೂ ಆಗುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.— ಜಾತಿ ಪ್ರಶ್ನೆಗೆ ಅಂಟು ಹಾಕುವವರು ಹಾಕಲಿ. ಅದು ಬೇರೆ ವಿಷಯ. ಪ್ರಮೋಷನ್‌ಗೆ ಒಂದು ಕಮಿಟಿ ಇದೆ ಎಂದು ಹೇಳಿದ್ದೀರಿ. I myself am interested in one case. The Chief Minister knows the case. ದೇವೇಂದ್ರ ಕುಮಾರ್ ಎನ್ನುವವರು ಕೆಲಸಕ್ಕೆ ಸೇರಿ ಈಗ ೨೨ ವರ್ಷವಾಗಿದೆ. ಯಾವ ಸರ್ಕಾರವೇ ತಪ್ಪು ಮಾಡಲಿ ಹಿಂದಿನವರು ಮಾಡಿದ್ದಾರೋ ಏನೋ, ಗೊತ್ತಿಲ್ಲ. ೨೨ ವರ್ಷ ಕೆಲಸ ಮಾಡಿದ ಮೇಲೆ ಈವತ್ತಿನ ದಿವಸವೂ ನಿಮ್ಮ ಕಮಿಟಿಯವರು ಅದನ್ನು ಸೆಟ್‌ರೈಟ್ ಮಾಡಿಲ್ಲ. ಅವರ ಕೆಳಗೆ ಓದಿದಂಥ ಹುಡುಗರನ್ನು ಪ್ರೊಫೆಸರ್ ಆಗಿ ಸೆಲೆಕ್ಷನ್ ಮಾಡಿದ್ದೀರಿ. ನಾವು ಹೇಳಿದರೆ ತಪ್ಪಾಗುತ್ತದೆ. ಇದನ್ನು ಅಸೆಂಬ್ಲಿಯಲ್ಲಿ ತೆಗೆದುಕೊಂಡು ಚರ್ಚೆ ಮಾಡಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೆ? ಕೇಸ್ ಆರ್ಗ್ಯು ಮಾಡಿದ ಹಾಗೆ ಮಾಡುವುದಕ್ಕೆ ಆಗುತ್ತದೆಯೆ? Is this the way the Screening Committe should

(ಶ್ರೀ ಎಚ್. ಡಿ. ದೇವೇಗೌಡ)

function? He belongs to Jain Community. ಅವರು ಒಕ್ಕಲಿಗರಲ್ಲ, ಲಿಂಗಾಯಿತರಲ್ಲ. ಅನ್ಯಾಯ ನಡೆದಿದೆ ಎಂದು ಗೊತ್ತಾದಾಗ ನಾನು ಆ ವಿಚಾರ ಹೇಳಿದೆ. ಗ್ರೋಸ್ ಇನ್‌ಜಸ್ಟೀಸ್ ಆದಾಗ ಕೂಡ ಕಮಿಟಿಯವರು ಅದರ ಬಗ್ಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡಿದ್ದರೆ ಯಾರೂ ಶಾಸಕರ ಹತ್ತಿರ ಬರುತ್ತಿರಲಿಲ್ಲ. We are not men for taking any vakalth

ಶ್ರೀ ಡಿ. ದೇವರಾಜ ಅರಸ್. — ಈ ತರಹ ಮಾಡಿರತಕ್ಕದ್ದು ಇವತ್ತು ಅಲ್ಲ. ೧೫-೨೦ ವರ್ಷಗಳಿಂದ ಹೀಗೆ ನಡೆಯುತ್ತಾ ಬಂದಿದೆ. I would like to inform the House in this connection that the Minister conceraed is taking up this case and finally give a shape and give a finality to all these things. In that connection all these matters are coming up. Let me inform the House these questions whether you call it injustce or irregular have been perpetrated and I am compelled to say this that this is not now but it is from ages.

ಶ್ರೀ ಎಚ್. ಡಿ. ದೇವೇಗೌಡ — ಒಂದೊಂದು ಮಿನಿಸ್ಟ್ರಿ ಒಂದೊಂದು ರೀತಿ ಸೀನಿಯಾರಿಟಿ ಪಟ್ಟಿ ಮಾಡಿದ್ದಾರೆ. ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡಬಹುದು. I can go to any length to argue case. ಅವಕ್ಕೆ ಫೈನಲ್ ಶೇಪ್ ಕೊಡಿ ಎಂದು ಹೇಳುತ್ತೇನೆ.

SRI D. DEVARAJ URS.— That is why we have been trying our best to give a finality and a shape to it. I can assure the House we have absolutely no intention of doing bad to any one merely because of his caste. It is our lot to see that all things that have gone wrong are set right now.

ಶ್ರೀ ಎಚ್. ಸಿದ್ದವೀರಪ್ಪ — ಈ ಡಿಪಾರ್ಟ್‌ಮೆಂಟ್ ಬಗ್ಗ ಆಗಲೇ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದರ ಮೇಲೆ ಹೆಚ್ಚಿಗೆ ಹೇಳಬೇಕಾದುದು ಇಲ್ಲ. ಈಗ ಯಾರೇ ಆಗಲಿ ಯಾವ ಸಣ್ಣ ಆಫೀಸರೇ ಆಗಲಿ ನೇರವಾಗಿ ಸರ್ಕಾರಕ್ಕೆ ಅರ್ಜಿ ಹಾಕಿಕೊಳ್ಳುವ ಅಧಿಕಾರ್ರ ಇದೆ. ಶ್ರೀ ದೇವೇಂದ್ರ ಕುಮಾರ್ ಅವರ ಕೇಸ್‌ನಲ್ಲಿ ಬಹಳ ವರ್ಷಗಳಿಂದ ಏನು ಮಾಡಲಿಲ್ಲ ಎಂದು ಮನವರಿಕೆಯಾಗಿದೆ. "You have been delaying it, it is not corract. You immediately appoint him even on in-charge basis and see his case is decided early." ಎಂದು ಬರೆದಿದ್ದೇನೆ. ತಮಗೆ ಹೇಳಬೇಕು ಎನ್ನುವುದಾದರೆ ಲಿಸ್ಟ್ ಕೊಡುತ್ತೇನೆ, ಈ ಸರ್ಕಾರ ಬಂದ ಮೇಲೆ ಎಷ್ಟು ಜನಗಳಿಗೆ ಪ್ರಮೋಷನ್ ಕೊಟ್ಟಿದ್ದೇವೆ, ಎಷ್ಟು ಜನಗಳಿಗೆ ನಾವು ಸಹಾಯ ಮಾಡಿದ್ದೇವೆ ಎಂಬುದನ್ನು ತಾವು ನೋಡಬಹುದು. ಈ ಒಂದು ಕೇಸಿನಲ್ಲಿ ಪೇಟೆಂಟ್ ಇನ್‌ಜಸ್ಟೀಸ್ ಇದೆ, ಇಲ್ಲ ಎಂದು ಹೇಳುವುದಿಲ್ಲ. ನನ್ನ ಮಟ್ಟಿಗೆ ಹೇಳಬೇಕು ಎನ್ನುವುದಾದರೆ ಮಾನ್ಯ ಸ್ನೇಹಿತರಾದ ತಿಮ್ಮಪ್ಪನವರು ಹೇಳಿದರು. ನನಗೆ ಇರುವುದು ಒಬ್ಬನೇ ಮಗ, ಡಾಕ್ಟರ್ ಇನ್ನೊಬ್ಬರು ಸಂಬಂಧಿಕರು ಯಾರೂ ಇಲ್ಲ. ಎಲ್ಲಿ ನೋಡಿದರೂ ಬಾಕಿಯವರೆಲ್ಲಾ ಹೊಲ ಉಳುವವರು, ನೇಗಿಲು ಹಿಡಿಯುವವರು. ಈವತ್ತಿನ ದಿವಸ ನಾನು ಯಾರ ವಿಚಾರದಲ್ಲೂ ಏನೂ ಹೇಳಲಿಲ್ಲ. ನನ್ನ ಮಗನ ವಿಚಾರ ಬಂದಾಗ ನಾನು He happens to be my son, I do not want to pass any order, let it go to the Chief Minister ಎಂದು ಹೇಳಿದೆ. Let it be promotion or whatever it is. I have sent the file to the Chief Minister. ಇವತ್ತು ನಮಗೆ ಗೊತ್ತಿದೆ. ನಮ್ಮನ್ನು ನೋಡತಕ್ಕಂಥ ಕಣ್ಣುಗಳ ಸಹಸ್ರ ಇವೆ, ಒಂದೆರಡಲ್ಲ. ಆದುದರಿಂದ ನಾವು ಎಷ್ಟು ಹುಷಾರಿಯಿಂದ ಹೋಗಬೇಕೋ ಅಷ್ಟು ಹುಷಾರಿಯಿಂದ ಹೋಗುತ್ತಿದ್ದೇವೆ ಅತಿ ಹುಷಾರಿಯಿಂದ ಹೋಗುತ್ತಿದ್ದೇವೆ ಹೆಚ್ಚು ಹೆಚ್ಚಾಗಿ ಹುಷಾರಿಯಿಂದ ಹೋಗುತ್ತಿದ್ದೇವೆ. ಈಮೇಲೆ ಡಾಕ್ಟರ್ ಎನಿದ್ದಾರೆ, ಅವರು ವೆಸ್ಟೆಡ್ ಇಂಟರೆಸ್ಟ್ ಮಾಡಿಕೊಂಡು ಬೆಂಗಳೂರು, ಮೈಸೂರಿಗೆ ಬರುತ್ತಾರೆ. ಇವತ್ತು ನನಗೆ ಬಂದಿರುವ ಕಷ್ಟ, ಬಳ್ಳಾರಿ ಮೆಡಿಕಲ್ ಕಾಲೇಜ್ ಡೀ ರೆಕಗನೈಸ್ ಆಗಿದೆ ಎಂದು ಬಂದಿರಬೇಕಾದರೆ ಅಪಾಯಿಂಟ್ ಮಾಡಿದರೆ ಅಲ್ಲಿಗೆ ಒಬ್ಬರೂ ಹೋಗುವುದಿಲ್ಲ ಭೂಪರು. ಇವತ್ತು ಏನಾಗಿದೆಯೆಂದರೆ, ಪ್ರಮೋಷನ್ ಕೊಟ್ಟರೆ, ಪ್ರಮೋಷನ್ ಗೋಸ್ಕರ ೮ ದಿವಸ ಹೋಗಿ ರಜಾ ಹಾಕಿದು, ಮನೆಗೆ ಬಂದು ಕುಳಿತುಕೊಳ್ಳುತ್ತಾರೆ.

ಪೋಸ್ಟ್ ಮಾಡಿದ ಮೇಲೆ ೧೫ ದಿವಸದೊಳಗೆ ಹೋಗದೇ ಇದ್ದರೆ, ಡಿಸಿಪ್ಲನರಿ ಆಕ್ಷನ್ ತೆಗೆದುಕೊಳ್ಳ ಬೇಕು, ರಜಾ ತೆಗೆದುಕೊಳ್ಳಕೂಡದು ಎಂದು ನಿರ್ದೇಶನ ಕೊಟ್ಟಿದ್ದೇನೆ. ಯಾರು ಎಲ್ಲೇ ಹೋಗಲಿ, ನನ್ನ ಮುತ್ತಾತನಿಗೆ ಖಾಯಿಲೆ, ನನ್ನ ಅಮ್ಮನಿಗೆ ಖಾಯಿಲೆ, ನನ್ನ ಹೆಂಡತಿಗೆ ಖಾಯಿಲೆ, ಎಂದು ಎಲ್ಲಿಗೂ ಹೋಗುವುದಿಲ್ಲ. ಬೆಂಗಳೂರು, ಮೈಸೂರಿಗೆ ಹೋಗುತ್ತಾರೆ, ಬಹಳ ಹೆಚ್ಚು ಎಂದರೆ ಹುಬ್ಬಳ್ಳಿಗೆ ಹೋಗುತ್ತಾರೆ ಈ ರೀತಿ ಪರಿಸ್ಥಿತಿ ಇರುವುದರಿಂದ ಡಾಕ್ಟರುಗಳ ಸೇವೆಯನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. I can understand the lady doctors saying it if we post them to villages. ಅದಕ್ಕೆ ಕಾರಣ ಕೆಲವು ಕಡೆ ಇನೂ ಸರಿಯಾದ ಕ್ವಾರ್ಟರ್ಸ್ ಕೊಟ್ಟಿಲ್ಲ, ವಾಸದ ಮನೆಗಳು ಇಲ್ಲ, ಆ ಸೌಕರ್ಯಗಳನ್ನೆಲ್ಲಾ ಮಾಡಬೇಕು ಎಂದು ಪ್ರಾರಂಭ ಮಾಡಿದೆವು ಆದರೆ ವಾಸದ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗದೇ ಹಾಗೆ ನಿಂತು ಹೋಯಿತು. ಡಾಕ್ಟರ್‌ಗಳಲ್ಲಿ ಇರುವಷ್ಟು ಸವತಿ ಮತ್ಸರ ಬಹುಶಃ ಇನ್ಯಾವ ಡಿಪಾರ್ಟ್‌ಮೆಂಟ್‌ನಲ್ಲೂ ಇಲ್ಲ ಎಂದು ಕಾಣುತ್ತೆ. ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ.

2-00 P.M.

ಶ್ರೀ ಕೋಣಂದೂರು ಲಿಂಗಪ್ಪ.— ನಿಮ್ಮಲಿ ಇದ್ದಹಾಗೆ.

ಶ್ರೀ ಎಚ್. ಸಿದ್ದವೀರಪ್ಪ.— ಮಂತ್ರಿಗಳಲ್ಲೇನಾದರೂ ಇದ್ದರೆ, ಅದು ಒಳಗೆ ಮಾತ್ರ, ಹೊರಗೆ ತೋರಿಸಿಕೊಳ್ಳುವುದಿಲ್ಲ. ಇವತ್ತಿನ ದಿವಸ ಡಾಕ್ಟರುಗಳಲ್ಲಿ ಭ್ರಾತೃತ್ವ ಇರಬೇಕು.

ಶ್ರೀ ಕೋಣಂದೂರು ಲಿಂಗಪ್ಪ.— ಸತ್ಯ ಹೇಳಿದ್ದು ಇದು ಒಂದೇ ಒಂದು ಮಾತು.

SRI H. SIDDAVEERAPPA.— All human beings are not the same. They must develop a kind of a fraternity-comradery-among theselves. ಡಾಕ್ಟರುಗಳಿಗೆ ಕೊಡತಕ್ಕ ಸಂಬಳ, ಅವರಿಗೆ ಕೊಡತಕ್ಕ ಸಂಭಾವನೆ, ಅವರಿಗೆ ಮೇಲೆ ಬರತಕ್ಕ ಸಂಭಾವನೆ, ನೆನೆಸಿಕೊಂಡರೆ ಅವರು ಇದೇ ರೀತಿ ಹೋದರೆ ಪರಮಾತ್ಮ ಅವರಿಗೆ ಯಮಲೋಕದಲ್ಲಿ ಬೇರೆ ನರಕ ಸ್ಥಾಪನೆ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಯಮಲೋಕ ನೋಡಿ ಬಂದಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.— ಕನಸಿನಲ್ಲಿ ನೋಡಿದ್ದೇನೆ. ಇವತ್ತು ಏನಾಗಿದೆಯೆಂದರೆ, ಕೆಲವರು ನನ್ನ ಹತ್ತಿರ ಬರುತ್ತಾರೆ I warn them. ಇವತ್ತು ಜನ ಹುಷಾರಾಗಿದ್ದಾರೆ. ಎಚ್ಚೆತ್ತು ಕಣ್ಣು ಬಿಟ್ಟು ನೋಡುತ್ತಾ ಇದ್ದಾರೆ ಜನ ಸುಮ್ಮನೆ ಇರುತ್ತಾರೆ ಎನ್ನುವ ಮನೋಭಾವನೆ ಇವತ್ತು ಎಲ್ಲರೂ ಬಿಡಬೇಕು. ಮೊನ್ನೆ ಯಾವುದೋ ಒಂದು ಊರಿನಲ್ಲಿ ಡಾಕ್ಟರ್ ಅನ್ಯಾಯ ಮಾಡಿದ್ದಾರೆ ಎಂದು ಪೀಪಲ್ಸ್ ಕೋರ್ಟ್‌ಮಾಡಿ ೧೦೦ ರೂಪಾಯಿ ದಂಡ ಹಾಕಿ ಇನ್ನು ಮೇಲೆ ಇಥಾದ್ದು ಮಾಡಬೇಡಿ ಎಂದು ಹೇಳಿರು ವುದನ್ನು ನಾನು ಪತ್ರಿಕೆಯಲ್ಲಿ ನೋಡಿದೆ ಇವತ್ತಿನ ದಿವಸ ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಡಾಕ್ಟರ್ಸ್ ಲಂಚ ತೆಗೆದುಕೊಂಡರೆ, ಅದಕ್ಕೆ ಕಾರಣ, ನೇರವಾಗಿ ಕೊಡುವವರು. ಯಾರು ಲಂಚ ಕೊಡು ತ್ತಾರೆ, ಅವರೇ ನೇರವಾಗಿ ಕಾರಣರು. ಅವರು ಇವತ್ತು ನಿರ್ಭಯದಿಂದ, ಯಾವ ರೀತಿ ತಡೆ ಇಲ್ಲದೆ ಕೆಲಸ ಮಾಡುವುದಕ್ಕೆ ಶುರುಮಾಡಿಬಿಟ್ಟರೆ ಯಾವ ತೊಂದರೆಯೂ ಇರುವುದಿಲ್ಲ. ಆದರೆ ಆ ರೀತಿ ಮಾಡದೇ ಇರುವುದಕ್ಕೆ ಬೇಕಾದಷ್ಟು ಕಾರಣಗಳು ಇವೆ. ಇವತ್ತು ಆಸ್ಪತ್ರೆಗೆ ಹೋಗಿ, ಆಸ್ಪತ್ರೆಯಲ್ಲಿರುವ ಬೆನಿಫಿಟ್‌ನ್ನು ಯಾರು ಉಪಯೋಗಿಸುವವರು? ಮಂತ್ರಿಗಳು, ಶಾಸಕರು, ಅಧಿಕಾರಿಗಳು. ನಮಗೆ ಉಪಚಾರ ಸೇವೆ ಬೇಕು. ನಾನು ಆಸ್ಪತ್ರೆಯಿಂದ ಮೂರು ಕಾಸಿನ ಔಷಧಿ ತೆಗೆದುಕೊಂಡಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.— channalise ಮಾಡಬೇಡಿ. ಹಾಸ್ಪಿಟಲ್ ಬೆನಿಫಿಟ್ಸ್ ಏನಿದೆ ಅದನ್ನು ಶಾಸಕರು ಏನೇನೂ ತೆಗೆದುಕೊಂಡಿಲ್ಲ, ಬಿಲ್ಲೂ ಮಾಡಿಲ್ಲ.

SRI H. SIDDAVEERAPPA.— We must set an example to other people. ಇವತ್ತಿನ ದಿವಸ ನಮಗೆ ಏನು ಬೆನಿಫಿಟ್ಸ್ ಇದೆ, ಡಾಕ್ಟರ್ಸ್‌ನ್ನು ಕೇಳಿದ್ದರಲ್ಲಿ ಅನೇಕ ಸಾರಿ ಕೆಲವರು ಔಷಧಿಯನ್ನು ತಮಗೆ ಬೇಕಾಗಿರುವುದಕ್ಕಿಂತ ಹೆಚ್ಚಿಗೆ ತೆಗೆದುಕೊಂಡಿರತಕ್ಕದ್ದು ಇದೆ. ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಇದರಿಂದ ಸುಮಾರು ೨,೦೦೦ ರೂಪಾಯಿ ಮೇಲೆ ಖರ್ಚು ಇದೆ. We must setan example to other pelple. We the people's representatives, must set an example.

SRI H. D. DEVEGOWDA.— In the interest of the general public ಯಾವ ಯಾವ ಎಂ.ಎಲ್.ಎ., ಯಾವ ಯಾವ ಮಂತ್ರಿ ಎಷ್ಟು ಮೆಡಿಕಲ್ ಬಿಲ್ ಮಾಡಿದ್ದಾರೆ, ಎಂಬುದನ್ನು ಸಭೆಯ ಮುಂದೆ ಇಡಿ, ಗೊತ್ತಾಗಲಿ. ಯಾರು ಯಾರು ಟೋಪಿ ಹಾಕಿ ಸುಳ್ಳು, ಸುಳ್ಳು ಲೆಕ್ಕ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಕೆ.ಎನ್. ವೀರಪ್ಪಗೌಡ.— ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಯಾರ್ಯಾರು ಎಷ್ಟೆಷ್ಟು ತಿಂಗಳಿಗೆ ಡ್ರಾ ಮಾಡಿದ್ದಾರೆ ಎಂದು ಕೊಟ್ಟರೆ ಒಳ್ಳೆಯದು.

ಶ್ರೀ ಕೋಣಂದೂರು ಲಿಂಗಪ್ಪ. — ಮಾನ್ಯ ದೇವೇಗೌಡರು, ವೀರಪ್ಪಗೌಡರು ಹೇಳಿದ್ದನ್ನು ನಾನು ಸಮರ್ಥನೆ ಮಾಡುತ್ತೇನೆ. ಯಾವ ಯಾವ ಶಾಸಕರು ಎಷ್ಟೆಷ್ಟು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಸಭೆಯ ಮುಂದೆ ಇಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.— ವೈಯುಕ್ತಿಕವಾಗಿ ಯಾರ ಮೇಲೂ ಆಪಾದನೆ ಮಾಡಿಲ್ಲ. ನಾನು ಹೇಳಿದ ಉದ್ದೇಶ ಇಷ್ಟು let us set an example. ಬಡ ಬೋರೇಗೌಡನ ಹೆಸರಿನಲ್ಲಿ ಮಂತ್ರಿಗಳು ಶಾಸಕರು, ಅಧಿಕಾರಿಗಳು ನಾವು ಯಾರೂ ಉಚಿತವಾಗಿ ಔಷಧಿ ತೆಗೆದು ಕೊಳ್ಳುವುದಿಲ್ಲ, ಬಿಡಿ.

ಶ್ರೀ ಎಚ್.ಡಿ. ದೇವೇಗೌಡ.— ಡಾಕ್ಟರುಗಳ ಸಮೂಹದಲ್ಲಿ ಒಳ್ಳೆಯ ಡಾಕ್ಟರುಗಳು ಇದ್ದಾರೇ ಕೆಟ್ಟ ಡಾಕ್ಟರುಗಳೂ ಇದ್ದಾರೆ. ಅದನ್ನು ಹೇಳುವುದು ಬೇಡ. Irrespective of caste and creed ಯಾರು ತಪ್ಪು ಮಾಡುತ್ತಾರೆ, ಅವರನ್ನು ಪತ್ತೆ ಹಚ್ಚಿ ಅಂಥ ಅಧಿಕಾರಿಗಳು ಯಾರಾದರೂ ಇದ್ದರೆ, ಅವರನ್ನು ಕತ್ತರಿಸಲಿಕ್ಕೆ ಪ್ರಯತ್ನ ಮಾಡಿ. ಕೆಟ್ಟವರನ್ನು ಸರ್ಜಿಕಲ್ ಆಪರೇಷನ್ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಚ್. ಸಿದ್ದವೀರಪ್ಪ.— ನೂರು ಕೇಸುಗಳನ್ನು ತನಿಖೆ ಮಾಡಿದರೆ ಅಲಿಗೇಷನ್ಸ್ ಫಾಲ್ಸ್ ಎಂದು ರಿಪೋರ್ಟ್ ಬರುತ್ತದೆ. ಯಾರು ಫಿರ್ಯಾದಿ ಕೊಡುತ್ತಾರೆ, ಫಿರ್ಯಾದಿ ಕೊಟ್ಟ ಆ ಮನುಷ್ಯನೆ, ವಿಚಾರಣೆ ಮಾಡುವ ಜಾಗಕ್ಕೆ ಹೋಗುವುದಿಲ್ಲ. ಒಂದು ವೇಳೆ ಹೋದರೂ ಫಿರ್ಯಾದಿ ಕೊಟ್ಟವನು ನನ್ನಿಂದ ಯಾರೋ ಏನೋ ಬರೆಸಿಕೊಂಡರು ಸ್ವಾಮಿ ಎಂದು ಹೇಳುತ್ತಾನೆ. ಅನೇಕ ಮೂಕರ್ಜಿಗಳು ಬರುತ್ತವೆ. When the allegations are not substantiated and when they are not proved ಅಂಥವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ we want moral force of the people.

ಶ್ರೀ ಎಚ್.ಡಿ. ದೇವೇಗೌಡ.— ಅರ್ಜಿ ಯಾರು ಕೊಡುತ್ತಾರೆ, ಅವರಿಗೆ ವಿಜಿಲೆನ್ಸ್ ಕಮಿಷನ್‌ರವರು ಒಂದು ನೋಟೀಸ್ ಕಳುಹಿಸುತ್ತಾರೆ, ಅವರ ಎವಿಡೆನ್ಸ್ ಕೊಡಲು ವಿಜಿಲೆನ್ಸ್ ಕಮೀಷನ್‌ರವರ ಮುಂದೆ ಅಪಿಯರ್ ಆಗಬೇಕಾಗುತ್ತದೆ. ಯಾರ ಮೇಲೆ ಅರ್ಜಿ ಕೊಟ್ಟಿರುತ್ತಾರೆ ಅವರಿಗೆ ೫-೬ ಸಾವಿರ ಲಾಭವಾಗಿರುವುದರಿಂದ ಅರ್ಜಿ ಕೊಟ್ಟವರಿಗೆ ಇನ್ನೂರು, ಮುನ್ನೂರು ರೂಪಾಯಿಗಳನ್ನು ಕೊಟ್ಟು ಅವರನ್ನು ಸರಿಮಾಡಿಕೊಂಡುಬಿಡುತ್ತಾರೆ. ನಿಮಗೆ ಅದರ ಕಥೆ ಗೊತ್ತಿಲ್ಲ, ಅದರ ಅನುಭವವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.— ನನಗೆ ಗೊತ್ತಿಲ್ಲ. ಇವತ್ತು ಅದನ್ನು ಕಂಡುಹಿಡಿಯಬೇಕಾದರೆ ಸಾರ್ವಜನಿಕರ ಸಹಾಯ ಇಲ್ಲದೆ ಆಗುವುದಿಲ್ಲ. We cannot put down the corruption. That is why we have appointed these Committees. Let them examine it, let them look into it, let them study objectively. I have also said I would faithfully carry out whatever recommendations made by the Committee.

ಶ್ರೀ ಕೆ.ಎನ್. ವೀರಪ್ಪಗೌಡ.— ತಾವು ಹೇಳುತ್ತಾ ಇರುವುದನ್ನು ಒಪ್ಪುತ್ತೇವೆ. ನೀವು ಟ್ರಾನ್ಸ್‌ಫರ್ ಮಾಡುತ್ತೀರಿ ಮಾಡಿದಾಗ, ೩-೪ ತಿಂಗಳು ರಜೆ ತೆಗೆದುಕೊಂಡು ಎಂ.ಎಲ್.ಎ ಹಿಂದುಗಡೆ ಓಡಾಡುತ್ತಾರೆ. ಅಂಥವರನ್ನು ಮನೆಗೆ ಕಳುಹಿಸಿ ಕೆಲಸಕ್ಕಾಗಿ ಅರ್ಜಿ ಹಾಕಿ ಕ್ಯೂ ನಿಂತಿರತಕ್ಕಂಥವರಿಗೆ ಜಾಗ ಕೊಡುವುದಕ್ಕೆ ತಯಾರು ಇದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.— ವಿಚಾರ ಮಾಡೋಣ. ನೀವು ಹೇಳುವುದು ಸೂಕ್ತವಾಗಿದೆ. ಯಾರಾದರೂ ರಜ ತೆಗೆದುಕೊಂಡು ೧೫ ದಿವಸಗೊಳಗಾಗಿ ಕೆಲಸಕ್ಕೆ ಬಾರದಿದ್ದರೆ he must be immediately kept under suspension.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ಟ್ರಾನ್ಸ್‌ಫರ್ ಮಾಡಿದರೆ ಅವರು ರಜ ಹಾಕಿಬಿಟ್ಟು ಹೋಗುತ್ತಾರೆ. ಆ ರೀತಿ ನಮ್ಮ ತೀರ್ಥಹಳ್ಳಿ ಕ್ಷೇತ್ರದಲ್ಲಿ ಆಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಶೃಂಗೇರಿಯಲ್ಲಿ ಒಬ್ಬ ಡಾಕ್ಟರ್ ಶಾಪ್ ಇಟ್ಟುಕೊಂಡಿದ್ದಾರೆ ಎಂದು ಅವರನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ. ಆದರೆ ಈಗ ಆತ ರಜೆಯನ್ನು ತೆಗೆದುಕೊಂಡು, ಸಂಬಳ ವನ್ನು ತೆಗೆದುಕೊಂಡು ಶಾಪನ್ನು ನಡೆಸುತ್ತಿದ್ದಾನೆ. ಅವರ ಮೇಲೆ ಏತಕ್ಕೆ ಕಾರ್ಯಕ್ರಮವನ್ನು ತೆಗೆದು ಕೊಂಡಿಲ್ಲ? ಅವರಿಗೆ ಏತಕ್ಕೆ ಪನಿಷ್‌ಮೆಂಟ್ ಕೊಟ್ಟಿಲ್ಲ ? ಹೀಗಾದರೆ ನಿಮ್ಮ ಡಿಪಾರ್ಟ್‌ಮೆಂಟ್ ಏನು ಆಗುತ್ತದೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಆದರೆ ಡಿಪಾರ್ಟ್‌ಮೆಂಟ್ ಹಾಳಾಗುತ್ತದೆ. ಯಾರು ಡಿ.ಎಚ್.ಓ. ಇದ್ದಾರೆ ಅವರು ಸರಿಯಾದ ಕೆಲಸವನ್ನು ತೆಗೆದುಕೊಳ್ಳದಿದ್ದರೆ ಆತ ಆ ಅಧಿಕಾರ ಸ್ಥಾನಕ್ಕೆ ಅಯೋಗ್ಯ. I have found out many things there I have said he must be transferred, though it is a premature transfer. ಈಗ ಇರತಕ್ಕದರಲ್ಲಿ We must evolve orderliness out this chaos ಇದೇ ನನ್ನ ಮೂಲ ಉದ್ದೇಶ. ನಮ್ಮ ಸ್ನೇಹಿತರು ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸು ತ್ತೇನೆ. ಏತಕ್ಕೆ ಹೀಗೆ ಆಯಿತು? ಇವತ್ತಿನ ದಿವಸ ಎಷ್ಟೋ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಎಷ್ಟೋ ಆಸ್ಪತ್ರೆಗಳಲ್ಲಿ ತಿಂಗಳಾನುಗಟ್ಟಲೆಯಾದರೂ ಬಾಗಿಲನ್ನು ತೆಗೆದಿಲ್ಲ. ಆದರಲ್ಲಿ ಎಷ್ಟು ಹೆಗ್ಗಣ, ಇಲಿಗಳು ಸೇರಿವೆಯೋ ಇದನ್ನು ನಾವು ನೋಡಿ ಬಂದಾಗ, ಏಪ್ರಿಲ್ ತಿಂಗಳಿನಲ್ಲಿ ಸುಮಾರು ೭೮೦ ೮೦೦ ಜನರನ್ನು ಅಪಾಯಿಂಟ್ ಮಾಡಿರತಕ್ಕಂಥ ಲಿಸ್ಟನ್ನು ಸಭೆಯ ಮುಂದೆ ನೋಡಿಕೊಳ್ಳಿ ಎಂದು ಇಟ್ಟೆ. ಆಗ ಒಂದು ಸಾರ್ತಿ ಇದ್ದಂಥ ಎಲ್ಲಾ ಹರಿಜನರಿಗೂ ಕೆಲಸ ಕೊಟ್ಟು ಉಳಿದಂಥದ್ದನ್ನು ಎಲ್ಲರಿಗೂ ನಾನು ಕೊಟ್ಟಾಗ ನನ್ನ ಮೇಲೆ ಗುರುತರವಾದ ಅಪಾದನೆ ಬಂತು. ಬರೀ ಲಿಂಗಾಯಿತರಿಗೇ ಕೊಟ್ಟಿದ್ದಾರೆ ಎನ್ನುವ ಅಪಾದನೆ ಬಂದಾಗ ಆ ಲಿಸ್ಟನ್ನು ಇಲ್ಲಿಗೆ ತಂದು ಇಟ್ಟೆ. ಯಾವಯಾವ ಜಾತಿಯವರಿಗೆ ಕೊಟ್ಟಿದ್ದೇವೆ ನೋಡಿಕೊಳ್ಳಿ ಎಂದು ಆ ಲಿಸ್ಟನ್ನು ತಂದಿಟ್ಟೆ. ಆ ನಂತರ ನಾವು ಇಲ್ಲಿಯವರೆಗೆ ಯಾವ ಅಪಾಯಿಂಟ್‌ಮೆಂಟನ್ನು ಮಾಡಲಿಲ್ಲ. ಏಪ್ರಿಲ್ ೧೯೭೩ ರಿಂದ ಈಗ ಏನಾಗಿದೆ, ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ಕಳುಹಿಸಿದ್ದೇವೆ, ಆ ಮಂಡಲಿಯವರು ವರ್ಷಾನುಗಟ್ಟಲೆ ಏನು ಮಾಡುತ್ತಾರೋ ನನಗಂತೂ ಗೊತ್ತಿಲ್ಲ, ಅವರನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ನನ್ನ ಪೋರ್ಟ್‌ಫೋಲಿಯೋ ಕೂಡ ಅಲ್ಲ. ಪಿ.ಎಸ್.ಸಿ.ಯವರು ಮಾಡುವುದಿಲ್ಲ. ನಾವು ಹಂಗಾಮಿಯಾಗಿ ನೇಮಿಸುವುದಿಲ್ಲ. ಹೀಗಾಗಿ ಇವತ್ತಿನ ದಿವಸ ಏನು ಆಗಿದೆ ಎಂದರೆ ನಾನಾ ಕಡೆಗಳಲ್ಲಿ ಕೆಲಸಗಳು ಖಾಲಿ ಬಿದ್ದಿದ್ದರೂ ಮುಂದುವರಿ ಯುವ ಹಾಗೆ ಇಲ್ಲ, ಹಿಂದುವರಿಯುವ ಹಾಗೆ ಇಲ್ಲ ನನ್ನ ಹತ್ತಿರ ಲಿಸ್ಟ್ ಇದೆ. ಎಲ್ಲಾ ಕೆಲಸಗಳು ಸೇರಿ ಒಟ್ಟು ಈ ಇಲಾಖೆಯಲ್ಲಿ ೩೯೬೭ ಸ್ಯಾಂಕ್ಷನ್ಡ್ ಪೋಸ್ಟ್ ಖಾಲಿಯಾಗಿವೆ ಇದರಲ್ಲಿ ಈ ಕ್ಲಾಸ್ ೧ ಮತ್ತು ಕ್ಲಾಸ್ ೨ ಎಲ್ಲಾ ಬಂತು. ಅಂದ ಮೇಲೆ ಏನು ಮಾಡುವುದು? ಟೆಂಪರ್‌ವರಿ ಅಪಾಯಿಂಟ್ ಮೆಂಟ್ ಮಾಡಬೇಕು ಎಂದು ಕಳುಹಿಸಿದರೆ ನನಗೆ ಇರತಕ್ಕದ್ದು ಎರಡು ಸಂಕೋಲೆಗಳು. ಒಂದು ಜಿ.ಎ.ಡಿ. ಇನ್ನೊಂದು ಫಿನಾನ್ಸ್. ಎಲ್ಲಿ ಹೋದರೂ ರೋಡ್‌ಬ್ಲಾಕ್ ಇದ್ದಹಾಗೆ, ಜಿ.ಎ.ಡಿ.ಯವರು ಹೇಳುತ್ತಾರೆ. ನಾವು ಮಾಡುವುದಕ್ಕೆ ಅಧಿಕಾರವಿಲ್ಲ ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ. ಅದು ೭-೮ ವರ್ಷಗಳಿಂದ ಹಾಗೆಯೇ ನಡೆದುಕೊಂಡು ಹೋಗಿದೆ, ಯಾವ ಉದ್ದೇಶದಿಂದ ಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲದೆ ಕೆಲಸ ನಿಲ್ಲಿಸ ಲಾಗಿದೆ. ಈ ಹಾಲಿ ಓದಿದವರು ಒಂದು ಸಾವಿರ ಜನ ಇದ್ದಾರೆ. ಪ್ರತೀ ವರ್ಷ ೬೪೦ ಜನರಷ್ಟು ಬರುತ್ತಲೇ ಇದ್ದಾರೆ ಅವರ ಗತಿ ಏನು ? ಇದನ್ನು ನೋಡಿಕೊಂಡು ಏನಾದರೂ ಮಾಡಿ ಸ್ಟೈಫೆಂಡರಿ ಸ್ಕೀಂ ಮಾಡೋಣ, ಪ್ರಯತ್ನ ಮಾಡಿ ೩೦೦, ೩೫೦ ಜನಕ್ಕಾದರೂ ಗೌವರ್ನಮೆಂಟ್ ಆಫ್ ಇಂಡಿಯಾ ಸ್ಕೀಮಿ ನಿಂದಾದರೂ ಕೆಲಸ ಕೊಡಿಸೋಣವೆಂದರೆ ೧—೪—೧೯೭೪ ರಿಂದ ಆ ಸ್ಕೀಮ್‌ನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಇದು ಹೇಗಾಗಿದೆ ಎಂದರೆ ಮನೆಯಲ್ಲಿ ಅಕ್ಕಿ ಇದೆ, ಎಲ್ಲಾ ಇದೆ ಅಡಿಗೆ ಮಾಡುವುದಕ್ಕೆ ಯಾರೂ ಇಲ್ಲ ಎಂದ ಹಾಗೆ ಆಯಿತು. ಇವತ್ತು ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಅರಿಕೆ ಮಾಡಿಕೊಂಡಿ ದ್ದೇನೆ. ಅವರ ಕಡೆಗೆ ಕಳುಹಿಸಿಕೊಟ್ಟಿದ್ದೇನೆ ಈ ರೀತಿ ಮಾಡಿದರೆ ಇಲಾಖೆಗೆ ಮರ್ಯಾದೆ ಬರುವು ದಿಲ್ಲ. ದಯಮಾಡಿ ಅವಕಾಶ ಕೊಡಬೇಕು, ಸರಿಮಾಡಬೇಕು ಎಂದು ಹೇಳಿದ್ದೇನೆ. ಎಕಾನಮಿ ಆರ್ಡರ್ ಮಾಡಿದ್ದಾರೆ ಅದು ತಮಗೆ ಗೊತ್ತಿರಬಹುದು. ಎಕಾನಮಿ ಆರ್ಡರ್ ಎನ್ನತಕ್ಕಂಥದ್ದನ್ನು ಇಲ್ಲಿಯವರೆಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ವಾಪಸ್ಸು ತೆಗೆದಿಲ್ಲ.

ಶ್ರೀ ಎಸ್. ವೈ. ಪಾಟೀಲ್.—ಅದನ್ನೇ ಕುರಿತು ಒಂದು ಮಾತು ಹೇಳುತ್ತೇನೆ. ಹಣಕಾಸಿನ ಸಚಿವರು, ಮುಖ್ಯಮಂತ್ರಿಗಳು ಎಕಾನಮಿ ಆರ್ಡರನ್ನು ತೆಗೆದಿದ್ದೇವೆ ಎಂದು ತಮ್ಮ ಸಮಕ್ಷಮದಲ್ಲಿ ಅಪ್ಪಣೆಕೊಟ್ಟರು, ಇದುವರೆಗೆ ನನಗೆ ತಿಳಿದಮಟ್ಟಿಗೆ ಅದು ಲಿಫ್ಟ್ ಆಗಿಲ್ಲ, ಅವರು ಹೇಳಿದ್ದು ಸರಿಯೋ, ಇಲ್ಲ ಮಾನ್ಯ ಸಿದ್ದವೀರಪ್ಪನವರು ಹೇಳುತ್ತಿರುವುದು ಸರಿಯೋ ?

ಶ್ರೀ ಎಚ್ ಸಿದ್ದವೀರಪ್ಪ.—ನನ್ನ ಡಿಪಾರ್ಟ್‌ಮೆಂಟ್ ಮಟ್ಟಿಗೆ ನಾನು ಹೇಳುತ್ತ ಇರತಕ್ಕಂಥದ್ದು ಸರಿ. ಎರಡು ಅಫಿಷಿಯಲ್ ಮೆಮೊರ್ಯಾಂಡಂ ಇದೆ. With the permission of the Finance Department ಯಾರು ಮಾಡಬೇಕು ಎಂದು ಒಂದು ಓ. ಎಮ್. ಇದೆ.

ಶ್ರೀ ಎಸ್. ವೈ. ಪಾಟೀಲ್.—ಈಗ ನೀವು ಕ್ಯಾಬಿನೆಟ್ ಒಳಗೇ ಇರುವುದರಿಂದ ಜವಾಬ್ದಾರಿ ಇರುತ್ತದೆ. ನೀವು ಏನು ಉತ್ತರ ಕೊಡಬೇಕಾದರೂ, ನಿಮ್ಮ ಪಾಲಿಸಿಯ ಠರಾವು ಮಾಡಿ ಉತ್ತರ ಕೊಡಬೇಕಾಗುತ್ತದೆ. ನೀವು ಸಣ್ಣಪುಟ್ಟ ಮಿನಿಸ್ಟರ್‌ರವರು ಅಲ್ಲ, ನಿಮಗೆ ಒನೇ ನವೆಂಬರ್ ಪೋರ್ಟ್‌ಫೋಲಿಯೋ ಸಿಕ್ಕಿದೆ. ಎಕಾನಮಿ ಆರ್ಡರ್‌ನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ತೆಗೆದಿದ್ದಾರೋ ಇಲ್ಲವೋ ಎಂಬುದನ್ನು ನೀವು ಹೇಳಿದರೆ ನಂಬಬಹುದು, ನೀವು ಹೇಳಿದರೆ ಮುಖ್ಯಮಂತ್ರಿಗಳೇ ಹೇಳಿದ ಹಾಗೆ, ನಿಮ್ಮ ಪಕ್ಷದ ಪಾಲಿಸಿ ಹೇಳಿದ ಹಾಗೆ.

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮಲ್ಲಿ ಇನ್ನು ಎಕಾನಮಿ ಆರ್ಡರನ್ನು ತೆಗೆದಿಲ್ಲ. ನಮ್ಮ ಕೆಲಸ ಏನಾದರೂ ಇದ್ದರೆ ಎಫ್.ಡಿ.ಗೆ ತೆಗೆದುಕೊಂಡು ಹೋಗಬೇಕು. We cannot go and stand every time with a begging bowl before the Finance Department and get it turned down. It has so happened that Finance Department ಗೆ ಕಳುಹಿಸಿದಾಗ ಮುಂಕ್ಕಾಲು ವಾಸಿ ಒಪ್ಪಿಕೊಂಡಿಲ್ಲ. They say the vacant posts shall not be filled and new posts shall not be created. That is a super Government.

SRI M. S. KRISHNAN.—We have all to fight against the Finance Department and also against the G.A.D. support you. The Hon. Minister is not prepared to fight in the Cabinet.

SRI H. SIDDAVEERAPPA.—What we do in the Cabinet is not a matter that can be disclosed, Now, I am telling my difficulty why the doctors have not been appointed. The P.S.C. has not given clearance nor am I allowed or permitted by the Finance Department and the G.A.D. to appoint them, temporarily. That is why I have not been able to appoint them. ಆದಿ ಮೂರ್ತಿ ಏನೂ ಆಗುವುದಿಲ್ಲ, ನೀವು ಆದಿ ಮೂರ್ತಿ ಎಂದು ಹೇಳುತ್ತೀರಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇವತ್ತು ನಿಮ್ಮ ಬಂಡವಾಳ ನೋಡಿದ ಮೇಲೆ ಅರ್ಥವಾಯಿತು. ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ ಎಕಾನಮಿ ಆರ್ಡರ್ ತೆಗೆದಿದ್ದೇವೆಂದು, ಸನ್ಮಾನ್ಯ ಸಚಿವರು ಹೇಳುತ್ತಿದ್ದಾರೆ ಎಕಾನಮಿ ಆರ್ಡರ್ ತೆಗೆದಿಲ್ಲವೆಂದು ಅವರ ಮಾತನ್ನು ನಂಬೋಣವೇ ಇವರ ಮಾತನ್ನು ನಂಬೋಣವೇ ಇದು ಒಂದು ದೊಡ್ಡ ಸಮಸ್ಯೆಯಾಗಿದೆ.

SRI H. SIDDAVEERAPPA.—So far as this Department is concerned what I have stated is correct. It is not an incorrect statement. ಇದರ ಮೇಲೆ ಇರುವ ಎಕಾನಮಿ ಆರ್ಡರ್ ಏನು ಇದೆ ಅದು ಒಂದು ದೊಡ್ಡ ಸಂಕೋಲೆ ರೀತಿ ಇದೆ. ಇದರಿಂದಾಗಿ ನಮ್ಮ ಕೆಲಸ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಆಗಲಿಲ್ಲ. ಹೋದ ವರ್ಷ ಏನಾಯಿತು, ಎಂದರೆ ಬರಗಾಲಕ್ಕೆ ಹಣಕೊಡುವ ಒಂದು ಕಷ್ಟದಲ್ಲಿ ಈ ಒಂದು ಎಕಾನಮಿ ಆರ್ಡರ್ ಬಂತು. ಈಗಲೂ ಕೂಡ ಅದೇ ರೀತಿ ನಾನು ಸುಮ್ಮನೆ ಕಣ್ಣುಮುಚ್ಚಿಕೊಂಡು ಕುಳಿತು ಕೊಳ್ಳುವುದಿಲ್ಲ. It was stand-still budget so far as I am concerned. I don't call it an achievement. ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ೧೦೦ ಹೆಚ್.ಯು.

ಟಿ.ಡಿ. ಮಾಡಬೇಕು ಮತ್ತು ತಾಲ್ಲೂಕು ಆಸ್ಪತ್ರೆಗಳನ್ನು ತೆಗೆದುಕೊಳ್ಳಬೇಕು ಎಂದು. This was a major decision we took ; but we could not do any thing. Because we were not in a position to get finance. ಹೋದ ವರ್ಷ ಬರಗಾಲ ಇದೆ ಎಂದು ನಾನು ಸುಮ್ಮನೆ ಇದ್ದೆ. ಈವೊತ್ತೂ ಕೂಡ ನಾನು ಫೈನಾನ್ಸ್ ಮಿನಿಸ್ಟರ್‌ಗೂ ಮತ್ತು ಮುಖ್ಯಮಂತ್ರಿಗಳಿಗೂ ಕೂಡ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಮಿನಿಮಮ್ ನೀಡ್ ಬೇಸ್ಡ್ ಪ್ರೋಗ್ರಾಂ ವಿಚಾರದಲ್ಲಿ ಅದರಲ್ಲೂ ಜನತೆಯ ಆರೋಗ್ಯದ ವಿಚಾರದಲ್ಲಿ ಈ ಒಂದು ಎಕಾನಮಿ ಆರ್ಡರ್ ಬೇಡ ಎಂದು. ಏತಕ್ಕೆಂದರೆ ಇದುವರೆಗೂ ಹಳ್ಳಿಗಾಡಿನ ಜನ ಕಣ್ಣು ಬಿಟ್ಟಿರಲಿಲ್ಲ. ಈವೊತ್ತು ಅವರು ಕಣ್ಣು ಬಿಟ್ಟಿದ್ದಾರೆ. ಆದುದರಿಂದ ನಾವು ಅವರ ಬಗ್ಗೆ ಅವರ ಬಗ್ಗೆ ಅಲಕ್ಷ್ಯ ಮಾಡುವುದಕ್ಕಾಗುವುದಿಲ್ಲ. ನೀವು ಹಣ ಕೊಟ್ಟೇ ಕೊಡಬೇಕು ಎಂದು ಹೇಳುತ್ತಿದ್ದೇನೆ. ಒಂದುವೇಳೆ ನನ್ನ ಮಾತು ನಡೆಯದೇ ಇದ್ದರೆ ನಾನು ಈ ಜಾಗದಲ್ಲಿ ಇರುವುದಕ್ಕೆ ಲಾಯಕ್ಕಿಲ್ಲ. If you are not going to give me the finance, then, I think that there is no place for me here. ಆದುದರಿಂದ ಈವೊತ್ತು ನನಗೆ ಬಂದಿರತಕ್ಕಂಥ ಕಷ್ಟ ಏನು ಎಂದರೆ ಹಣ ಮುಗ್ಗು ಹಿಡಿದಂತಾಗಿದೆ. ಜೊತೆಗೆ ಕೈ ಕೂಡ ಹಿಡಿದಂತಾಗಿದೆ. ಆ ಬಗ್ಗೆ ನಾನು ಏನೂ ಮಾಡುವುದಕ್ಕಾಗದೆ ಕೈಕಟ್ಟಿಕೊಂಡು ಕೂತಿರಬೇಕಾಗಿದೆ.

HON. MEMBER.—You have to fight and get in the cabinet.

SRI H. SIDDAVEERAPPA.—I cannot disclose what has taken place in the Cabinet. If at all I disclose, you may bring another privilege motion against me. ಆವೊತ್ತಿನ ದಿವಸ ನಾನು ಊರಲ್ಲಿ ಇರಲಿಲ್ಲ ಹೊರಗೆ ಹೋಗಿದ್ದೆ. ಈ ಬಗ್ಗೆ ನಾನು ಉದಾಹರಣೆ ಹೇಳುತ್ತೇನೆ. ಈ ಒಂದು ಕೋಟಿ ೨೨ ಲಕ್ಷ ರೂಪಾಯಿಗಳನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್ ಒಪ್ಪಿಗೆ ಮೇಲೆ ರೀಅಪ್ರೋಪ್ರಿಯೇಟ್ ಮಾಡಿದ್ದಾರೆ. ಅದು ಯಾವುದರ ಹಣ ಎಂದರೆ ಬಡಜನರಿಗೆ ಕೊಡತಕ್ಕಂಥ ಹಾಸಿಗೆ ಇತ್ಯಾದಿಗಳ ಹಣ. ಆ ಫೈಲು ನನಗೆ ಬಂದಿಲ್ಲ ಈ ಒಂದು ಕೋಟಿ ೨೨ ಲಕ್ಷ ರೂಪಾಯಿ ಹಣವನ್ನು ಯಾವುದಕ್ಕೆ ಹಾಕಿಕೊಂಡಿದ್ದಾರೆ ಎಂದರೆ ಅವರ ಸಂಬಳ ಅಲೋಯೆನ್ಸ್‌ಗೆ ಇದನ್ನು ರೀಅಪ್ರೋಪ್ರಿಯೇಟ್ ಮಾಡಿದ್ದಾರೆ.

(ಕೆಲವು ಸದಸ್ಯರುಗಳು ಷೇಮ್, ಷೇಮ್ ಎಂದು ಕೂಗಿದರು.)

ಆವೊತ್ತು ನಾನು ಇದ್ದಿದ್ದರೆ ಅವಕಾಶ ಕೊಡುತ್ತಿರಲಿಲ್ಲ. In this connection, I have already called for the explanation of the persons who are responsible for this. If the money meant for poor peoples' service is re-appropriated for salary and allowaces, I cannot tolerate such things. I may be a Minister today; but I cannot see such injustices being done to the poor people. I will have to say that it will not to be tolerated

SRI KAGODU THIMMAPPA.—The Finance Minister should be impeached.

SRI SIDDAVEERAPPA.—Rupees One crore 22 lakhs has re-appropriated for salary and allowances, which could have gone to the common man. There are so many other things also.

ಇನ್ನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮೆಡಿಕಲ್ ಯೂನಿವರ್ಸಿಟಿ ವಿಚಾರ ಹೇಳಿದರು. ಅದಕ್ಕೆ ಹಣ ಹೆಚ್ಚಾಗಿ ಖರ್ಚಾಗುವುದಿಲ್ಲ. ಇವೆಲ್ಲಾ ಸರಿಹೋಗುತ್ತವೆ.

ಇನ್ನು ಅಲೋಪತಿಯಲ್ಲಿ ನನಗೆ ನಂಬಿಕೆ ಇಲ್ಲ. ನಾನು ಮಂತ್ರಿಯಾಗಿರಬಹುದು. ಆದರೆ ನಾನು ಈ ವಿಚಾರದಲ್ಲಿ ಹೇಳುವುದಾದರೆ ಇಂಡಿಯನ್ ಮೆಡಿಸಿನ್ ಬಳಸಬೇಕು ಎಂದು ಹೇಳುತ್ತೇನೆ. ಒಂದು ವರ್ಷದಿಂದ ಅದಕ್ಕೆ ಒಬ್ಬ ಡೈರೆಕ್ಟರನ್ನು ನೇಮಿಸುವುದಕ್ಕೆ ಆಗಲಿಲ್ಲ. ಈವೊತ್ತಿನ ದಿವಸ ಆ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. We must bring it under one forum ಆದ್ದರಿಂದ ಮೆಡಿಕಲ್ ಯೂನಿವರ್ಸಿಟಿ ಆಗಬೇಕು ಎಂದು ಹೇಳುತ್ತೇನೆ. ಇದಕ್ಕೆ ಯು.ಜಿ.ಸಿ.ನವರೂ ಕೂಡ ಒಪ್ಪಿದ್ದಾರೆ. I am very happy to say that the Chairman of U.G.C. who is a

(ಶ್ರೀ ಸಿದ್ದವೀರಪ್ಪ)

very big man and also Vice-Chancellor of so many Universities has said that it was a good scheme and told us to go ahead with the scheme. Similarly, so many other bodies have also appreciated this scheme. Therefore, I beg of you not to raise any objection so far as the creation of Health University is concerned. ಆದುದರಿಂದ ಈ ಬಗ್ಗೆ ಯಾವ ವಿಧವಾದ ಟೀಕೆಯೂ ಬೇಡ. ನಾವು ಯುನಾನಿಮಸ್ ಆಗಿ ಒಪ್ಪಿಕೊಂಡಿದ್ದೇವೆ. ನಿಮ್ಮ ಮುಂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ರಿಪೋರ್ಟ್ ಬರಲಿದೆ. ಅದು ಇಲ್ಲಿಗೆ ಬಂದು ಪಾಸಾದ ಕೂಡಲೆ ಅದನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು ಪ್ರೈವೇಟ್ ಕಾಲೇಜುಗಳ ವಿಚಾರದಲ್ಲಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಒಂದು ವಿಚಾರ ಹೇಳಿದರು. ಬಹುಶಃ ನನಗೂ ಅವರಿಗೂ ತಾತ್ವಿಕವಾಗಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ನಾನೂ ಕೂಡ ಪ್ರೈವೇಟ್ ಮೆಡಿಕಲ್ ಕಾಲೇಜು ವಿಚಾರದಲ್ಲಿ ಯಾವ ಪ್ರೋತ್ಸಾಹವನ್ನೂ ಕೊಡತಕ್ಕಂಥಾವನಲ್ಲ. ಉದಾಹರಣೆಗೆ ನಮ್ಮ ಕಾಲದಲ್ಲಿ ಒಂದು ಪ್ರೈವೇಟ್ ಕಾಲೇಜು ಮಾಡಿರಿ ಎಂದು ಒಬ್ಬರು ಒತ್ತಾಯ ತಂದಿದ್ದರು. ನಾನು ಅದಕ್ಕೆ ಮಣಿಯಲಿಲ್ಲ. ನಾವು ಅದನ್ನು ಮಾಡಂವುದಿಲ್ಲ ಎಂದು ಹೇಳಿದ್ದೇನೆ. ಪ್ರೈವೇಟ್ ಕಾಲೇಜುಗಳು ನಮ್ಮ ರಾಜ್ಯದಲ್ಲಿ ಒಂದು ಮನೆಯಲ್ಲಿ ೪ ಜನ ಮಕ್ಕಳು ಇದ್ದ ಹಾಗೆ ಅವು ಇವೆ. ಒಂದೊಂದರಲ್ಲೂ ಕೂಡ ೩-೪ ಕೋಟಿ ರೂಪಾಯಿಗಳನ್ನು ಹಾಕಿ ಅವನ್ನು ಚೆನ್ನಾಗಿ ಬೆಳೆಸಿದ್ದಾರೆ. ಅವರು ನಮಗೆ ಬರೆದುಕೊಟ್ಟಿದ್ದಾರೆ. If you want we are prepared to give it ಎಂದು ಆದರೆ ನಮ್ಮಲ್ಲಿ ಹಣಕಾಸಿನ ಪರಿಸ್ಥಿತಿ ತೊಂದರೆ ಇರುವುದರಿಂದ ಆ ಕೆಲಸ ಹಾಗೆಯೇ ನಿಂತಿದೆ. ಆದುದರಿಂದ ಅವರನ್ನು ಕಂಟ್ರೋಲ್ ಮಾಡಿ ಎಂದರೆ ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಹಾಗಾದರೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಗೆ ಸಾರ್ವಜನಿಕ ಹಣ ಏತಕ್ಕೆ ಕೊಡಬೇಕು ?

SRI H. SIDDAVEERAPPA.—This is a mixed economy. I want to tell our friend Mr. Taimmappa that we have not got a society like Russia.

ಇನ್ನು ಡೀರೆಕಗ್ನಿಷನ್ ಆಫ್ ಮೆಡಿಕಲ್ ಕಾಲೇಜಸ್ ಬಗ್ಗೆ ಹೇಳುವುದಾದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ನಮ್ಮ ರಾಜ್ಯಕ್ಕೆ ಮಾಡಬಾರದ ಅನ್ಯಾಯವನ್ನು ಮಾಡಿದ್ದಾರೆ. ಅದನ್ನು ನಾನು ಎಷ್ಟೋ ರೀತಿಯಲ್ಲಿ ಪ್ರತಿಭಟಿಸಿದ್ದೇನೆ. ಆ ಸಮಯದಲ್ಲಿ ಆಂಧ್ರ ಮಂತ್ರಿಗಳೂ ಇದ್ದರು, ಮಹಾರಾಷ್ಟ್ರದ ಮಂತ್ರಿಗಳೂ ಇದ್ದರು ನಾನೂ ಇದ್ದೆ.

ಶ್ರೀ ಬಾಪೂಗೌಡ ತಾಯಪ್ಪ.—ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಗುಲ್ಬರ್ಗ ಮೆಡಿಕಲ್ ಕಾಲೇಜನ್ನು ಅಪ್ರೂವ್ ಮಾಡಿದ್ದೇವೆ ಎಂದು ಪತ್ರ ಬಂದಿದ್ದಾರೆ. ರಾಜ್ಯ ಸರ್ಕಾರದವರು ಆ ಬಗ್ಗೆ ಅವಶ್ಯಕವಾದ ಸಮಾಚಾರ ಏನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ ಎಂದು ನನಗೆ ಕಾಣುತ್ತದೆ. ಅದಕ್ಕೋಸ್ಕರ ಈ ರೀತಿ ಸ್ಟೇಟ್‌ಮೆಂಟ್ ಬಂದಿದೆ. ಅಲ್ಲವೇ?

ಶ್ರೀ ಹೆಚ್. ಎಸ್. ಸಿದ್ದವೀರಪ್ಪ.—ಆದರೂ ಕೂಡ ಅವರು ಈ ರೀತಿ ಮಾಡಿರುವುದು ವಿರೋಧಾಭಾಸವಾದದು. ಏತಕ್ಕೆಂದರೆ ಕೆಲವು ಕಾಲೇಜುಗಳಿಗೆ ರಿಕಗ್ನಿಷನ್ನೇ ಕೊಟ್ಟಿಲ್ಲ. ಆದರೂ ಕೂಡ ನಾವು ಅದನ್ನು ಡಿರೆಕಗ್ನಿಷನ್ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಬಳ್ಳಾರಿ, ಬೆಳಗಾಂ, ಮತ್ತು ದಾವಣಗೆರೆ, ಈ ಮೂರು ಇದ್ದಾವೆ, ಅದಕ್ಕೆ ಕಾರಣ ಏನೆಂದರೆ ಅಲ್ಲಿ ಸ್ಟಾಫ್ ಇಲ್ಲ, ಬೆಡ್ ಸ್ಟ್ರೆಂಗ್ತ್ ಇಲ್ಲ, ಬಿಲ್ಡಿಂಗ್ಸ್ ಇಲ್ಲ ಎಕ್ವಿಪ್‌ಮೆಂಟ್ಸ್ ಇಲ್ಲ, ಅವರಿಗೆ ಏನೇನೊ ಬೇಕೋ ಅದು ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮೇಲಿಂದ ಮೇಲೆ, ಅವರು ನಿಮಗೆ ಬರೆದಿದ್ದಾರೆ, ರಿಪೋರ್ಟ್ ಮಾಡಿದ್ದರೂ ಸಹ ತಾವು ಅದರ ಬಗ್ಗೆ ಉತ್ತರ ಕೊಟ್ಟಿಲ್ಲ, ಗಮನಕೊಟ್ಟಿಲ್ಲ ಎಂದು ತಮ್ಮ ಮೇಲೆ, ಅಥವಾ ಡಿಪಾರ್ಟ್‌ಮೆಂಟ್ ಮೇಲೆ ಆಪಾದನೆ ಇದೆ. ಇದಕ್ಕೆ ತಾವು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ತಾವು ಹಿಂದೆ, ಸಭೆಯಲ್ಲಿ ಮಾತನಾಡುವಾಗ ಆಕ್ಟನ್ನು ಓದಿ ಅವರೇ ನಮ್ಮನ್ನು ಕೇಳಬೇಕು ಎಂದೂ ಹೇಳಿದ್ದೀರಿ. ಅವರು ನಿಮ್ಮನ್ನು ಕೇಳಿದ್ದಾರೆ, ಆದರೆ ತಾವು ಉತ್ತರಕೊಟ್ಟಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಅದು ನಿಜವಲ್ಲ. ಅವರಿಗೆ ಕಾಗದವನ್ನು ನಾನು ಬರೆದಿದ್ದೇನೆ. ನೀವು ಬಂದು ನೋಡಿ, ನಮ್ಮ ಆಫೀಸರ್ಸ್‌ನ್ನು ಕಳುಹಿಸುತ್ತೇನೆ, ಏನಾದರೂ ಇದ್ದರೆ ಬಂದು ನೋಡಿ ಎಂದು ಬರೆದಿದ್ದೇನೆ. ಡೀರೆಕ್ಟ್ನ್ಯೂಸ್ ಮಾಡಿರುವ ವರದಿ ವರ್ಲ್ಡ್ ನ್ಯೂಸ್ ಪೇಪರ್‌ನಲ್ಲಿ ಬಂತು ಮತ್ತು ಆಲ್ ಇಂಡಿಯಾ ನ್ಯೂಸ್‌ನಲ್ಲಿ ಬಂತು. It was most unfortunate. ಇವತ್ತು ಏನಾಗಿದೆ ಎಂದರೆ, ನಮ್ಮ ಹುಡುಗರು, ಕರ್ನಾಟಕದಲ್ಲಿ ತಯಾರಾದ ಹುಡುಗರು ಇಂಟರ್‌ನ್ಯಾಷನಲ್ ರೆಕಗ್ನಿಷನ್ ತೆಗೆದುಕೊಂಡಿದ್ದಾರೆ. ನಮ್ಮಲ್ಲಿ ತಿಮ್ಮಯ್ಯ ಎನ್ನುವವರು ಇದ್ದಾರೆ. ಅವರು ಇಂಟರ್‌ನ್ಯಾಷನಲ್ ಫಿಗರ್, ಪೀಡಿಯಾಟ್ರಿಕ್ಸ್‌ನಲ್ಲಿ ಅವರು ಎಕ್ಸ್‌ಪರ್ಟ್. ಅವರೂ ಸಹ ಇಲ್ಲಿಯೇ ತಯಾರಾದವರು, ಅವರು ಯಾವ ಕಾಲೇಜಿನಲ್ಲಿ ಓದಿದವರು ಎಂದರೆ, ರೆಕಗ್ನಿಷನ್ ಇಲ್ಲದಿರತಕ್ಕಂಥ ಕಾಲೇಜಿನಲ್ಲಿ ಓದಿದವರು. ಅದೇರೀತಿ ಇನ್ನು ಅನೇಕ ಜನ ಕರ್ನಾಟಕ ರಾಜ್ಯಕ್ಕೆ ಸೇರಿದವರು ಸುಮಾರು ೬೦೦-೭೦೦ ಜನ ಡಾಕ್ಟರುಗಳು ಪಾಶ್ಚಿಮಾತ್ಯ ದೇಶದಲ್ಲಿದ್ದಾರೆ. ಅವರೆಲ್ಲ ಫಾರಿನ್ ಎಕ್ಸ್‌ಚೇಂಜ್ ದುಡಿದು ನಮ್ಮ ದೇಶಕ್ಕೆ ಅವರ ತಂದೆತಾಯಿಗಳಿಗೆ ಕಳುಹಿಸುತ್ತಿದ್ದಾರೆ. ನನ್ನಮಗನ ವಿಚಾರದಲ್ಲಿ ಕೆಲವರು ಹೇಳಿದ್ದಾರೆ. ಅವನು ಅಲ್ಲಿಯೇ ಇರಬೇಕು ಎಂದು ಹೋದವನಲ್ಲ. ರೀಸರ್ಚ್ ಮಾಡುತ್ತಿದ್ದಾನೆ, ಇನ್ನೂ ೫ ತಿಂಗಳು ಅಲ್ಲಿಯೇ ಇರಬೇಕು ಎಂದು ಅವರ ಪ್ರೊಫೆಸರ್ ಹೇಳಿದ್ದರಿಂದ ಇದ್ದಾನೆ. ಅವನ ಅರ್ಜಿ ನನ್ನ ಹತ್ತಿರ ಬಂದಾಗ, ನಾನು ಅದರ ಮೇಲೆ ಲೀವ್ ಕೊಟ್ಟಿಲ್ಲ ಸರ್ಕಾರದಿಂದ ಅವನು ಯಾವ ಸಂಭಾವನೆಯನ್ನೂ ತೆಗೆದು ಕೊಂಡಿಲ್ಲ ಸ್ಟಡಿ ಲೀವ್ ತೆಗೆದುಕೊಂಡಿದ್ದಾನೆ. ನನ್ನ ಮಗ ಎನ್ನುವ ಕಾರಣದಿಂದ, ನಾನು ಫೈಲ್‌ನಲ್ಲಿ ಆರ್ಡರ್ ಮಾಡಲಿಲ್ಲ ಮುಖ್ಯಮಂತ್ರಿಗಳೇ ಅವನ ಫೈಲನ್ನು ತರಿಸಿಕೊಂಡು ಆರ್ಡರ್ ಮಾಡಿದ್ದಾರೆ, ಕೆಲವು ದಿವಸಗಳಲ್ಲಿಯೇ ವಾಪಸ್ ಬರಬೇಕೆಂದಿದ್ದಾನೆ. ನಾವು ಇರುವವರು ಇಬ್ಬರು, ವಯಸ್ಸಾಗಿದೆ. ನಮ್ಮ ಮಗನ ಜೊತೆಯಲ್ಲಿಯೇ ನಾವೂ ಇರಬೇಕು ಎನ್ನುವ ಆಶಯ ಇದೆ. ದುಡ್ಡು ದುಡಿದು ಕೊಡಿಟ್ಟು ಕೊಂಡು ತಿನ್ನಬೇಕಾಗಿಲ್ಲ. ನಾವು ಅಂಥ ಹೆಚ್ಚಿನ ದುಬಾರಿ ಖರ್ಚಿನಲ್ಲಿ ಜೀವನ ಮಾಡುವವರಲ್ಲ. ಬಹಳ ಕಡಿಮೆ ಖರ್ಚಿನಲ್ಲಿ ಜೀವನ ಮಾಡತಕ್ಕ ಶಕ್ತಿಯನ್ನು ದೇವರು ಕೊಟ್ಟಿದ್ದಾನೆ. ನಾನು ಹೆಲ್ತ್ ಮಿನಿಸ್ಟರ್ ಆಗಿರುವವರೆಗೂ ಅವನು ಇಲ್ಲಿ ಬರುವುದು ಬೇಡ ಎಂದು ಒಂದೊಂದು ಸಾರಿ ಅನ್ನಿಸುತ್ತದೆ. ಮತ್ತೆ ಏನಾದರೂ ಪೇಚಾಟಕ್ಕೆ ಸಿಕ್ಕಿ ಕೊಂಡರೆ ಹೇಗೆ ಎಂದು ಅದಕ್ಕೆ ಕಾರಣ ಆರೀತಿ ಅನ್ನಿಸುತ್ತದೆ. ಹೆಲ್ತ್ ಮಿನಿಸ್ಟರ್ ಪದವಿ ಹೋದಮೇಲೆ ಅವನು ಇಲ್ಲಿಗೆ ಬಂದರೆ ಒಳ್ಳೆಯದು ಎಂದೆನಿಸುತ್ತದೆ. He has got the love of his country. ಬಾಕಿಯುವರ ವಿಚಾರದಲ್ಲಿ ಹೇಳಬೇಕು ಎಂದರೆ ನಮ್ಮ ಹರಿಹರದ ಒಬ್ಬ ತಳವಾರ ಹುಡುಗ. ಅವನು ಕಾರ್ಡಿಯಾಲಜಿಯಲ್ಲಿ ಬಹಳ ಎಕ್ಸ್‌ಪರ್ಟ್ ಇದ್ದಾನೆ. ಅವನು ನಮ್ಮ ರಾಜ್ಯಕ್ಕೆ ಬಂದರೆ, ಇಲ್ಲಿರತಕ್ಕವರು ಯಾರೂ ಅವನಿಗೆ ಸಾಟಿಯಾಗಲಾರರು ಅನ್ನತಕ್ಕ ಸನ್ನಿವೇಶದಲ್ಲಿದ್ದಾನೆ, ೨೦-೨೫ ಸಾವಿರ ರೂಪಾಯಿ ಸಂಬಳವನ್ನು ಅವನ ಸ್ಟಾಫ್‌ಗೆ ಕೊಡುತ್ತಿದ್ದಾನೆ. ಅವನ್ನು ನಾವು ಪ್ರೊಫೆಸರ್ ಮಾಡುವ ಹಾಗಿಲ್ಲ, ಅವನು ಲೆಕ್ಚರರ್ ಆಗಿ ಬರುತ್ತಾನೆಯೇ ? ಇಲ್ಲಿಗೆ ಬಂದು ಅವನು ಜೀವನ ಮಾಡುವುದಕ್ಕೆ ಸಾಧ್ಯವೇ ? ಇಲ್ಲಿಗೆ ಬಂದವರ ಅನೇಕರು ಮನೆಗಳನ್ನು ಕಟ್ಟಿ ಕೊಂಡಿದ್ದಾರೆ, ನಮ್ಮ ಮೇಯರ್ ಟಿ. ಡಿ. ನಾಗಣ್ಣನವರ ಅಳಿಯ, ಇವತ್ತಿನ ದಿವಸ ಎರಡು ಕ್ಲಿನಿಕ್ ಗಳನ್ನು ನಡೆಸುತ್ತಿದ್ದಾರೆ. ಆದ್ದರಿಂದ ಕರ್ನಾಟಕದ ಹುಡುಗರು ಯಾರು ನೂರು ಪರದೇಶದಲ್ಲಿದ್ದಾರೆ ಅವರೆಲ್ಲರೂ ಪರದೇಶದಲ್ಲಿ ಸೈ ಸೈ ಎನಿಸಿಕೊಂಡಿದ್ದಾರೆ. ಅವರು ಅಲ್ಲಿ ಬಾತ್ ರೂಮಿನಲ್ಲಿರುವಾಗ ಟೆಲಿಫೋನ್ ಬಂದರೆ ಹೇಗಿದ್ದರೆ ಹಾಗೆಯೇ ಬರಬೇಕು, ಇಲ್ಲಿಯ ಹಾಗೆ ಅವರು ಆರಾಮಾಗಿ ಇರುವ ಹಾಗಿಲ್ಲ. ಅವರು ಹಾಗೆ ಇರುವುದೂ ಇಲ್ಲ. ಅವರು ಸರ್ಕಾರದಿಂದ ತೆಗೆದುಕೊಂಡಿರತಕ್ಕ ಹಣವನ್ನು ಕೊಡಬೇಕು ಎನ್ನುವುದು ಕೆಲವರ ಅಭಿಪ್ರಾಯ ಇದೆ. Morally they are bound to return the money. ಇದು ಕೇಂದ್ರ ಸರ್ಕಾರಕ್ಕೆ ಸೇರಿದ್ದು ನಮ್ಮ ಸರ್ಕಾರದಿಂದ ಹಣ ತೆಗೆದು ಕೊಂಡಿರತಕ್ಕವರೆಲ್ಲರೂ ಒಂದು ಲಕ್ಷರೂಪಾಯಿಗಳನ್ನು ಕೊಡಬೇಕು ಎಂದರೆ, ಅಥವಾ ಡೊನೇಷನ್ ಆಗಿ ಕೊಡಬೇಕು ಎಂದರೆ ಲೀಗಲಿ ಕೇಳಲಿಕ್ಕೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಯಾರೇ ನಮ್ಮ ದೇಶಕ್ಕೆ ಬರಲಿ. ಅವರಿಗೆ ಸರಿಯಾದ ಅವಕಾಶವನ್ನು ಮಾಡಿಕೊಡುವ ಹಾಗಿದ್ದರೆ, ನಾವು ಅವರನ್ನು ಕರೆದುಕೊಂಡು ಬರಬೇಕು. ಬಂದ ಕೂಡಲೆ ಇಲ್ಲಿ ತಲೆಯಮೇಲೆ ಕೈಹೊತ್ತುಕೊಂಡು ಕೂತರೆ ಯಾವರೀತಿಯಿಂದ ಅನುಕೂಲವೂ ಆಗುವುದಿಲ್ಲ. ನೀವು ಅವರನ್ನು ಟಾಪ್ ಮ್ಯಾನ್ ಎಂದು ತಿಳಿದುಕೊಳ್ಳಬೇಡಿ. ಅವರು ಸಾಮಾನ್ಯವಾದ ಡಾಕ್ಟರುಗಳು. ಆದ್ದರಿಂದ ಈ ವಿಷಯದಲ್ಲಿ ನಾವು ಯೋಚನೆ ಮಾಡಬೇಕು. ಫಾರಿನ್‌ನಲ್ಲಿರುವ ಡಾಕ್ಟರುಗಳನ್ನು ಕರೆಸಿಕೊಳ್ಳುವುದು ಬಿಡುವುದು ಇದು ಕೇಂದ್ರಸರ್ಕಾರಕ್ಕೆ ಸೇರಿದೆ. ಈ ವಿಷಯದಲ್ಲಿ ಅವರು ಯಾವರೀತಿ ಆರ್ಡರ್ ಕೊಡುತ್ತಾರೆ. ಆರೀತಿ ಹೋಗಲಿಕ್ಕೆ ನಾನು ತಯಾರಿದ್ದೇನೆ. ಒಟ್ಟಿನಲ್ಲಿ ಈ ಪೋರ್ಟ್‌ಫೋಲಿಯೋ ವಿಚಾರದಲ್ಲಿ ನನಗಂತೂ ಬಹಳ ಆನಂದ. ಇವತ್ತು ತಾವುಗಳು ಟೀಕೆ ಮಾಡಿ, ಇರತಕ್ಕ ಅಂಶಗಳನ್ನು ನಮಗೆ ತಿಳಿಸಿದ್ದೀರಿ. ಕೆಲವು ಡಾಕ್ಟರುಗಳು ಟೇಬಲ್ ಮೇಲೆ ತೆಗೆದು ಕೊಳ್ಳುತ್ತಾರೆ ಹಾಗೆ ಎನ್ನತಕ್ಕವರೂ ಇದ್ದಾರೆ, ಕೆಲವರು ದೇವರ ಹಾಗೆ ರೋಗಿಗಳನ್ನು ನೋಡುತ್ತಾರೆ.

(ಶ್ರೀ ಎಚ್. ಸಿದ್ದವೀರಪ್ಪ)

ಎನ್ನತಕ್ಕವರೂ ಇದ್ದಾರೆ. ಡಾಕ್ಟರುಗಳು ಎಲ್ಲಾ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಒಳ್ಳೆಯವರೂ ಇದ್ದಾರೆ. ಕೆಟ್ಟವರೂ ಕೆಲವರು ಇದ್ದಾರೆ, ಒಳ್ಳೆಯವರನ್ನು ನೋಡಿ ಕಲಿಯಬೇಕು. ಒಂದುವೇಳೆ ಇನ್ನೂ ಅವರು ಸರಿಪಡಿಸಿಕೊಳ್ಳಲಿಲ್ಲ ಎಂದರೆ ಜನ ಅವರನ್ನು ಬಿಡುವುದಿಲ್ಲ. ಜನರೇ ಅವರಿಗೆ ಸರಿಯಾದ ಬುದ್ಧಿಯನ್ನು ಕಲಿಸುತ್ತಾರೆ. ಸರಿಯಾದ ರೀತಿಯಲ್ಲಿ ಅವರು ಹೋಗಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ನಮ್ಮ ಮಂತ್ರಿಗಳು ನಮ್ಮನ್ನು ಬಿಟ್ಟುಕೊಟ್ಟರು, ಟೀಕೆ ಮಾಡಿದರು ಎನ್ನುವ ಭಾವನೆ ಬರಬೇಕಾದದ್ದು ಇಲ್ಲ. ನಾನು ಅವರನ್ನು ಒಬ್ಬ ಸಾರ್ವಜನಿಕನಾಗಿ ಟೀಕೆ ಮಾಡಬಹುದು ಎಂದು ತಿಳಿದು ಕೊಂಡು ಈ ವಿಷಯಗಳನ್ನು ಹೇಳುತ್ತಿದ್ದೇನೆಯೇ ಹೊರತು ಅವರನ್ನು ಟೀಕೆ ಮಾಡ ಬೇಕು ಎಂದಲ್ಲ.

ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ವಿಚಾರದಲ್ಲಿ ಎರಡು ಮಾತನ್ನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ೨೬,೭೨೬ ಹಳ್ಳಿಗಳು, ೧೪,೫೫೨ ಹ್ಯಾಮ್ಲೆಟ್ಸ್ ಇವೆ. ೨೩೫ ಹಳ್ಳಿಗಳಿಗೆ ಮತ್ತು ೯೦ ಹ್ಯಾಮ್ಲೆಟ್ಸ್‌ಗಳಿಗೆ ಡ್ರಿಂಕಿಂಗ್ ವಾಟರ್ ಸೌಕರ್ಯ ಇನ್ನೂ ಇಲ್ಲ ಎಂದು ನನಗೆ ಗೊತ್ತಿರತಕ್ಕ ಅಂಕಿ ಅಂಶಗಳ ಪ್ರಕಾರ ಇವೆ. ಇವತ್ತು ನಮ್ಮ ಸರ್ಕಾರದಲ್ಲಿರುವ ರಿಗ್ಸ್‌ಗಳ ಜೊತೆಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರ ರಿಗ್ಸ್‌ಗಳನ್ನು ಸೇರಿಕೊಂಡು. ೫೭ ಡ್ರಿಲ್ಲಿಂಗ್ ಮೆಷಿನ್ಸ್ ಇವೆ. ಇನ್ನೂ ಹತ್ತು ರಿಗ್ಸ್ ಬರುವ ನಿರೀಕ್ಷಣೆ ಇದೆ. ಇವೆಲ್ಲವೂ ಸರಿಯಾಗಿ ವರ್ಕ್ ಮಾಡಿದರೆ, ಪ್ರತಿಯೊಂದು ರಿಗ್‌ನಿಂದ ದಿವಸಕ್ಕೆ ನೂರು ಬಾವಿಗಳನ್ನು ಕೊಡಬಹುದು. ಧಾರವಾಡ ಜಿಲ್ಲೆಯಲ್ಲಿ ಸಾಧಾರಣವಾಗಿ, ಬಾವಿಗಳನ್ನು ತೆಗೆಯುವುದಕ್ಕೆ ಆಗುವುದಿಲ್ಲ, ಅಲ್ಲಿ ಬ್ರಾಕಿಷ್ ವಾಟರ್ ಬೀಳುತ್ತದೆ. ಅಲ್ಲಿಗೆ ಎನ್.ಆರ್. ಡಬ್ಲ್ಯು. ಸ್ಕೀಂ ನಿಂದ ಬಾವಿಗಳು ತೆಗೆಯುವ ಕೆಲಸವನ್ನು ಕೊಡ ಬೇಕಾಗುತ್ತದೆ. ಇದರ ಬಗ್ಗೆ ನಮಗೆ ಬಂದಿರುವ ಕಷ್ಟ ಏನೆಂದರೆ, ನಮಗೆ ಕೊಟ್ಟಿರುವ ಹಣ ಬಹಳ ಕಡಿಮೆ. ಅಪ್ ಟು ಡೇಟ್ ಬೋರ್‌ವೆಲ್ಸ್ ಸಿಂಕಿಂಗ್ ವರ್ಕ್ಸ್ ೪೫೦೦ ಅಪೂರ್ಣವಾಗಿರುವ ಕೆಲಸಗಳು ಇವೆ. ೧೯೭೧-೭೪ರವರೆಗೆ ಎನ್.ಆರ್.ಡಬ್ಲ್ಯು.ಎಸ್.ನಲ್ಲಿ ೧೧೯೯ ಸ್ಕೀಂಗಳನ್ನು ಮಂಜೂರು ಮಾಡಿದ್ದಾರೆ ಮತ್ತು ಅವುಗಳನ್ನು ತೆಗೆದು ಕೊಂಡಿದ್ದಾರೆ ಅದಕ್ಕೆ ಬೇಕಾಗಿರತಕ್ಕ ಹಣ ೩೩ ಕೋಟಿ ೨೧ ಲಕ್ಷ ೯೬ ಸಾವಿರದ ೫೬೩ ರೂಪಾಯಿಗಳು, ೧೯೭೩-೭೩ನೇ ಇಸವಿಯವರೆಗೆ ೫೬೩ ಸ್ಕೀಂಗಳನ್ನು ಕಂಪ್ಲೀಟ್ ಮಾಡಿದ್ದಾರೆ. ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ೧-೪-೧೯೭೪ರವರೆಗೆ ಒಟ್ಟು ೫೬೬ ಸ್ಕೀಂಗಳು ಇವೆ, ಇದಕ್ಕೆ ಇದಕ್ಕೆ ೫,೩೫,೫೪,೯೦೦ ಬೇಕಾಗಿರುವ ಹಣ ೭. ೮೬, ೬೭, ೬೬೩ ರೂಪಾಯಿಗಳು ಇದು ಪೆಂಡಿಂಗ್ ಇದೆ. ಇದರ ಜೊತೆಗೆ ೪೮೩ ಸ್ಕೀಂಗಳ ಕೆಲಸ ಆಗುತ್ತಿದೆ. ಇನ್ನೂ ೧೯೭೩ರ ಕೆಲಸ ಶುರುವಾಗಿಲ್ಲ. ಆಕ್ಸಿಲರೇಟೆಡ್ ರೂರಲ್ ವಾಟರ್ ಸಪ್ಲೈ ಸ್ಕೀಂ ಬೇರೆ ಇದೆ.

ಅರ್ಬನ್ ವಾಟರ್ ಸಪ್ಲೈ ಬಗ್ಗೆ ಹೇಳಬೇಕಾದರೆ ೨೬೧ ಪಟ್ಟಣಗಳಲ್ಲಿ ೧೫೫ಕ್ಕೆ ನೀರು ಕೊಟ್ಟಿದ್ದೇವೆ, ೪೨ ಪ್ರೋಗ್ರೆಸ್‌ನಲ್ಲಿವೆ, ೬೫ ಪಟ್ಟಣಗಳಿಗೆ ಇನ್ನೂ ನಾವು ನೀರು ಕೊಡಬೇಕು. ಅಂಡರ್ ಗ್ರೌಂಡ್ ಡ್ರೈನೇಜ್ ಕೆಲಸ ಅಷ್ಟು ಸರಿಯಾಗಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಮಲವನ್ನು ಎತ್ತುವುದನ್ನು ಬಿಟ್ಟು ಮೇಲೆ ರಸ್ತೆಗೆ ಬಂದು ಮಲ ಮಾಡುವುದರಿಂದ ಆರೋಗ್ಯ ಕೆಡುತ್ತಾ ಇದೆ ಎಂದು ನನಗೆ ವರದಿಗಳು ಬರುತ್ತಾ ಇವೆ ಎಪಿಡೆಮಿಕ್ಸ್ ಬರುತ್ತಾ ಇದೆ. ಕಾಲರಾ ಟೈಫಾಯಿಡ್ ಅಲ್ಲಿಂದ ಉಗಮ ಆಗುತ್ತದೆಂದು ರಿಪೋರ್ಟ್ ಬಂದಿದೆ. ಆದುದರಿಂದ ಅಂಡರ್‌ಗ್ರೌಂಡ್ ಡ್ರೈನೇಜ್ ಸ್ಕೀಂಗೆ ಏನಿದ್ದರೂ ಸರ್ಕಾರ ಹೆಚ್ಚಿನ ನಿಗಾ ತೆಗೆದುಕೊಂಡು ಮಾಡಬೇಕಾದ್ದು ಅವಶ್ಯಕವಾಗಿದೆ. ಅದನ್ನು ನಾನು ತ್ವರಿತವಾಗಿ ಯೋಚನೆ ಮಾಡುತ್ತೇನೆ. ಆದರೆ ೧೯ ಪಟ್ಟಣಗಳಲ್ಲಿ ಇವತ್ತು ಪ್ರೋಗ್ರೆಸ್‌ನಲ್ಲಿ ಇದೆ. ಇವತ್ತು ಅರ್ಬನ್ ವಾಟರ್ ವರ್ಕ್ಸ್‌ಗೆ ೨೩ ಕೋಟಿ ೯೬ ಲಕ್ಷ ರೂಪಾಯಿ ಬೇಕು. ಆದುದರಿಂದ ಸ್ಕೀಂಗಳು ಏನಿವೆ ಅವುಗಳಿಗಾಗಿ ನಮಗೆ ಕೊಟ್ಟಿರುವ ಹಣ ಬಹಳ ಕಡಿಮೆ. ಎಲ್ಲಾ ಸ್ಕೀಂಗಳನ್ನೂ ಕಾರ್ಯಗತ ಮಾಡಬೇಕಾದರೆ ೪೦-೪೫ ಕೋಟಿ ರೂಪಾಯಿ ಬೇಕು ಹಣ ಕೊಟ್ಟಿದ್ದು ಲೆಕ್ಕ ಹಾಕಿದರೆ ೫ ಕೋಟಿ ರೂಪಾಯಿ ನಮಗೆ ಬಡ್ಜೆಟ್‌ನಲ್ಲಿ ಮಂಜೂರಾಗಿದೆ. ಯಾವರೀತಿ ಮುಂದಕ್ಕೆ ತೆಗೆದುಕೊಂಡು ಹೋಗ ಬೇಕು ? ಗೌರ್ನಮೆಂಟ್ ಆಫ್ ಇಂಡಿಯಾದವರನ್ನು ಮೊನ್ನೆ ಕೇಳಿದಾಗ ಹಣದ ಅಭಾವ ತುಂಬಾ ಇದೆ, ಈ ವರ್ಷವೂ ಬಹಳ ಕಷ್ಟ ಪರಿಸ್ಥಿತಿ ಇದೆ ಎಂದು ಅವರು ಹೇಳಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರದವರ ಮಧ್ಯೆ ಸ್ಟ್ಯಾಂಡ್ ಸ್ಟಿಲ್ ಅರೇಂಜ್‌ಮೆಂಟ್ ಇದ್ದ ಹಾಗೆ ಇದೆ, ಎಷ್ಟು ಸಾಧ್ಯವೋ ಅಷ್ಟನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ಜರೂರಾಗಿ ಯಾವುದಾದರೂ ಕೆಲಸ ಮಾಡಬೇಕೆಂದಿದ್ದರೆ ಅಂಥಾದ್ದನ್ನು ಮಾನ್ಯ ಸದಸ್ಯರು ಹೇಳಿದರೆ, ತೆಗೆದುಕೊಂಡು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇವತ್ತು ನಾನು ಕೆಲವು ಮಾತುಗಳನ್ನು ತೀಕ್ಷ್ಣವಾಗಿ ಮಾತನಾಡಿರಬಹುದು. ಅದಕ್ಕೆ ಅಧ್ಯಕ್ಷರು ಕ್ಷಮಿಸಬೇಕು. ಸಭೆಯೂ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಆಯುರ್ವೇದದ ಹುಡುಗರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ಆಯುರ್ವೇದದ ವಿಚಾರದಲ್ಲಿ ನನಗೆ ಒಂದು ಕಾಗದಬಂದಿದೆ. ಅವರು ಬರೆದಿರತಕ್ಕ ಕಾಗದದಲ್ಲಿ ಏನು ತಿಳಿಸಿದ್ದಾರೆ ಎಂದರೆ ಯೂನಿವರ್ಸಿಟಿ ಕೇಳಬೇಕು ಮತ್ತು ಅದಕ್ಕೆ ಒಂದು ಕಮಿಟಿ ಇದೆ, ಆ ಕಮಿಟಿಯನ್ನು ಕೇಳಬೇಕು. ಅವರ ಮಟ್ಟಿಗೆ ಯಾವ ಅಬ್ಜೆಕ್ಷನ್ ಕೂಡ ಇಲ್ಲವೆಂದು ಒಬ್ಬರು ತಿಳಿಸಿದ್ದಾರೆ. This is the urge of our students, ಅದಕ್ಕೆ ನೀವು ಏನು ಹೇಳುತ್ತೀರಿ ಎಂದು. ನಾನಾದರೂ ಟೆಲಿಗ್ರಾಂ ಕೊಟ್ಟಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಟೆಲಿಗ್ರಾಂಕೊಟ್ಟು ಉತ್ತರ ತಿಳಿದುಕೊಳ್ಳುವ ಬದಲು ಟ್ರಂಕ್ ಕಾಲ್ ಮಾಡಿ ಮಾತನಾಡಬಹುದಾಗಿತ್ತಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ.—ಯುನಾನಿ ಬಗ್ಗೆ ಅಭಿಪ್ರಾಯ ತಿಳಿಸಲಿಲ್ಲ.

SRI H. SIDDAVEERAPPA.—Unani will come as soon as the Health University comes into being. It has a place. ಯುನಾನಿ ಸಿಸ್ಟಂ ಮರೆತಿಲ್ಲ. ಯುನಾನಿ ಕಾಲೇಜು ಹಿಂದೆ ಮೈಸೂರಿನಲ್ಲಿ ಪ್ರಾರಂಭ ಆಗಿತ್ತು, ಅದು ಗಮನದಲ್ಲಿದೆ. ಅದಕ್ಕೂ ಸ್ಥಾನ ಕೊಡಬೇಕು.

ಶ್ರೀ ಎಂ. ವಿ. ರುದ್ರಪ್ಪ.—ಹೋಮಿಯೋಪತಿ ಬಗ್ಗೆ ತಿಳಿಸಲಿಲ್ಲ. ೧೯೭೨-೭೩ರಲ್ಲಿ ಇದಕ್ಕೆ ಒಂದು ಕಾಲೇಜ್ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ? ಇದರ ಬಗ್ಗೆ ಆಶ್ವಾಸನೆ ಕೊಡಬೇಕು.

ಶ್ರೀ ಹೆಚ್. ಸಿದ್ದವೀರಪ್ಪ.—ಯುನಾನಿ, ಆಯುರ್ವೇದಿಕ್, ಹೋಮಿಯೋಪತಿ, ನೇಚರೋಪತಿ, ಇವೆಲ್ಲಾ ಪ್ರತ್ಯೇಕ ಡೈರೆಕ್ಟೋರೇಟ್ ಎಸ್ಟ್ಯಾಬ್ಲಿಷ್ ಆದಮೇಲೆ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ರುದ್ರಪ್ಪನವರು ಹೋಮಿಯೋಪತಿ ಡಾಕ್ಟರ್. ಅವರು ಬೇಕಾದರೆ ಔಷಧಿ ಕೊಡುತ್ತಾರೆ. ನಾವು ಪಿ.ಎಸ್.ಸಿ. ಅವರಿಗೆ ತಿಳಿಸಿದ್ದೇವೆ. ಇನ್ನು ೨ ತಿಂಗಳೊಳಗಾಗಿ ಅವರನ್ನು ಅಪ್ಪಾಯಿಂಟ್ ಮಾಡಿ. ಇಲ್ಲದಿದ್ದರೆ ನಾವೇ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದೇವೆ. ಗೌವರ್ನರ್‌ರವರು ಆಲ್ ಇಂಡಿಯಾ ಮಟ್ಟದಲ್ಲಿ ಜನರನ್ನು ಕರೆಸಿ ನೇಮಕ ಮಾಡಬೇಕು ಎಂದು ಹೇಳಿದ್ದಾರೆ. ಆರೀತಿ ಮಾಡುತ್ತಿದ್ದೇವೆ.

ಶ್ರೀ ಕಾಗೋಡುತಿಮ್ಮಪ್ಪ.— ಶ್ರೀ ಸಿದ್ದವೀರಪ್ಪನವರು ಸಿಟ್ಟಾಗಬಾರದು. ಸಾರ್ವಜನಿಕರಿಂದ ದೂರು ಬರುತ್ತಿದೆ. ಹೌದೇ ಅಲ್ಲವೇ ? ಹೇಳಬೇಕು. ದಾವಣಗೆರೆ ಕಾಲೇಜಿನಲ್ಲಿ ೧೯೭೩-೭೪ರಲ್ಲಿ ಎಂ. ಡಿ. ಎಂ. ಎಸ್. ಗೆ ೧೨, ಸೀಟುಗಳನ್ನು ಕೊಟ್ಟಿರುವುದರಲ್ಲಿ ೮ ಸೀಟುಗಳನ್ನು ಒಂದೇ ಕೋಮಿನವರಿಗೆ ಕೊಟ್ಟಿದ್ದಾರೆಂದು ತಿಳಿದು, ಬಂದಿದೆ. ಆ ೮ ರ ಪೈಕಿ ಡೀನ್‌ರವರ ಹೆಂಡತಿಯ ತಮ್ಮನಿಗೆ ಒಂದು, ಡೀನ್‌ರ ಅಣ್ಣನ ಮಗನಿಗೆ ಒಂದು ಡೀನ್‌ರ ಸಹೋದರನಿಗೆ ಒಂದು ಹೀಗೆ ಇದ್ದರೆ ಅನ್ಯಾಯ ಅಲ್ಲವೇ ? ಹಾಗೆಯೇ ಸೆಂಟ್ರಲ್ ಮೆಷಿನ್ ಟೂಲ್ಸ್‌ಗೆ ಸಂಬಂಧಪಟ್ಟ ಸರ್ಕಾರಿ ಆಸ್ಪತ್ರೆ ಕಟ್ಟಡಕ್ಕೆ ಯಾವುದೋ ಕಾರಣದಿಂದ ೭ ಲಕ್ಷರೂಪಾಯಿ ಕೊಡುವುದನ್ನು ಕೊಡದೇ ನಿಂತಿದ್ದುದು ತಾವು ಅಧಿಕಾರಕ್ಕೆ ಬಂದಮೇಲೆ ಆ ೭ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದ ಆಜ್ಞೆ ಆಗಿದೆ ಎಂದು ತಿಳಿದು ಬಂದಿದೆ. ಇದು ನಿಜವೇ ?

ಶ್ರೀ ಹೆಚ್. ಸಿದ್ದವೀರಪ್ಪ.—ಈ ಎರಡನ್ನೂ ಬರೆದು ತಿಳಿಸಿ, ವಿಚಾರ ಮಾಡಿ ತಮಗೆ ಹೇಳುತ್ತೇನೆ. I know nothing about it.

ಶ್ರೀ ಕಾಗೋಡು ತಿಮ್ಮಪ್ಪ.—ಇನ್‌ವೆಸ್ಟಿಗೇಟ್ ಮಾಡಿ ಹೇಳಿ.

ಶ್ರೀ ಹೆಚ್. ಸಿದ್ದವೀರಪ್ಪ.—ಆಗಬಹುದು,

ಶ್ರೀ ಕೆ. ಹೆಚ್. ಹನುಮೇಗೌಡ.—ಕಳೆದ ವರ್ಷ ಪೇಪರ್‌ನಲ್ಲಿ ಬಂದಿದೆ. ತಾಲ್ಲೂಕು ಬೋರ್ಡ್ ನಡೆಸತಕ್ಕ ಆಸ್ಪತ್ರೆಗಳನ್ನು ಸರ್ಕಾರದವರೇ ವಹಿಸಿಕೊಳ್ಳುತ್ತಾರೆಂದು ಹೇಳಿದಿರಿ. ತೆಗೆದುಕೊಳ್ಳುವುದಾದರೆ ಎಷ್ಟು ದಿವಸದೊಳಗೆ ತೆಗೆದುಕೊಳ್ಳುತ್ತೀರಿ ?

ಶ್ರೀ ಹೆಚ್. ಸಿದ್ದವೀರಪ್ಪ.—ಹಣಕಾಸಿನ ಪರಿಸ್ಥಿತಿ ಸರಿಯಾದ ಕೂಡಲೇ ತೆಗೆದುಕೊಳ್ಳುತ್ತೇವೆ

ಶ್ರೀ ಕೆ. ಹೆಚ್. ಹನುಮೇಗೌಡ.—ಹಳ್ಳಿಗಳ ಕಡೆ ವ್ಯಾಸಕ್ಟಮಿ, ಟ್ಯುಬೆಕ್ಟಮಿ, ಎಂದು ಮಾಡುತ್ತಾರೆ, ದುಡ್ಡಿನ ಆಸೆ ಹುಟ್ಟಿಸಿ ಮಾಡಿಸಿಬಿಟ್ಟು ಕಳುಹಿಸಿಕೊಡುತ್ತಾರೆ. ಆದರೆ ಫಾಲೋ ಅಪ್ ಬಗ್ಗೆ ಡಾಕ್ಟರ್ ವಿಚಾರಿಸಿಕೊಳ್ಳುವುದಿಲ್ಲ. ಮೊನ್ನೆ ನಡೆದದ್ದನ್ನು ನಾನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ. ಇನ್‌ಸ್ಟ್ರಕ್ಷನ್ ಸರಿಯಾಗಿ ಕೊಡದೇ ೬ ತಿಂಗಳು ಆದಮೇಲೆ ಅನೇಕಜನ ತೊಂದರೆಗೆ ಒಳಗಾಗಿದ್ದಾರೆ ಕಷ್ಟಕ್ಕೆ ಒಳಗಾಗಿದ್ದಾರೆ. ಇದರ ಬಗ್ಗೆ ಹೈಕೋರ್ಟ್ ಜಡ್ಜ್‌ಮೆಂಟ್ ಬಂದಿರುವುದೂ ಪೇಪರನಲ್ಲಿ ವರದಿಯಾಗಿತ್ತು. ೫ ರೂಪಾಯಿ ಸಿಕ್ಕುತ್ತದೆಂದು ದುಡ್ಡಿನ ಆಸೆಗಾಗಿ ಆಪರೇಷನ್ ಮಾಡಿಸಿಕೊಳ್ಳುತ್ತಾರೆ ಹೊಲಿಗೆ ತೆಗೆಯುವವರಿಗೆ ಆಸ್ಪತ್ರೆಯವರು ಜವಾಬ್ದಾರರು ಮನೆಗೆ ಹೋದ ಮೇಲೆ ಅವರಿಗೆ ಏನು ತೊಂದರೆಯಾಗಿದೆ ಎಂದು ಯಾರೂ ವಿಚಾರಿಸದೇ ಸಾವಿರಾರು ಸಂಸಾರಗಳು ಹಾಳಾಗಿ ಹೋಗುತ್ತಿವೆ ಆದುದರಿಂದ ಯಾವಯಾವ ಆಸ್ಪತ್ರೆಯಲ್ಲಿ ವ್ಯಾಸಕ್ಟಮಿ ಮತ್ತು ಟ್ಯುಬೆಕ್ಟಮಿ ಮಾಡಿದ್ದಾರೋ ಅಲ್ಲಿ ಒಂದು ರಿಜಿಸ್ಟರು ಇಟ್ಟು ಎರಡು ವರ್ಷದವರೆಗೆ ಡಾಕ್ಟರುಗಳನ್ನು ಮತ್ತು ನರ್ಸ್‌ಗಳನ್ನು ಕಳುಹಿಸಿ ಅವರು ಯಾವ ಸ್ಥಿತಿಯಲ್ಲಿದ್ದಾರೆ ಎನ್ನುವುದನ್ನು ಇನ್‌ಸ್ಪೆಕ್ಷನ್ ಮಾಡಿಸದೇ ಹೋದರೆ ಬಹಳ ತೊಂದರೆಯಾಗುತ್ತದೆ. ಇನ್ನು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಬಗ್ಗೆ ೧೦ ಭಾಗವನ್ನು ಪಂಚಾಯ್ತಿ ಕೊಡುತ್ತದೆ, ೯೦ ಭಾಗವನ್ನು ಸರ್ಕಾರ ಕೊಡುತ್ತದೆ. ಮೊದಲು ಒಂದು ಸಾವಿರಕ್ಕೆ ಮೇಲ್ಪಟ್ಟು ಕೊಡುತ್ತೇವೆ. ದುಡ್ಡು ಕೊಟ್ಟಿದ್ದಾರೆ ಜನ ಸಂಖ್ಯೆ ಇರುವ ಕಡೆ ಅನೇಕ ಪಂಚಾಯಿತಿಯವರು ಎಸ್ಟಿಮೇಟ್‌ಗಳು ತಯಾರಾಗಿವೆ. ಈಗ ಎರಡು ಸಾವಿರಕ್ಕೆ ಮೇಲ್ಪಟ್ಟು ಕೊಡುತ್ತೇವೆ ಎಂದು ಹೇಳಿದರೆ ಅವರ ಗತಿ ಏನು ? ಅವರಿಗೆ ನೀರಿನ ಅನಾನುಕೂಲವಾಗುವುದಿಲ್ಲವೇ ? ಆದುದರಿಂದ ಇದರ ಬಗ್ಗೆ ದಯೆ ಇಟ್ಟು ಆರ್ಡರನ್ನು ರಿವೈಸ್ ಮಾಡಿ ಒಂದು ಸಾವಿರ ಜನರು ಇರುವ ಕಡೆಯೂ ನೀರು ವ್ಯವಸ್ಥೆ ಮಾಡಬೇಕು.

ಶ್ರೀ ಕೋಣಂದೂರುಲಿಂಗಪ್ಪ.—ನಾಲ್ಕಾರು ದಿವಸಗಳಿಂದ ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದಾರೆ ಮತ್ತು ಅನಿರ್ದಿಷ್ಟ ಕಾಲ ಉಪವಾಸ ಮುಷ್ಕರ ಮಾಡುತ್ತಿದ್ದಾರೆ. ಡಾ: ಕುರೂಪ್ ಅವರ ಒಂದು ಅಜ್ಞೆಯ ಪ್ರತಿ ಕೊಟ್ಟಿದ್ದೇನೆ. ಅಲ್ಲಿಗೆ ಪತ್ರ ಬರೆದು ಉತ್ತರ ಕಾಯುವ ಬದಲು, ಟ್ರಂಕ್‌ಕಾಲ್ ಮಾಡಿ ಅವರ ಅಭಿಪ್ರಾಯ ತಿಳಿದು ಕೊಂಡು ವಿದ್ಯಾರ್ಥಿಗಳ ಮುಷ್ಕರ ಮುಕ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ:—ಈ ವಿಚಾರದಲ್ಲಿ ನನಗೆ ಬಂದಿರುವ ಕಾಗದದಲ್ಲಿ ಅವರು ಈ ರೀತಿ ಹೇಳಿದ್ದಾರೆ:—

"Government of India have no objection. However, it may be pointed out that this matter primarily concerns the State Government and the University concerned, at present. It is suggested that for advice on any technical matter, a reference may be made by the State Government to the Central Council of Indian Medicine, New Delhi." ಎಂದು ನಾನು ನಮ್ಮ ಸರ್ಕಾರದ ಅಭಿಪ್ರಾಯವನ್ನು ಹೇಳಿದ್ದೇನೆ. ಇವರಿಬ್ಬರೂ ಟೆಕ್ನಿಕಲ್ ಬಾಡೀಸ್, ಆದಕಾರಣ ಯೂನಿವರ್ಸಿಟಿ ಮತ್ತು ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸನ್ ಅವರಿಬ್ಬರೂ ಒಪ್ಪಿಕೊಳ್ಳುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲವೆಂದು ಹೇಳಿದ್ದೇನೆ.

I do not come in the way. The hon. member may please tell them to break their fast.

ಶ್ರೀ ಕೋಣಂದೂರು ಲಿಂಗಪ್ಪ.— ತಾವು ಇಲ್ಲಿ ಹೇಳುವುದನ್ನು ಅಲ್ಲಿಗೇ ಬಂದು ಹೇಳಿದರೆ ಒಳ್ಳೆಯದಾಗುತ್ತದೆ. ಬೇಕಾದರೆ ನಾನೂ ಸಹ ಅಲ್ಲಿಗೆ ತಮ್ಮ ಜೊತೆಯಲ್ಲಿ ಬರುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅದೇ ಕಷ್ಟ ಏಕೆಂದರೆ ಅಲ್ಲಿ ಏನೇನು ನಡೆದಿದೆಯೋ ನನಗೆ ಗೊತ್ತಿಲ್ಲ.

MADAM SPEAKER.—I will now put the motion to the vote of the House.

The question is.—

"That the respective sums not exceeding the amounts mentioned in the list of Demands be granted to Government to defray the charges

which will come in course of payment during the financial year for the period ending with 31st day of March 1975, in respect of Demand Nos. 27, 28, and 29,"

The motion was adopted and the sums were granted.

As ordered by the Chair the motion for Demand for grants adboted by the House are reproduced below.

Demand No. 27—Medical Services and Family Planning

"That a sum not exceeding Rs. 24,72,62,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Medical Services and Family Planning." Year ending 31st day of March 1975 in respect of "Medical Services and Family Planning."

Demand No. 28 Public Health and Sanitation.

"That a sum not exceeding Rs. 5,09,79,000 inclusive of the sum granted 'on account' be granted to the Government to defray the chares which will came in course of payment during the financial year ending 31st day of March 1975 in respect of "Public Health and Sanitation"

Demand No. 29 Public Health Engineering.

"That a sum not exceeding Rs. 10,14,91,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Public Health Engineering."

Demand Nos 1, 17, 50, 51, and 52,

SRI S. M. KRISHNA (Minister for Industries and Parliamentary Affairs).—Madam, on the recommendation of the Governor, I beg to move;

"That a sum not exceeding Rs. 58 79,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respeet of Demand No. 1 "State Legislature and Elections."

"That a sum not exceeding Rs. 5,00,000 inclusive of the sum granted 'on account' be granted to the Government the defray the

(SRI S. M. KRISHNA)

charges which will come in course of payment during the financial year ending 31st day of March 1975 in respect of Demand No. 17 "Supplies and Disposals."

"That a sum not exceeding Rs. 23,82,20 000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand Na. 50 "Industries and Mines and Geology."

"That a sum not exceeding Rs. 3,87,13,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 51 "Village and Small Industries (Excluding Sericulture)."

"That a sum not exceeding Rs. 1,13,67,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 52 "Sericulture,"

MADAM SPEAKER.—Motion moved.

"That a sum not exceeding Rs. 58,79,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975in respect of Demand No. 1 "State Legislature and Elections,"

"That a sum not exceeding Rs. 5,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 17 "Supplies and Disposals."

"That a sum not exceeding Rs. 23,82,20,000 inclusive of the sum granted 'on account' ba granted to the Government to defray the charges which will come in course of payment during the financial year ending 31st day of March 1975 in respect of Demand No. 50 "Industries and Mines and Geology."

"That a sum not exceeding Rs. 3,87,13,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 51 'Village and Small Industries (Excluding Sericulture)."

"That a sum not exceeding Rs. 1,13,67,000 inclusive of the sum granted 'on account' be granted to the Government to defray the the

defray the charges which will come in course of payment during the financial year ending 31st day of March 1975 in respect of Demand No. 52 "Sericulture."

† ಶ್ರೀ ಎಸ್. ಬಂಗಾರಪ್ಪ, (ಸೊರಬ),— ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಮಂತ್ರಿ ಸಂಸದೀಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಸ್ಟೇಟ್ ಲೆಜಿಸ್ಲೇಚರ್ ಅಂಡ್ ಎಲಕ್ಷನ್, ಇದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಒಂದೇ ಒಂದು ಮಾತನ್ನು ಹೇಳುವುದಾದರೆ, ಈಗ ಮೇಲ್ಮನೆ ಏನಿದೆ, ಅದನ್ನು ರದ್ದು ಮಾಡಬೇಕು ಎಂದು ಅಗ್ರಹಪೂರ್ವಕವಾಗಿ ನಾನು ನನ್ನ ಅಭಿಪ್ರಾಯವನ್ನು ಇಡುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಪಶ್ಚಿಮಬಂಗಾಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಆಡಳಿತದಲ್ಲಿದ್ದಾಗ ಅಲ್ಲಿನ ಮೇಲ್ಮನೆಯನ್ನು ರದ್ದು ಮಾಡತಕ್ಕಂಥ ಒಂದು ತೀರ್ಮಾನವನ್ನು ಕೈಕೊಂಡಿತು ಅದೇ ರೀತಿ ಬೇರೆ ರಾಜ್ಯಗಳಲ್ಲಿ ಯೂ ಸಹ ಈ ಮೇಲ್ಮನೆ ಅನಾವಶ್ಯಕ ಎಂದು ಅಭಿಪ್ರಾಯ ಪಟ್ಟಿದ್ದಾರೆ. ನಾನು ಸಹ ನಮ್ಮ ರಾಜ್ಯದಲ್ಲಿ ಮೇಲ್ಮನೆ ಅನಗತ್ಯ ಎಂದು ಹಿಂದೆ ಕೂಡ ಹೇಳಿದ್ದೇನೆ. ಈ ಒಂದು ಸದನ ಸಾಕು, ಏಕೆಂದರೆ ಜನರಿಂದ ನೇರವಾಗಿ ಆರಿಸಿ ಬಂದಿರುವ ಪ್ರತಿನಿಧಿಗಳು ಈ ಸದನದಲ್ಲಿರುವುದರಿಂದ ಇದಕ್ಕೆ ಹೆಚ್ಚಿನ ಮೌಲ್ಯ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಇದೆ. ಆದಕಾರಣ ಈ ಸದನಕ್ಕೆ ಹೆಚ್ಚಿನ ಒಂದು ಅಧಿಕಾರ ಮತ್ತು ಅಂತಿಮ ತೀರ್ಮಾನ ಇರಬೇಕೇ ಹೊರತು, ಮತ್ತೊಂದು ಸದನ ಇರುವುದು ಅನವಶ್ಯಕ ಎಂದು ಹೇಳುತ್ತೇನೆ.

ಇನ್ನು ಸಿರಿಕಲ್ಚರ್ ವಿಷಯದಲ್ಲಿ ನನಗೆ ಹೆಚ್ಚಿನ ಅನುಭವ ಇಲ್ಲದಿರುವ ಕಾರಣ, ಆ ಬಗ್ಗೆ ಮಾತನಾಡಲು ಮಾನ್ಯ ನಾಗಣ್ಣನವರಿಗೇ ಬಿಡುತ್ತೇನೆ. ಏಕೆಂದರೆ ಅವರಿಗೆ ಅದರಲ್ಲಿ ಹೆಚ್ಚಿನ ಅನುಭವ ಮತ್ತು ಆಳವಾದ ಅಭ್ಯಾಸವಿದೆ. ಆದಕಾರಣ ಇದರ ಬಗ್ಗೆ ಅವರೇ ಮಾತನಾಡ ಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ನಾನು ಕೈಗಾರಿಕೋದ್ಯಮದ ಬಗ್ಗೆ ಮಾತನಾಡಲು ಇಚ್ಛೆಪಡುತ್ತೇನೆ. ಕೇಂದ್ರಸರ್ಕಾರದಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯಕ್ಕೆ ಕೈಗಾರಿಕೋದ್ಯಮದ ಬಗ್ಗೆ ಎಷ್ಟು ಹಣ ಕೊಡುಗೆಯಾಗಿ ಬಂದಿತ್ತು, ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಬರುತ್ತದೆ ಅನ್ನತಕ್ಕಂಥ ಅಂಶ ಬಹಳ ಪ್ರಾಮುಖ್ಯವಾದುದು. ೫ನೇ ಪಂಚವಾರ್ಷಿಕ ಯೋಜನೆಯ ಕರಡು ಪ್ರಕಾರ ನಮ್ಮ ರಾಜ್ಯ ಸರ್ಕಾರದ ಬೇಡಿಕೆ ಮೀಡಿಯಂ ಅಂಡ್ ಹೆವಿ ಇಂಡಸ್ಟ್ರೀಸ್ ಬಗ್ಗೆ ಇದ್ದಿದ್ದು ೩೦ ಕೋಟಿ ರೂಪಾಯಿಗಳು, ಆದರೆ ಅಲಾಟ್ ಆಗಿರುವುದು ೧೪ ಕೋಟಿ ರೂಪಾಯಿಗಳು ಮಾತ್ರ. ಈ ಅಂಶವನ್ನು ನಾವು ಮರೆಯುವ ಹಾಗಿಲ್ಲ. ಮತ್ತೊಂದು ಮುಖ್ಯವಾದ ಅಂತಹೆಂವರೆ, ವಿಲೇಜ್ ಅಂಡ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ನಮ್ಮ ಸರ್ಕಾರದವರು ಕೇಳಿದ್ದು ೧೫ ಕೋಟಿ ರೂಪಾಯಿಗಳು, ಆದರ ಕೇಂದ್ರದವರು ಅಲಾಟ್ ಮಾಡಿರುವುದು ೫ ಕೋಟಿ ರೂಪಾಯಿಗಳು ಮಾತ್ರ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಇದೇ ಬಾಬಿಗೆ ೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಜಾಸ್ತಿ ಮಾಡದೆ ಇಷ್ಟೊಂದು ಕಡಿಮೆ ಮಾಡಲು ಕಾರಣವೇನು ? ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೋದ್ಯಮ ಬೆಳೆಯಬೇಕು ಎಂದು ಹೇಳುತ್ತಿರುವಾಗ, ಆ ಬಗ್ಗೆ ರಾಜ್ಯಸರ್ಕಾರದವರು ಕೇಂದ್ರಸರ್ಕಾರದವರ ಮುಂದೆ ಒಂದು ಒಳ್ಳೆಯ ವಾದವನ್ನು, ಒಂದು ಒಳ್ಳೆಯ ಕೇಸನ್ನು ಸಮಂಜಸವಾದ ರೀತಿಯಲ್ಲಿ ಮಂಡಿಸಬೇಕಾಗುತ್ತದೆ. ಮತ್ತು ಆ ಬಗ್ಗೆ ಅವರನ್ನು ಒಪ್ಪಿಸಿ ಹೆಚ್ಚು ಹಣವನ್ನು ಪಡೆಯಬೇಕಾಗುತ್ತದೆ. ಆದರೆ ೪ನೇ ಪಂಚವಾರ್ಷಿಕ ಯೋಜನೆಗಿಂತ ಕಡಿಮೆ ಹಣವನ್ನು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಪಡೆದಿರುವುದನ್ನು ನೋಡಿದರೆ ಮತ್ತು ಇಷ್ಟೊಂದು ವ್ಯತ್ಯಾಸವಾಗಿರುವುದನ್ನು ನೋಡಿದರೆ ಇದು ರಾಜ್ಯ ಸರ್ಕಾರದ ಶಕ್ತಿಹೀನತೆಯನ್ನು ತೋರಿಸುತ್ತದೆ. ನೀವು ಕೇಳಿದ್ದು ೧೮ ಕೋಟಿ ರೂಯಿಗಳಾದರೆ ಅದರಲ್ಲಿ ಕೊಟ್ಟಿರುವುದು ಕೇವಲ ೫ ಕೋಟಿ ರೂಪಾಗಳು ಮಾತ್ರ. ಯಾವಾಗಲೂ ಒಂದು ಪಂಚವಾರ್ಷಿಕ ಯೋಜನೆಯಿಂದ ಇನ್ನೊಂದು ಪಂಚವಾರ್ಷಿಕ ಯೋಜನೆಗೆ ಜಾಸ್ತಿಯಾಗಬೇಕೆ ಹೊರತು ಅದು ಕಡಿಮೆ ಯಾಗಬಾರದು, ಆದರೆ ೧೫ ಕೋಟಿ ರೂಪಾಯಿಗಳ ಪೈಕಿ ಅವರು ಕೇವಲ ೫ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ನೋಡಿದರೆ, ಬಹಳಷ್ಟು ಹಣ ಕೊರತೆ ಬೀಳುತ್ತದೆ, ಇದರಿಂದ ನಾವು ಹೆಚ್ಚು ಕೆಲಸಗಳನ್ನು ಕೈಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ತೀರ್ಮಾನವಾಗುತ್ತದೆ. ಕೇಳಿದ ಹಣಕ್ಕಿಂತ ಹೆಚ್ಚು ಪಡೆಯಬೇಕಾಗಿತ್ತು. ಆದರೆ ಕಡಿಮೆ ಪಡೆಯಲು ಕಾರಣವೇನು ಎಂಬುದೇ ನನ್ನ ವಾದ.

(ಶ್ರೀ ಎಸ್. ಬಂಗಾರಪ್ಪ)

3-00 P.M.

ಹಾಗೇನೆ ೩ ಅಂಶಗಳನ್ನು ಕೂಡ ಈ ಸಂದರ್ಭದಲ್ಲಿ ಬೆಳಕಿಗೆ ತರಬೇಕು. ಮೈನ್ಸ್ ಅಂಡ್ ಜಿಯಾಲಜಿ ಇದರಲ್ಲಿ ಬರುತ್ತದೆ. ಇದಕ್ಕೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರನ್ನು ಕೇಳಿದ್ದು 10/2 ಕೋಟಿ ರೂಪಾಯಿಗಳು. ಆದರೆ ಅವರು ಕೊಟ್ಟಿದ್ದು ಒಂದು ಕೋಟಿ ಮಾತ್ರ. ಈ ಅಂಶವನ್ನು ನಾನು ಏತಕೆ ಕೊಡುತ್ತಿದ್ದೇನೆ. ಎಂದರೇ ರಾಜ್ಯ ಸರಕಾರದವರು ಈ ಕೈಗಾರಿಕಾ ಉದ್ಯಮವನ್ನು ಬೆಳೆಸುವುದಕ್ಕೆ ಕಳೆದ ಪಂಚವಾರ್ಷಿಕ ಯೋಜನೆಯಲ್ಲೇ ಎಷ್ಟು ಹಣವನ್ನು ಕೇಂದ್ರ ಸರಕಾರದಿಂದ ಪಡೆದಿದ್ದರೋ ಅದಕ್ಕಿಂತ ಜಾಸ್ತಿ ಹಣವನ್ನು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಪಡೆಯಬೇಕೇ ವಿನಾ ಅದು ಕಡಿಮೆಯಾಗ ಬಾರದು. ಅದು ಕಡಿಮೆ ಆದರೆ ಕೆಲಸ ಬ್ಯಾಂಕ್ ಕಾರ್ಯಗಳು ಕುಂಠಿತವಾಗುತ್ತವೆ ಎಂದು ನೇರವಾದ ಅರ್ಥ ಬರುತ್ತದೆ. ಅದನ್ನು ತಪ್ಪಿಸಬೇಕು. ರಾಜ್ಯ ಸರ್ಕಾರದವರು ಈ ಬಾಬಿಗೆ ಕೇಂದ್ರದಿಂದ ಹೆಚ್ಚಿನ ಹಣವನ್ನು ಪಡೆಯತಕ್ಕಂಥಾ ಪ್ರಯತ್ನದಲ್ಲಿ ವಿಫಲಗೊಂಡಿದ್ದಾರೆ. ಎಂದು ನಾನು ಆಪಾದನೆ ಮಾಡುತ್ತೇನೆ ಕಳೆದ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚು ಹಣವನ್ನು ಹೊಸ ಪಂಚವಾರ್ಷಿಕ ಯೋಜನೆಯಲ್ಲಿ ಪಡೆಯುವ ಸಾಮರ್ಥ್ಯವನ್ನು ರಾಜ್ಯ ಸರ್ಕಾರದವರು ವ್ಯಕ್ತಗೊಳಿಸಿಲ್ಲ.

ಹಾಗೇನೆ ಕೈಗಾರಿಕೆಗಳು ರಾಜ್ಯದಲ್ಲಿ ಯಾವರೀತಿಯಾಗಿರಬೇಕು. ಹೆವಿ ಇಂಡಸ್ಟ್ರೀಸ್ ಮೀಡಿಯಂ ಇಂಡಸ್ಟ್ರೀಸ್ ಬಗ್ಗೆ ಹೆಚ್ಚಿಗೆ ಪದೇ ಪದೇ ನಾನು ಈ ಸದನದಲ್ಲಿ ಹೇಳಿದ್ದೇನೆ. ಕೈಗಾರಿಕೆಗಳನ್ನು ಪ್ರಾರಂಭ ಮಾಡತಕ್ಕ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲೇ ಪ್ರಾರಂಭ ಮಾಡುವುದಕ್ಕೆ ಬದಲಾಗಿ ಹೊರಗಡೆ ಶಿವಮೊಗ್ಗ, ತುಮಕೂರು, ಮುಂತಾದ ಪ್ರದೇಶಗಳಲ್ಲಿ ಪ್ರಾರಂಭ ಮಾಡುವುದು ಒಳ್ಳೆಯದು. ಹೊಸದಾಗಿ ಕೈಗಾರಿಕೆಗಳನ್ನು ಬೆಂಗಳೂರು ನಗರದಲ್ಲೇ ಪ್ರಾರಂಭ ಮಾಡುವುದಾದರೆ ಇಲ್ಲಿ ಜನಸಂಖ್ಯೆ ಹೆಚ್ಚಾಗುತ್ತದೆ. ಜನಗಳ ಆರೋಗ್ಯ ಕೆಟ್ಟು ಹೋಗುತ್ತದೆ. ಜನಸಂಖ್ಯೆ ಹೆಚ್ಚಾಗುವುದರಿಂದ ಕೈಗಾರಿಕೆಗಳು ಕೇಂದ್ರೀಕೃತ ವಾಗುವುದರಿಂದ ಆಹಾರದ ಸಮಸ್ಯೆ ನೀರಿನ ಸಮಸ್ಯೆ ಉದ್ಭವವಾಗುತ್ತದೆ ಜೊತೆಗೆ ಈ ಪ್ರದೇಶದಲ್ಲಿರತಕ್ಕ ಬೆಳವಣಿಗೆ ಸಾಕಷ್ಟು ಸಮತೋಲನದಲ್ಲಿ ಬರಬೇಕು ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎನ್ನುವ ಹಾಗೆ ಮಾಡುವುದು ಸರಿಯಲ್ಲ. ಮಾನ್ಯ ಕೃಷ್ಣ ಅವರು ಕೈಗಾರಿಕಾ ಮಂತ್ರಿಗಳಾದ ಮೇಲೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಲೈಸೆನ್ಸ್ ಕೊಡಬೇಕಾದರೆ ಬೆಂಗಳೂರು ನಗರಕ್ಕೆ ಎಷ್ಟು ಲೈಸೆನ್ಸ್ ಕೊಟ್ಟಿದ್ದಾರೆ. ಬೆಂಗಳೂರು ನಗರವನ್ನು ರಾಜ್ಯದ ಇತರ ಭಾಗಗಳಿಗೆ ಎಷ್ಟು ಲೈಸೆನ್ಸ್ ಕೊಟ್ಟಿದ್ದಾರೆ. ಎಂಬುದನ್ನು ನೋಡುವುದಾದರೆ ಬೆಂಗಳೂರು ನಗರಕ್ಕೆ ಹೆಚ್ಚು ಲೈಸೆನ್ಸ್ ಕೊಟ್ಟಿದ್ದಾರೆ. ಎಂಬುದು ಗೊತ್ತಾಗುತದೆ. ಈ ದೃಷ್ಟಿಯಿಂದ ಬೆಂಗಳೂರು ನಗರದಲ್ಲಿ ಕೈಗಾರಿಕೆಗಳು ಕೇಂದ್ರೀಕೃತವಾಗುವುದನ್ನು ತಪ್ಪಿಸದಿದ್ದರೆ ಮುಂದೆ ಮುಂದೆ ಬಹಳ ಅನಾಹುತವಾಗುವ ಸಂದರ್ಭ ಬರುತ್ತದೆ. ಯಾವಾಗಾದರೂ ಯುದ್ಧಗಳು ಆಗತಕ್ಕಂಥಾ ಕಾಲ ಬಂದರೆ ತೊಂದರೆಯಾಗುತ್ತದೆ ಒಂದು ವೇಳೆ ಯಾವುದಾದರೊಂದು ಯುದ್ಧ ಬಂದು ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಬಾಂಬು ಹಾಕಿದ ಹಾಗೆ ಬೆಂಗಳೂರಿನ ಮೇಲೆ ಬಾಂಬು ಹಾಕಿದರೆ ಇಲ್ಲಿರತಕ್ಕ ಕೈಗಾರಿಕೆಗಳೆಲ್ಲವೂ ಸಂಪೂರ್ಣವಾಗಿ ನಾಶವಾಗುತ್ತದೆ. ಆದ್ದರಿಂದ ನಮಗೆ ಈ ರಾಷ್ಟ್ರವನ್ನು ಕಟ್ಟತಕ್ಕ ಕೈಗಾರಿಕೋದ್ಯಮವನ್ನು ಬೆಳೆಸತಕ್ಕ ಇಚ್ಛೆ ಇದ್ದರೆ ಅವುಗಳನ್ನು ಉಳಿಸುವುದರಲ್ಲಿಯೂ ಇರಬೇಕು. ಈಗ ಸ್ಥಾಪನೆ ಮಾಡತಕ್ಕ ಕೈಗಾರಿಕೆಗಳನ್ನು ಮುಂದೆ ಬರತಕ್ಕ ನಮ್ಮ ಪೀಳಿಗೆ ನಮ್ಮ ಜನಾಂಗ ಅನುಭವಿಸಿ ಕೊಂಡು ಹೋಗಬೇಕು. ಆ ರೀತಿ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕ ನೀತಿಯನ್ನು ಮಾರ್ಪಾಡು ಮಾಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ನಾನು ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ. ಈಗ ಸರ್ಕಾರದವರು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದರಲ್ಲಿ ಬೆಂಗಳೂರು ನಗರಕ್ಕೆ ಯಾವರೀತಿ ಪ್ರಾಮುಖ್ಯ ತೆಯನ್ನು ಕೊಟ್ಟಿದ್ದಾರೆಯೋ ಅದೇ ರೀತಿ ಬೇರೆ ಭಾಗಗಳಿಗೂ ರಾಜ್ಯದ [illegible] ಜಿಲ್ಲೆಗಳಿಗೂ ಪ್ರಾಮುಖ್ಯತೆ ಯನ್ನು ಕೊಡಬೇಕು. ಆದ್ದರಿಂದ ಕೈಗಾರಿಕೋದ್ಯಮವನ್ನು ಬರೀ ಬೆಂಗಳೂರು ನಗರದಲ್ಲಿ ಬೆಳೆಸುವುದ ಕ್ಕಾಗುವುದಿಲ್ಲ. ಹಳ್ಳಿಗಳ ಕಡೆಯೂ ಜಿಲ್ಲೆಗಳ ಕಡೆ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಹೆಚ್ಚಿನ ಗಮನ ಕೊಡಬೇಕು. ಬೆಂಗಳೂರು ನಗರದಲ್ಲಿ ಬೇಕಾದಷ್ಟು ಕೈಗಾರಿಕೆಗಳು ಇವೆ. ಮೈಕೋ ಫ್ಯಾಕ್ಟರಿ ಇದೆ. ಎಚ್ಎಎಲ್. ಇದೆ. ಎನ್‌ಜಿಇಎಫ್. ಇವೆ. ರೆಂಕೋ ಇದೆ. ಎಚ್ಎಂಟಿ. ಇದೆ. ಬಿಇಎಲ್. ಇದೆ. ಹೀಗೆ ಬೇಕಾದಷ್ಟು ಕೈಗಾರಿಕೆಗಳು ಬೆಂಗಳೂರು ನಗರದಲ್ಲಿವೆ. ಆದ್ದರಿಂದ ಇನ್ನು ಮುಂದೆ ಕೈಗಾರಿಕೆಗಳನ್ನು ಹಳ್ಳಿ ಗಾಡುಗಳಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಈ ಸಂದರ್ಭದಲ್ಲಿ ಒಂದು ಅಂಶವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ ಅದೇನೆಂದರೆ ತಮಗೆ ಗೊತ್ತಿರುವ ಹಾಗೆ ಕಾಳಿನದಿ ಪ್ರಾಜೆಕ್ಟ್ ಏನು ಕಟ್ಟುತ್ತಿದ್ದಾರೆ. ಅದರಲ್ಲಿ ಸೂಪ ತಾಲ್ಲೂಕಿನ ತಹಸೀಲ್ದಾರರ ಆಫೀಸನ್ನು ಸೇರಿಸಿಕೊಂಡು ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಮುಳುಗಡೆ ಆಗುತ್ತದೆ,

ಎಂದು ನಾನು ಕೇಳಿದ್ದೇನೆ, ಅಲ್ಲಿ ಅನೇಕ ಮಿಲಿಯನ್ ಟನ್ಸ್ ಆಫ್ ಐರನ್ ಓರ್ ಸಿಕ್ಕುತ್ತದೆ. ಎಂದು ಕೇಳಿದ್ದೇವೆ. ಆ ಐರನ್ ಓರನ್ನು ತೆಗೆದು ಪರದೇಶಕ್ಕೆ ಎಕ್ಸ್‌ಪೋರ್ಟ್ ಮಾಡಿ ಆದರಿಂದ ಫಾರಿನ್ ಎಕ್ಸ್‌ಚೇಂಜ್ ಬೇಕಾದಷ್ಟು ಅರ್ನ್ ಮಾಡಬಹುದು. ಎಕ್ಸ್‌ಪೋರ್ಡಬಲ್ ಕ್ವಾಂಟಿಟಿ ಆಫ್ ಐರನ್ ಓರ್ ಬೇಕಾದಷ್ಟು ಎಂದರೆ ಮಿಲಿಯನ್ ಟನ್‌ಗಳಷ್ಟು ಐರನ್ ಓರ್ ಸೂಪಾ ತಾಲ್ಲೂಕಿನಲ್ಲಿ ಸಿಕ್ಕುತ್ತದೆ. ಇದನ್ನು ನಾನು ಶ್ರೀಮಾನ್ ಚೆನ್ನಬಸಪ್ಪನವರ ಗಮನಕ್ಕೆ ತರುತ್ತಿದ್ದೇವೆ. ಏತಕ್ಕೆಂದರೆ ಅವರು ಕಾಳಿನದಿ ಪ್ರಾಜೆಕ್ಟಿಗೆ ಹೆಚ್ಚು ಗಮನವನ್ನು ಕೊಟ್ಟಿದ್ದಾರೆ. ಆದ್ದರಿಂದ ಸೂಪಾ ತಾಲ್ಲೂಕಿನಲ್ಲಿರತಕ್ಕ ಮಿಲಿಯನ್ ಟನ್‌ಗಳಷ್ಟು ಕಬ್ಬಿಣದ ಅದುರನ್ನು ಕೂಡಲೇ ತೆಗೆಯಬೇಕು. ಕಾಳಿನದಿ ಯೋಜನೆ ಪ್ರಾಜೆಕ್ಟ್ ಸಂಪೂರ್ಣವಾದರೆ ಆ ಕಬ್ಬಿಣದ ಅದುರು ಸಿಕ್ಕತಕ್ಕ ಪ್ರದೇಶ ಸಂಪೂರ್ಣವಾಗಿ ಮುಳುಗಿ ಹೋಗಿ ಆ ಕಬ್ಬಿಣದ ಅದುರನ್ನು ತೆಗೆಯುವುದಕ್ಕಾಗುವುದಿಲ್ಲ. ಆದ್ದರಿಂದ ಮೈಸೂರು ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಈ ಕಬ್ಬಿಣದ ಅದುರನ್ನು ತೆಗೆಯತಕ್ಕ ಕೆಲಸವನ್ನು ಮಾಡಬೇಕು. ಅದರಲ್ಲಿ ಒಂದು ತೊಂದರೆಯಾಗುತ್ತದೆ. ಅದು ಏನೆಂದರೆ ಇಂಡಿಯಾ ಸರ್ಕಾರದವರು ಈ ಮೈಸೂರು ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರಿಗೆ ಈ ಕಬ್ಬಿಣದ ಅದುರನ್ನು ತೆಗೆಯುವುದಕ್ಕೆ ಓ. ಕೆ. ಕೊಡುತ್ತಿಲ್ಲ. ಅವರು ವಿಪರೀತ ತೊಂದರೆ ಮತ್ತು ಕಿರುಕುಳವನ್ನು ಕೊಡುತ್ತಿದ್ದಾರೆ, ಆದ್ದರಿಂದ ಆ ಕೆಲಸ ಆಗುತ್ತಿಲ್ಲ. ಈಗ ಈ ಕಾಳಿ ನದಿಯ ಪ್ರಾಜೆಕ್ಟಿನ ಕೆಲಸ ಕೂಡಲೇ ಮುಗಿಯಬೇಕು ಎಂದು ಈ ಸದನದಲ್ಲಿ ಬೇಕಾದಷ್ಟು ಸಾರಿ ಒತ್ತಾಯ ಬಂದಿದೆ ಆದ್ದರಿಂದ ಈ ಯೋಜನೆಯ ಕೆಲಸ ತ್ವರಿತದಾಗಿ ನಡೆಯುತ್ತಿದೆ. ಆದರೆ ಎಂ. ಎಂ. ಡಿ. ಸಿ. ಯವರು ಈ ಕಬ್ಬಿಣದ ಅದುರನ್ನು ತೆಗೆಯುವುದಕ್ಕೆ ಕೇಂದ್ರ ಸರ್ಕಾರದವರು ಅಡ್ಡ ಬರುತ್ತಿದ್ದಾರೆ. ಆದರಿಂದ ರಾಜ್ಯ ಸರ್ಕಾರದವರು ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ಸ್ಪಷ್ಟವಾಗಿ ಚರ್ಚೆ ಮಾಡುತ್ತಿಲ್ಲ. ಎಂದು ನಾನು ಆಪಾದನೆ ಮಾಡುತ್ತೇನೆ. ರಾಜ್ಯ ಸರ್ಕಾರದವರು ಪ್ರಧಾನ ಮಂತ್ರಿಗಳನ್ನು ಕಂಡು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಈ ರೀತಿ ಸೂಪಾ ತಾಲ್ಲೂಕಿನಲ್ಲಿರತಕ್ಕ ಕಬ್ಬಿಣದ ಅದುರನ್ನು ತೆಗೆಯುವುದಕ್ಕೆ ಕೇಂದ್ರ ಸರ್ಕಾರದವರು ಅಡ್ಡ ಬರುತ್ತಿದ್ದಾರೆ, ಎಂದು ಹೇಳಿ ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಂಡು ಸೂಪಾ ತಾಲ್ಲೂಕಿನಲ್ಲಿರತಕ್ಕ ಕಬ್ಬಿಣದ ಅದುರನ್ನು ತೆಗೆಯುವುದಕ್ಕೆ ರಾಜ್ಯ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ. ಮತ್ತು ಈ ಕಬ್ಬಿಣದ ಅದುರನ್ನು ತೆಗೆಯುವ ಸಂಬಂಧದಲ್ಲಿ ಇಂಡಿಯಾ ಸರ್ಕಾರದವರು ಏನು ತೊಂದರೆ ಮತ್ತು ಕಿರುಕುಳವನ್ನು ಕೊಡುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತಾರೆ ಎಂದು ನಾನು ನಂಬಿದ್ದೇನೆ. ಮಾನ್ಯ ಕೈಗಾರಿಕಾ ಸಚಿವರು ಇದರ ಬಗ್ಗೆ ಇಂಡಿಯಾ ಸರ್ಕಾರದೊಡನೆ ಏನಾದರೂ ಪ್ರಯತ್ನ ಮಾಡಿದ್ದಾರೆಯೇ ಹೇಗೆ ಎನ್ನುವ ಬಗ್ಗೆ ನಾನು ಅವರಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇವೆ.

ಇನ್ನು ಕುದುರೆಮುಖ ಯೋಜನೆಯ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಹೆಚ್ಚಾಗಿ ಅದರ ಬಗ್ಗೆ ನಾನು ಇವತ್ತು ವ್ಯಾಖ್ಯಾನ ಮಾಡುವುದಕ್ಕೆ ಹೋಗದೆ ಇದ್ದರೂ ಕೂಡ ಕೆಲವು ಅಂಶಗಳನ್ನು ಮಾತ್ರ ಹೇಳುತ್ತೇನೆ. ಒಂದೆರಡು ದಿವಸಗಳ ಮುಂಚೆ ಇದರ ಬಗ್ಗೆ ಈ ಸಭೆಯಲ್ಲಿಯೇ ಪ್ರಶ್ನೋತ್ತರಗಳು ಆಗಿವೆ. ನಾನು ಹಿಂದೂ ಪತ್ರಿಕೆಯಲ್ಲಿ ಒಂದನೇ ತಾರೀಖಿನಂದು ಒಂದು ವಿಚಾರವನ್ನು ಓದಿ ನೋಡಿದೆ. ಶ್ರೀಮತಿ ಇಂದಿರಾ ಗಾಂಧಿಯವರು ಇರಾನಿಗೆ ಹೋಗಿದ್ದಾರೆ. ಅಲ್ಲಿ ಸಂಬಂಧಪಟ್ಟ ಮಂತ್ರಿಗಳಲ್ಲಿ ಇದರ ಬಗ್ಗೆ ಮಾತುಕತೆ ನಡೆಸಿದ್ದಾರೆ. ಅವರು ಇದರಲ್ಲಿ ಹೆಚ್ಚಿನ ಉತ್ಪನ್ನ ತೆಗೆಯಲಿಕ್ಕೆ ಸಹಕಾರವನ್ನು ಕೊಡುತ್ತಾರೆಂದು ಹೇಳಿದ್ದಾರೆ. ಒಂದು ವೇಳೆ ಇರಾನ್ ದೇಶದ ಸರ್ಕಾರ ನಮಗೆ ಸಹಕಾರವನ್ನು ಅವರು ಹೇಳಿದ ಹಾಗೆ ಕೊಡುವುದಾದರೆ, ಉತ್ಪನ್ನದಲ್ಲಿ ಅರ್ಧದಷ್ಟು ಮಾತ್ರ ನಾವು ಪಡೆಯುತ್ತೇವೆಂದು ಇರಾನ್ ಸರ್ಕಾರ ಹೇಳಿದೆ ಎಂಬ ಅಂಶವನ್ನು ಸಹ ನಾನು ಓದಿದ್ದೇವೆ. ಇದರಲ್ಲಿ ಪ್ರೊಡಕ್ಷನ್ ಅಂದಾಜು ಎಷ್ಟು ಅರ್ಧ ಭಾಗ ಅವರಿಗೆ ಕೊಟ್ಟರೆ ನಮಗೆ ಅದರಿಂದ ಲಾಭ ಇದೆಯೋ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕು. ಈ ಕುದುರೆ ಮುಖ ಯೋಜನೆ ಬಹಳ ಮುಖ್ಯವಾದ ಯೋಜನೆ. ಇದು ಎಂದಿಗೂ ಸಣ್ಣ ಯೋಜನೆಯಾಗುವುದಿಲ್ಲ. ಅಂಕಿ ಅಂಶಗಳ ಸಹಿತ ಇದರ ಬಗ್ಗೆ ತಮ್ಮ ಉತ್ತರವನ್ನು ನಾನು ನಿರೀಕ್ಷಣೆ ಮಾಡುತ್ತೇನೆ.

ಇನ್ನು ಕಾಪರ್ ವಿಷಯದಲ್ಲಿ ಚಿತ್ರದುರ್ಗದ ಇಂಗ್ಲದಾಳ್ ಪ್ರಾಜೆಕ್ಟ್ ಯೋಜನೆಯಲ್ಲಿ ಕಾಪರನ್ನು ತೆಗೆಯುತ್ತೇವೆಂದು ಹೇಳಿದ್ದೀರಿ. ಇದುವರೆಗೆ ಎಷ್ಟು ಕಾಪರ್ ತೆಗೆದಿದ್ದೀರಿ ? ಪ್ರೊಡಕ್ಷನ್ ಎಷ್ಟು ಆಗಿದೆ? ಲಾಭವೋ ? ನಷ್ಟವೋ ? ಇವಕ್ಕೂ ಅಂಕಿ ಅಂಶಗಳ ಸಹಿತ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕು. ಇನ್ನು ತಿಂತಣಿ ಪ್ರಾಜೆಕ್ಟ್ ವಿಷಯ, ಮೊನ್ನೆ ಗುಲ್ಬರ್ಗಾ ಚುನಾವಣೆಯ ಕಾಲದಲ್ಲಿ ಹೋಗಿ ಈ ಪ್ರಾಜೆಕ್ಟನ್ನು ಉದ್ಘಾಟನೆ ಮಾಡಿದ್ದೂ ಆಯಿತು ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ನೀವು ಎಷ್ಟು ತ್ವರಿತಗತಿಯಲ್ಲಿ ಅಸ್ತಿಭಾರ ಶಿಲೆಯನ್ನು ಒಂದು ಪ್ರಾಜೆಕ್ಟ್‌ಗೆ ಹಾಕಿ ಬರುತ್ತೀರೋ ಅಷ್ಟೇ ಶೀಘ್ರವೇಗದಲ್ಲಿ ಆ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ನೀವು

(ಶ್ರೀ ಎಸ್. ಬಂಗಾರಪ್ಪ)

ಪ್ರಯತ್ನ ಮಾಡಬೇಕು. ಚುನಾವಣೆಯ ಕಾಲದಲ್ಲಿ ಬಹಳ ಸುಲಭವಾಗಿ ಅಲ್ಲಿಗೆ ಇಂತಹ ಸಂದರ್ಭಗಳಲ್ಲಿ ಹೋಗಿ ಬರಬಹುದು ಅದಕ್ಕೆ ಮುಖ್ಯ ಮಂತ್ರಿಗಳ ಅಧ್ಯಕ್ಷತೆ, ತಮ್ಮ ಉದ್ಘಾಟನೆ ಆಮೇಲೆ ಇವನ್ನು ಕಾರ್ಯ ರೂಪಕ್ಕೆ ತರದೇ ಇರುವುದು ಈಗಾಗಲೇ ನಿಮಗೆ ಬಹಳ ಚೆನ್ನಾಗಿ ಅರ್ಥವಾಗುತ್ತದೆ.

ಶ್ರೀ. ಹುಚ್ಚಮಾಸ್ತಿಗೌಡ.— ಆಗ ಅಸೆಂಬ್ಲಿ ನಡೆಯುತ್ತಿರಲಿಲ್ಲ. ಅದಕ್ಕಾಗಿ ಹೋಗಿದ್ದರು

ಶ್ರೀ. ಎಸ್. ಬಂಗಾರಪ್ಪ.— ಗುಲ್ಬರ್ಗ ಚುನಾವಣೆ ಆಗ ಇದ್ದುದರಿಂದ ಆ ಕಾಲದಲ್ಲಿ ಅಲ್ಲಿಗೆ ಹೋಗಿ ಅತಿ ಶೀಘ್ರವಾಗಿ ತಿಂತಿಣಿ ಯೋಜನೆಯ ಉದ್ಘಾಟನೆ ಮಾಡಿದರು ಬಹಳ ದೊಡ್ಡ ದೊಡ್ಡ ಕಮಾನುಗಳನ್ನು ಕಟ್ಟಿಸಿ ಅಲ್ಲಿ ಒಂದು ಬಹು ದೊಡ್ಡ ಸಮಾರಂಭವನ್ನು ಏರ್ಪಡಿಸಿದ್ದರು. ಅಲ್ಲಿನ ಜನರಿಗೆ ಒಂದು ಒಳ್ಳೆಯ ಅಭಿಪ್ರಾಯ ಇವರ ಬಗ್ಗೆ ಬರುವ ಹಾಗೆ ಈ ಯೋಜನೆಯನ್ನು ಚುನಾವಣೆಯ ಕಾಲದಲ್ಲಿ ಪ್ರಾರಂಭ ಮಾಡಿದರು. ಅಲ್ಲಿನ ಜನ ವೋಟು ಬೀಳುವ ಹಾಗೆ ಮಾಡಿದರು. ಅಂದರೆ ಆ ಜನರನ್ನು ಇವರು ಮರುಳು ಮಾಡುವಂತೆ ಮಾಡಿಬಿಟ್ಟರು. ಇಲ್ಲಿ ಕಾಲುವೆಗಳನ್ನು ಎಷ್ಟು ತೆಗೆಯಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದಾರೆಂಬುದನ್ನು ಅಂಕಿಅಂಶಗಳ ಸಮೇತ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. ಈ ಯೋಜನೆಯನ್ನು ತಯಾರು ಮಾಡಿದ್ದರೆ ಇನ್ನೊಂದು ಚುನಾವಣೆಯ ತಂತ್ರವೆಂದು ನಾನು ಹೇಳಬೇಕಾಗಿದೆ. ಆ ಒಂದು ಕಾರಣದಿಂದ ಈ ಒಂದು ಯೋಜನೆಯನ್ನು ಕಾರ್ಯಗತ ಮಾಡುತ್ತೇವೆಂದು ಪ್ರಾರಂಭ ಮಾಡಿದ್ದಾರೆಂದು ನಾನು ನಿಸ್ಸಂದೇಹವಾಗಿ ಹೇಳಬಹುದು.

ಇನ್ನು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಕತ್ತಾಳೆ ಯೋಜನೆ ಕಾರ್ಯಗತ ಮಾಡಬೇಕೆಂದು ಯೋಚಿಸಿದ್ದಾರೆ. ಇದೂ ಕೂಡ ಕಾವೇರಿಗೆ ಸಂಬಂಧಪಟ್ಟ ಯೋಜನೆ ಇದನ್ನು ತಾವೇ ಹೋಗಿ ಉದ್ಘಾಟನೆ ಮಾಡುತ್ತೀರೋ ಅಥವಾ ರಾಜ್ಯಪಾಲರು ಅಲ್ಲಿಗೆ ಬರುತ್ತಾರೋ ಅಥವಾ ರಾಷ್ಟ್ರಾಧ್ಯಕ್ಷರು ಬರುತ್ತಾರೋ ಗೊತ್ತಿಲ್ಲ. ಅಂತೂ ಅಲ್ಲಿಯೂ ನೀವು ಹೋಗಿ ಒಂದು ಪೋಸ್ ಕೊಟ್ಟು ಬರಬೇಕು. ಇದೆಲ್ಲಾ ಹಾಸನ ಜಿಲ್ಲೆಯ ವಿಚಾರವು. ನಾನು ಈ ಯೋಜನೆ ತಯಾರು ಆಗಬಾರದು, ಪ್ರಾರಂಭವೂ ಆಗಬಾರದು ಎಂಬ ಅಭಿಪ್ರಾಯದಿಂದ ಎಂದಿಗೂ ಹೇಳುತ್ತಾ ಇಲ್ಲ. ನಾನು ಹೇಳುವುದಿಷ್ಟೇ ಎಷ್ಟು ಹುರುಪಿನಿಂದ ಅಲ್ಲಿ ಹೋಗಿ ಈ ಯೋಜನೆಗಳನ್ನು ಪ್ರಾರಂಭ ಮಾಡುತ್ತೀರೋ ಅಷ್ಟೇ ಆಸಕ್ತಿಯಿಂದ ಈ ಯೋಜನೆ ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಕೇವಲ ರಾಜಕೀಯಕ್ಕೆ ಬಣ್ಣ ಹಚ್ಚಿ ಈ ದೇಶದ ಹಿತವನ್ನು ತಾವು ಕಡೆಗಣಿಸುತ್ತಿದ್ದೀರೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ ವಿಷಯದಲ್ಲಿ ನಾನು ಕೇವಲ ಒಂದು ಮಾತನ್ನು ಹೇಳಬೇಕಾಗಿದೆ. ಅದರ ಬಗ್ಗೆ ಬಹಳವಾದ ಅಪಾದನೆಗಳಿವೆ. ಅಲ್ಲಿನ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಏನೇನು ಅನ್ಯಾಯಗಳು ಆಗುತ್ತಿವೆ. ಪ್ರಿಂಟಿಂಗ್ ನಡೆಯುತ್ತಿರುವ ವಿಷಯದಲ್ಲಿ ಬೇಕಾದಷ್ಟು ಹಗರಣಗಳು ನಡೆದಿವೆ. ಮಂಗಳೂರಿನ ಗೊಬ್ಬರ ಬಹಳ ಒಳ್ಳೆಯದೆಂದು ಒಂದು ಪ್ರತಾಪಗ್ರಾಂಡ ಇದೆ. ಬೊಂಬಾಯಿಯಲ್ಲಿ ಬಾಂಬೆ ಪ್ರೆಸ್‌ನಲ್ಲಿ ಪ್ರಿಂಟ್ ಆಗಿರುವುದಾಗಿದೆ, ಅಲ್ಲಿ ಕನ್ನಡಿಗರ ಪ್ರೆಸ್‌ಗಳೂ ಇವೆ, ಇಲ್ಲಿ ಅಂತಹ ಪೇಪರ್‌ಗಳು ಸಿಗುವುದಿಲ್ಲವೇ ? ಏಕೆ ಇವರು ಬೊಂಬಾಯಿಯಲ್ಲಿ ಪ್ರಿಂಟ್ ಮಾಡಿಸಿ ಇಲ್ಲಿನ ಹಣವನ್ನು ಬಂದವರ ಪಾಲಿಗೆ ತುಂಬುತ್ತಾರೆ, ಎಂಬುದಾಗಿ ನಾನು ಕೇಳ ಬೇಕಾಗಿದೆ. ಇದು ಯಾವ ಒಂದು ಕಮಿಟಿಯಿಂದ ಈ ರೀತಿಯಾಗಿ ಆಗುತ್ತದೆಯೆಂಬ ವಿಷಯವನ್ನು ಹೇಳಬೇಕು. ಇದು ಬಹಳ ಮುಖ್ಯ ಇಲ್ಲಿಯವರೆಗೂ ನಡೆದಂಥ ಹಗರಣದ ಬಗ್ಗೆ ವಿಚಾರ ಮಾಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ. ಅದು ಎಷ್ಟರಲ್ಲಿ ಆಗುತ್ತದೋ ಇನ್ನೂ ತಡವಾಗುತ್ತದೆ ಎಂಬ ಅಂಶವನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು.

ಇನ್ನು ಹಟ್ಟಿ ಗೋಲ್ಡ್ ಮೈನ್ಸ್ ವಿಷಯ ೧೯೬೨–೬೩ನೇ ಇಸವಿಯಿಂದ ಇಲ್ಲಿಯವರೆಗೆ ಇದರಿಂದ ಎಷ್ಟರ ಮಟ್ಟಿಗೆ ಲಾಭ ಬಂದಿದೆಯೆಂದು ಅಂಶವನ್ನು ಅಂಕಿಅಂಶಗಳ ಮೂಲಕ ತಿಳಿಸಿದ್ದೀರಿ. ೧೯೬೩-[illegible]ನೇ ಸಾಲಿನಲ್ಲಿ ೪೦ ಲಕ್ಷ ಬೆಲೆ ಬಾಳುವ ಬಂಗಾರವನ್ನು ಗಣಿಯಿಂದ ತೆಗೆದಿದ್ದಾರೆಂದು ಹೇಳಿದ್ದೀರಿ. ಉತ್ಪಾದನೆಯಲ್ಲಿ ಉತ್ತಮವಾಗಿ ಮುಂದುವರಿಯುತ್ತಿದೆಯೆಂದು ಹೇಳಿದ್ದೀರಿ ನನಗೆ ತಿಳಿದಿರುವ ವರದಿ ಪ್ರಕಾರ ಹಟ್ಟಿ ಚಿನ್ನದ ಗಣಿಯಲ್ಲಿ ವಿಪರೀತವಾಗಿ ವೇಸ್ಟೇಜ್ ಇದೆ. ಅಲ್ಲಿನ ಖರ್ಚನ್ನು ಹಿಗ್ಗಿಸಿ ಅಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಿದರೆ ಇನ್ನೂ ಜಾಸ್ತಿಯಾಗಿ ಬಂಗಾರವನ್ನು ಉತ್ಪತ್ತಿಮಾಡಿ ದೇಶದ [illegible] ಮಾಡಬಹುದೆಂಬ ಅಂಶವನ್ನು ನಾನು ತಿಳಿಸುತ್ತಿದ್ದೇನೆ.

ಇನ್ನು ಇಂಡಸ್ಟ್ರೀಸ್ ಪ್ರಾರಂಭಮಾಡುವುದಕ್ಕೆ ಪವರ್ ಕಟ್ ಬಗ್ಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಪಬ್ಲಿಕ್ ಸೆಕ್ಟರ್ ಕೈಗಾರಿಕೆಗಳು ಏನಿವೆಯೋ ಅವಕ್ಕೆ ನನ್ನ ಸಲಹೆ ಪವರ್ ಕಟ್ ಇಡಬಾರದು ಆ ಒಂದು ಕಂಡೀಷನನ್ನು ಇಂಪೋಜ್ ಮಾಡಬಾರದು ಆದರೆ ಪ್ರೈವೇಟ್ ಸೆಕ್ಟರ್ ಕೈಗಾರಿಕೆಗಳು ಏನಿವೆಯೋ ಅವಕ್ಕೆ ಖಂಡಿತವಾಗಿ ಪವರ್ ಕಟ್ ಇಂಪೋಜ್ ಮಾಡಿ ಪಬ್ಲಿಕ್ ಸೆಕ್ಟರ್ ಕೈಗಾರಿಕೆಗೆ ಆ ರೀತಿಯಾಗಿ ಪವರ್ ಕಟ್ ಇಂಪೋಜ್ ಮಾಡುವುದರಿಂದ ಅನೇಕ ರೀತಿಯಲ್ಲಿ ಅಲ್ಲಿ ಪ್ರೊಡಕ್ಷನ್ನಿಗೆ ಧಕ್ಕೆ ಬರುತ್ತದೆ. ನನಗೆ ತಿಳಿದಿರುವ ಹಾಗೆ ಇದರಿಂದ ಅನೇಕ ಕಾರ್ಖಾನೆಗಳು ನಷ್ಟ ಹೊಂದಿವೆ ಆದ್ದರಿಂದ ಪ್ರೈವೇಟ್ ಸೆಕ್ಟರ್ ಕೈಗಾರಿಕೆಗಳಿಗೆ ಈ ಒಂದು ಕಂಡೀಷನನ್ನು ಅಗ್ರಿಮೆಂಟಿನಲ್ಲಿಯೇ ಇಂಪೋಜ್ ಮಾಡಬೇಕು. ಅದನ್ನು ಸ್ಪಷ್ಟವಾಗಿ ಅವರಲ್ಲಿ ಕಾಣಿಸಬೇಕು. ಇಲ್ಲದಿದ್ದರೆ ಲೈಸೆನ್ಸ್ ಕೊಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಶುರು ಮಾಡಬೇಕು. ಇದನ್ನು ಒಂದು ವೇಳೆ ಸರ್ಕಾರದವರು ಎಲ್ಲಿ ಹೊರೆತು ಬಿಡುತ್ತಾರೋ ಎಂದು ನಾನು ಹೇಳಬಹುದು. ಇದರಿಂದಲೇ ಸರ್ಕಾರದ ಆಶ್ರಯದಲ್ಲಿರತಕ್ಕ ಅನೇಕ ಕೈಗಾರಿಕೆಗಳು ಈಗ ಕುಂಠಿತವಾಗುತ್ತಿವೆ, ಎಂಬುದಾಗಿ ನಾನು ಹೇಳುತ್ತೇನೆ.

ಇನ್ನು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಕಂಪೆನಿಯವರು ಪಬ್ಲಿಕ್ ಸೆಕ್ಟರ್ ಆಗಿದ್ದರೂ ಅಲ್ಲಿ ತಯಾರು ಮಾಡತಕ್ಕ ವಸ್ತುಗಳು ಬಹಳ ಬೆಲೆಯಾದಂತಹುಗಳು. ಅದರ ಹಾಗೆ ಮೈಸೂರು ಸ್ಯಾಂಡಲ್ ಸೋಪ್ ಲಿಮಿಟೆಡ್, ಎನ್.ಜಿ.ಇ.ಎಫ್. ಮುಂತಾದ ಕಾರ್ಖಾನೆಗಳಿಂದ ಅನೇಕ ಬೆಲೆಬಾಳುವ ವಸ್ತುಗಳು ತಯಾರಾಗುತ್ತಿವೆ ಇವೂ ಕೂಡ ಪಬ್ಲಿಕ್ ಸೆಕ್ಟರ್ ಆಗಿವೆ. ಆದುದರಿಂದ ಯಾವುದೇ ಸರ್ಕಾರಿ ಕ್ಷೇತ್ರದಲ್ಲಿ ತಯಾರು ಮಾಡತಕ್ಕ ವಸ್ತುಗಳು ಏನಿವೆಯೋ ಅವಕ್ಕೆ ಒಳ್ಳೆಯ ಬೆಲೆ ಬರುತ್ತದೆ. ಆದ್ದರಿಂದ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಕಂಪೆನಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡಬೇಕು. ಅಂತಹವರಿಗೆ ಲಾಟರಿ ಟಿಕೇಟು ಮಾರುವ ಕೆಲಸವನ್ನು ಹಚ್ಚಿದ್ದಾರೆ. ಇದು ನಾಚಿಕೆಗೇಡು. ಇದರಿಂದ ಅವರಿಗೆ ಈಗಾಗಲೇ ಲಾಸ್ ಆಗುತ್ತದೆ. ಇತ್ತೀಚೆಗೆ ಅವರು ಮೈಸೂರು ಸ್ಯಾಂಡಲ್ ಸೋಪಿನ ಏಜೆನ್ಸಿಯನ್ನು ತೆಗೆದುಕೊಂಡಿದ್ದಾರೆಂದು ನಾನು ಕೇಳಿದ್ದೇನೆ.

ಈ ಹಿಂದೆ ಇದರ ಏಜನ್ಸಿಯನ್ನು ಖಾಸಗಿಯವರಿಗೆ ಕೊಟ್ಟಿದ್ದರು. ಖಾಸಗಿಯವರಿಗೆ ಇದರ ಏಜನ್ಸಿಯನ್ನು ಕೊಟ್ಟರೆ ಅವರಿಗೆ ೧೫—೨೦ ಪರ್ಸೆಂಟ್ ಕಮಿಷನ್ ಕೊಡಬೇಕಾಗುತ್ತದೆ ಆದರೆ ಮೈಸೂರು ಸೇಲ್ಸ್ ಅಂಡ್ ಇಂಟರ್ ನ್ಯಾಷನಲ ಇವರಿಗೆ ಕೊಟ್ಟರೆ ಇವರು ಆರು ಪರ್ಸೆಂಟಿನಲ್ಲಿ ಇದರ ಬಗ್ಗೆ ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೆಂದು ನಾನು ಕೇಳಿದ್ದೇನೆ. ಆದುದರಿಂದ ಇವರಿಗೆ ಆ ಲಾಟರಿ ಟಿಕೆಟ್ಟುಗಳ ಮಾರಾಟ ತಪ್ಪಿಸಿ ಈ ಪ್ರಾಮುಖ್ಯವಾದ ಕೆಲಸವನ್ನು ಅವರಿಗೆ ಒಪ್ಪಿಸಬೇಕೆಂದು ಒತ್ತಾಯ ಮಾಡುತ್ತೇನೆ ಆದರೆ ಈ ಮೈಸೂರ್ ಸೇಲ್ಸ್ ಅಂಡ್ ಇಂಟರ್ ನ್ಯಾಷನಲ್ಸ್ ಇವರು ಹಿಂದೆ ನಮ್ಮ ಟಿ.ಇ.ಸಿ. ಮೆಷನರಿ ವಿಚಾರದಲ್ಲೂ ಏಜನ್ಸಿ ಪಡೆದು ಮಧ್ಯೆ ಅದನ್ನು ಕೈಬಿಟ್ಟರೆಂದೂ ಅದರಿಂದ ನಮ್ಮ ಸರ್ಕಾರಕ್ಕೆ ಬಹಳ ಹಾನಿಯಾಯಿತೆಂದೂ ಕೇಳಿದ್ದೇನೆ ಆದುದರಿಂದ ಮಾನ್ಯ ಉಪಸಭಾಪತಿ ಈ ವಿಚಾರದಲ್ಲಿ ಸರಿಯಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ನಾನು ಇದೇ ಸಂದರ್ಭದಲ್ಲಿ ನಮ್ಮ ಮೈಸೂರು ಗಂಧದ ಸಾಬೂನಿನ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದಕ್ಕೆ ಹೊರದೇಶಗಳಲ್ಲಿ ಬಹಳ ಬೇಡಿಕೆ ಇದೆಯೆಂದು ನಾನು ಕೇಳಿದ್ದೇನೆ. ಆದರೆ ಇದಕ್ಕೆ ತಕ್ಕ ಪ್ರಚಾರ ನಡೆಯುತ್ತಿಲ್ಲ. ನಡೆದಿದ್ದರೆ ಇದರ ವ್ಯಾಪಾರ ಇನ್ನೂ ಜಾಸ್ತಿ ಆಗುತ್ತಿತ್ತು. ಈ ದಿವಸ ಆ ಲಕ್ಸ್ ಮತ್ತು ರೆಕ್ಸೋ ಸೋಪುಗಳಿವೆ ಅವುಗಳಿಗೆ ವರ್ಷದಲ್ಲಿ ತನ್ನ ಅಂದಾಜಿನ ಪ್ರಕಾರ ಅಡ್ವರ್‌ಟೈಜ್‌ಮೆಂಟಿಗಾಗೇ ಅವರು ಬೊಂಬಾಯಿ, ಮದ್ರಾಸ್, ಕಲ್ಕತ್ತ ಡೆಲ್ಲಿ ಇತ್ಯಾದಿಗಳಲ್ಲಿ ಮಾಡತಕ್ಕ ಅಡ್ವರ್‌ಟೈಜ್‌ಮೆಂಟ್ ೨ ಕೋಟಿಗೂ ಮೀರುತ್ತದೆ. ಅವರ ಉತ್ಪನ್ನದ ಪ್ರಮಾಣವೇ ೮೦ ಕೋಟಿಯ ಮೇಲಿರುತ್ತದೆ; ಹಾಗೇ ಖಾಸಗಿಯವರು ತಮ್ಮ ವಸ್ತುಗಳ ಬಗ್ಗೆ ಪ್ರಚಾರ ನಡೆಸುತ್ತಿದ್ದಾರೆ ನಮ್ಮ ಸರ್ಕಾರದ ಸಿನೀಮಾ ಮಂದಿರಗಳಲ್ಲಿ ಇದರ ಪ್ರಚಾರ ಕಾರ್ಯವನ್ನು ನಡೆಸುತ್ತಿದ್ದಾರೆ. ಇದು ಬಹಳ ಶೋಚನೀಯ. ಇನ್ನಾದರೂ ಇದರ ಪ್ರಚಾರವನ್ನು ಜಾಸ್ತಿ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲದೆ ಇದೇ ಸಂದರ್ಭದಲ್ಲಿ ನಾನು ಮತ್ತೊಂದು ಅಂಶವನ್ನು ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ ಅದೇನೆಂದರೆ ಇಲ್ಲಿ ನಮ್ಮ ಸರ್ಕಾರದವರು ಜನರ ಸೈಕಾಲಜಿಯನ್ನು ಕಾಲಕಾಲಕ್ಕೆ ಹೇಗೆ ಬದಲಾಗುತ್ತಿದೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ತಕ್ಕಹಾಗೆ ಇಲ್ಲಿ ಒಂದು ಪೆಟ್ರೋಲಿಯಂ ಬೇಸ್ಡ್ ಸಿಂತೆಟಿಕ್ ಡಿಟರ್ಜೆಂಟ್ ಪ್ಲಾಂಟನ್ನು ಹಾಕಬೇಕಾದ್ದು ಅಗತ್ಯವಾಗಿದೆ. ಜನರು ಬಟ್ಟೆಗೆ ಸಾಬೂನನ್ನು ಹಚ್ಚಿ ಒಗೆಯುವುದನ್ನು ಕೈಬಿಟ್ಟು ಈಗೇನಿದ್ದರೂ ಬಟ್ಟೆಗಳನ್ನು ಸರ್ಫ್, ಡೆಟ್ ಇತ್ಯಾದಿ ಪೌಡರುಗಳ ನೀರಿನಲ್ಲಿ ಅದ್ದಿ ತೆಗೆದರೆ ಸಾಕೆಂದು ಆ ಮಟ್ಟಕ್ಕೆ ಬರುತ್ತಿದ್ದಾರೆ. ಆದುದರಿಂದ ಇಲ್ಲಿ ಒಂದು ಆ ಪೆಟ್ರೋಲಿಯಂ ಬೇಸ್ಡ್ ಸಿಂತೆಟಿಕ್ ಡಿಟರ್ಜೆಂಟ್ ಪ್ಲಾಂಟನ್ನು ಹಾಕಬೇಕೆಂದೂ ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯವಿದೆಯೆಂದೂ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಎಸ್. ಬಂಗಾರಪ್ಪ)

ಇನ್ನು ಸಿಮೆಂಟಿನ ವಿಚಾರಕ್ಕೆ ಬಂದರೆ—ನಮ್ಮ ರಾಜ್ಯದಲ್ಲಿ ಬಹಳ ಒಳ್ಳೆ ದರ್ಜೆಯ ಸುಣ್ಣಕಲ್ಲು ಹೇರಳವಾಗಿ ಸಿಕ್ಕುತ್ತದೆ. ಇಲ್ಲಿ ಈ ದಿವಸ ಸಿಮೆಂಟಿಗೆ ಬಹಳ ದುರ್ಭಿಕ್ಷಬಂದಿದೆ. ಆದುದರಿಂದ ಏಕೆ ಈ ರಾಜ್ಯದಲ್ಲಿ ಇನ್ನೂ ಎರಡು ಮೂರು ಸಿಮೆಂಟ್ ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡಬಾರದೆಂದು ಕೇಳುವು ದಕ್ಕೆ ಇಷ್ಟಪಡುತ್ತೇನೆ? ನಮ್ಮಲ್ಲಿ ಮಳೆ ಚೆನ್ನಾಗಿ ಬಿದ್ದರೆ ಪವರಿಗೇನೂ ಕೊರತೆಯಿರುವುದಿಲ್ಲ. ಆದುದರಿಂದ ಇಲ್ಲಿ ಇನ್ನೂ ೩-೪ ಸಿಮೆಂಟ ಫ್ಯಾಕ್ಟರಿಗಳನ್ನು ಸ್ಥಾಪಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ದಾಂಡೇಲಿ ಪೇಪರ್ ಮಿಲ್ಲಿನ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಈ ಪೇಪರ್ ಮಿಲ್ಲಿನ ಮಾಲೀಕರು—ಗುಜರಾತಿಗಳು, ಬಂಗಾಳಿಗಳು ಮತ್ತು ಸೋಮಾನಿ ಎನ್ನತಕ್ಕವರು. ಅವರಿಗೆ ನಮ್ಮ ಸರ್ಕಾರದವರು ಬಹಳ ಅಗ್ಗದ ದರದಲ್ಲಿ ಪವರನ್ನೂ ಮತ್ತು ಪೇಪರನ್ನು ತಯಾರಿಸತಕ್ಕ ರಾ ಮೆಟೀರಿ ಯಲ್ಸನ್ನು ಅಂದರೆ ಮರಗಳನ್ನು ಅಗ್ಗದ ದರದಲ್ಲಿ ಒದಗಿಸುತ್ತಿದ್ದಾರೆ. ಆದಾಗ್ಯೂ ಅವರಿಂದ ರಾಜ್ಯಕ್ಕೇನೂ ಸಹಾಯವಾಗುತ್ತಿಲ್ಲ. ನಾನು ಕೇಳಿದ್ದರಲ್ಲಿ ಎಲ್ಲ ರಾಜ್ಯಗಳಲ್ಲೂ ಹೊರಗಡೆಯಿಂದ ಬಂದು ಕೈಗಾರಿಕೆಗಳನ್ನು ನಡೆಸತಕ್ಕ ಜನರು ಯಾರಿದ್ದಾರೆ ಅವರುಗಳು ಉತ್ಪತ್ತಿಮಾಡತಕ್ಕ ವಸ್ತುಗಳಲ್ಲಿ ನೂರಕ್ಕೆ ನಲವತ್ತರಷ್ಟು ಸಾಮಾನುಗಳನ್ನು ಆ ರಾಜ್ಯ ಸರ್ಕಾರಕ್ಕೆ ಕೊಡತಕ್ಕ ಒಂದು ಪದ್ಧತಿಯುಂಟೆಂದು ಕೇಳಿದ್ದೇನೆ. ಆದರೆ ಈ ಕಾರ್ಖಾನೆಯವರು ಇಲ್ಲಿ ತಯಾರಿಸತಕ್ಕ ಪೇಪರಿನಲ್ಲಿ ಶೇಕಡ ೫ ರಷ್ಟು ಪೇಪರನ್ನು ಕೂಡ ಇವರು ರಾಜ್ಯ ಸರ್ಕಾರಕ್ಕೆ ಕೊಡುತ್ತಿಲ್ಲವಂತೆ. ಇವರು ಇಲ್ಲಿ ತಯಾರಿಸಿದ ಪೇಪರನ್ನು ನೇರವಾಗಿ ಬೊಂಬಾಯಿಗೆ ಸಾಗಿಸುತ್ತಿದ್ದಾರೆ ಅದರಿಂದ ಬರತಕ್ಕ ಸೇಲ್ಸ್ ಟ್ಯಾಕ್ಸ್ ಕೂಡ ನಮಗೆ ತಪ್ಪಿ ಹೋಗಿದೆ. ಅಂದಾಗ ನಾವು ಇವರಿಗೇಕೆ ಅಗ್ಗದ ದರದಲ್ಲಿ ಇಲ್ಲಿ ನೀರು, ಪವರು ಮತ್ತು ಮರಗಳನು ಒದಗಿಸಬೇಕು? ಇವರ ಅಗ್ರಿಮೆಂಟನ್ನು ಕೂಡಲೆ ರದ್ದು ಮಾಡಿ ಇಲ್ಲವೇ ಇವರಿಗೆ ಸರಬರಾಯಿ ಮಾಡ ತಕ್ಕ ವಸ್ತುಗಳ ಬೆಲೆಯನ್ನು ಹೆಚ್ಚಿಸ ಬೇಕೆಂದು ಹೇಳುತ್ತೇನೆ. ಮತ್ತು ಇವರು ಇಲ್ಲಿ ಉತ್ಪತ್ತಿಮಾಡತಕ್ಕ ವಸ್ತುಗಳಲ್ಲಿ ಶೇ ೪೦ ರಷ್ಟು ವಸ್ತುಗಳನ್ನು ನಮ್ಮ ಸರ್ಕಾರಕ್ಕೆ ಕೊಡುವಂತೆ ಷರತ್ತನ್ನು ವಿಧಿಸಬೇಕೆಂದು ಇದರ ಬಗ್ಗೆ ಮಾನ್ಯ ಸಚಿವರು ಉತ್ತರಕೊಡತಕ್ಕ ಕಾಲದಲ್ಲಿ ಅವರ ತೀರ್ಮಾನವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಅವರು ನಮ್ಮ ಷರತ್ತಿಗೆ ಒಪ್ಪದಿದ್ದರೆ ಅವರಿಗೆ ಪವರ್ ಮತ್ತು ರಾಮೆಟೀ ರಿಯಲ್ಸ್ ಕಾಲಕ್ಕೆ ಸಾಕಷ್ಟು ಸಿಕ್ಕದಂತೆ ಅವರನ್ನು ಉಪವಾಸ ಕೆಡವಬೇಕೆಂದು ಹೇಳುತ್ತೇನೆ. ಅವರು ಇಲ್ಲಿಂದ ಪರಿವಾಟಿ ಕೀಳಬೇಕು ಇಲ್ಲವೇ ನಮ್ಮ ಷರತ್ತಿಗೆ ಒಪ್ಪಿಕೊಳ್ಳಬೇಕು, ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಾನು ಕೊನೆಯದಾಗಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ವಿಚಾರದಲ್ಲ ಕೆಲವು ಮಾತುಗಳನ್ನಾಡಬೇಕಾಗಿದೆ. ಆದರೆ ಇದರ ಚರಿತ್ರೆ ಬಹಳ ದೊಡ್ಡದು. ನಾನು ಕಳೆದ ಅಧಿವೇಶನ ದಲ್ಲೂ ಕೂಡ ಇದರ ಪ್ರಸ್ತಾಪ ಮಾಡಿದ್ದೆ. ಆಗ ಇದೇ ಮಾನ್ಯ ಸಚಿವರು ಉತ್ತರ ಕೊಡುತ್ತ ಇದರ ಉತ್ತಮ ಆಡಳಿತಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇವೆಂಬ ಭರವಸೆಯನ್ನು ಆ ದಿನ ಕೊಟ್ಟಿದ್ದರು. ನಮ್ಮ ಸರ್ಕಾರದವರು ಹೊರಡಿಸತಕ್ಕ ಒಂದು ಹೇಳಿಕೆಯ ಪ್ರಕಾರ ನನಗೆ ತಾರೀಖು ೮ ಅಥವಾ ೯ ಏಪ್ರಿಲ್ ೧೯೭೦ರ ಎಕ್ಸ್‌ಪ್ರೆಸ್ ಪೇಪರಲ್ಲಿ ಬಂದಿದ್ದ ಹೇಳಿಕೆಯ ಪ್ರಕಾರ ಸುಮಾರು ನಲವತ್ತೆರಡೂವರೆ ಕೋಟಿ ರೂಪಾಯಿಗಳಷ್ಟು ವ್ಯಾಪಾರವಾಗಿ ಒಂದೂವರೆ ಕೋಟಿ ರೂಪಾಯಿ ನಿವ್ವಳ ಲಾಭವನ್ನು ಸಂಪಾದಿಸಿದೆ ಎಂದೂ ಇದು ತನ್ನ ಪ್ರೊಡಕ್ಷನ್ನಿನಲ್ಲಿ ರೆಕಾರ್ಡ್ ಮುಟ್ಟಿದೆಯೆಂದೂ ಬರೆದಿತ್ತು.

೩-೩೦ P. M.

ಸೇಲ್ಸ್ ೪೨ ಕೋಟಿ ಚಿಲ್ಲರೆ ಇರಬೇಕು, ಅದರಲ್ಲಿ ಒಂದೂವರೆ ಕೋಟಿ ನೆಟ್ ಪ್ರಾಫಿಟ್ ಎಂದಾಗೆ ಬಂತು. ತಮ್ಮ ಹೇಳಿಕೆ ಪ್ರಕಾರ ಇದನ್ನು ಒಪ್ಪುತ್ತೇನೆ. ಎಷ್ಟೋ ವರ್ಷದಿಂದ ನಷ್ಟದಲ್ಲಿ ಕೆಲಸಮಾಡು ತ್ತಿದ್ದ ಈ ಕಾರ್ಖಾನೆಗೆ ಈ ಸಾರಿ ಒಂದೂವರೆ ಕೋಟಿ ರೂಪಾಯಿ ಲಾಭ ಬಂದಿರುವುದು ಸಂತೋಷಕರ ವಾದ ವಿಚಾರ ಆದರೆ ಅನೇಕ ನ್ಯೂನತೆಗಳಿವೆ, ಅವನ್ನು ಹೋಗಲಾಡಿಸಿದರೆ ಇಂದು ಒಂದೂವರೆ ಕೋಟಿಯಲ್ಲ, ೧೫ ಕೋಟಿಯವರೆಗೆ ನಿವ್ವಳ ಲಾಭ ಪಡೆಯ ಬಹುದು. ಮನಸ್ಸು ಮಾಡಿದರೆ ಅದಕ್ಕೆ ಅವಕಾಶವಿದೆ. ಬಿಗಿ ಬೇಕು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಕೊಳ್ಳಬೇಕು, ಹಾಗೆ ಮಾಡಿದರೆ ಸಾಧ್ಯ. ಸುಲಭವಾಗಿ ಹಿಂದೆ ಯಾರೂ ಮಾಡಿಲ್ಲ, ಒಂದೂವರೆ ಕೋಟಿ ಲಾಭ ಪಡೆದಿದ್ದೇವೆ ಎಂದು ಭುಜ ಚಪ್ಪರಿಸಿ ಕೊಳ್ಳಬಾರದು. ಒಂದೂವರೆ ಕೋಟಿ ಲಾಭ ಬಂದಿರುವುದಕ್ಕೆ ಈ ಕಾರ್ಖಾನೆಯ ಕಾರ್ಮಿಕರನ್ನು ಅಭಿನಂದಿಸಬೇಕು. ಹಗಲೂರಾತ್ರಿ ಅವರು ಕಷ್ಟಪಟ್ಟು ದುಡಿದು ಬೆವರು ಸುರಿಸಿ ಕೈಕಾಲು ಮುರಿದು

ಕೊಂಡು ಇಷ್ಟು ಉತ್ಪತ್ತಿ ಮಾಡಿದ್ದಾರೆ. ಇನ್ನೂ ಅವರಿಗೆ ಪುರಂಪು ಬರುವಹಾಗೆ ಮಾಡಿ ಹೆಚ್ಚು ಲಾಭ ಗಳಿಸಬೇಕು ಮತ್ತು ಉತ್ಪತ್ತಿ ಹೆಚ್ಚಿಸಬೇಕು, ಈ ಕಡೆಗೆ ಗಮನ ಸೆಳೆಯುತ್ತೇನೆ. ಹೆಚ್ಚು ಉತ್ಪತ್ತಿ ಬರಲು ಬೋನಸ್ ಮತ್ತು ಸಂಬಳ ಜಾಸ್ತಿಮಾಡುವುದು ಮುಂತಾದ ಕ್ರಮ ಕೈಕೊಳ್ಳಬೇಕು. ಇದರ ಬಗ್ಗೆ ನಾಳೆ ಉತ್ತರ ಕೊಡುವಾಗ ಹೇಳುತ್ತೀರಿ ಎಂದು ನಿರೀಕ್ಷೆ ಮಾಡುತ್ತೇನೆ. ಲಾಭ ಬಂದಿರುವುದನ್ನೆಲ್ಲಾ ಅವರಿಗೆ ಕೊಡಬೇಕೆಂದು ನನ್ನ ಅಭಿಪ್ರಾಯವಲ್ಲ. ಅವರು ಕಷ್ಟಪಟ್ಟಿರುವುದಕ್ಕೆ ಬೆಲೆ ಕಟ್ಟಬೇಕು. ಹಾಗೆ ಮಾಡಿದರೆ ಇನ್ನೂ ಉತ್ಪತ್ತಿ ಹೆಚ್ಚುವುದು. ಇದರ ಬಗ್ಗೆ ಗಮನಕೊಟ್ಟಿದ್ದರೆ ಇನ್ನೂ ಹೆಚ್ಚು ಉತ್ಪತ್ತಿ ಬರುತ್ತಿತ್ತು.

ಈ ಕೈಗಾರಿಕೆಯ ಬಗ್ಗೆ ಅನೇಕ ಆರೋಪಗಳು ಬಂದಿವೆ. ಹೊಸದಾಗಿ ಆರೋಪ ಮಾಡುತ್ತಿಲ್ಲ. ಈ ಕಾರ್ಖಾನೆಯ ಬಗ್ಗೆ ಶಿರಾಳಿ ವರದಿ ಮತ್ತು ಆರ್ ಸಿ ದತ್ ವರದಿ ಎರಡೂ ಇವೆ. ದತ್ ವರದಿಯನ್ನು ಈ ಸಭೆಯ ಸದಸ್ಯರಿಗೆ ಹಂಚಿದ್ದೀರಿ, ಪ್ರೆಸ್‌ಗೂ ರಿಲೀಜ್ ಮಾಡಿದ್ದೀರಿ ಎಂದು ಕೇಳಿದ್ದೇನೆ. ಆದರೆ ಶಿರಾಳಿ ವರದಿಯನ್ನು ಈ ಸಭೆಯ ಮುಂದೇಕೆ ಇಟ್ಟಿಲ್ಲ ? ಶಿರಾಳಿಯವರು ಈ ಸರಕಾರದಲ್ಲಿ ಫೈನಾನ್ಷಿಯಲ್ ಅಡ್ವೈಜರ್ ಆಗಿದ್ದರು. ಅವರು ಕೊಟ್ಟಿರುವ ವರದಿಯನ್ನು ಇಷ್ಟು ದಿವಸ ಮುಚ್ಚಿಟ್ಟಿರುವುದಕ್ಕೆ ಕಾರಣವೇನು ? ಇದರಲ್ಲಿ ಅರ್ಥವಿಲ್ಲ. ಕೋಟಿಗಟ್ಟಲೆ ಹಣ ಪೋಲಾಗಿದೆಯೆಂದು ಅವರು ತಿಳಿಸಿರುವುದರಿಂದ ಅಲ್ಲಿದ್ದ ಅನೇಕ ಪ್ರಮುಖ ಅಧಿಕಾರಿಗಳು, ಮ್ಯಾನೇಜಿಂಗ್ ಡೈರೆಕ್ಟರುಗಳು ಛೇರ್ಮನ್ನರು ಅದಕ್ಕೆ ಕಾರಣವಾಗಿರುವುದರಿಂದ ಅದು ಬೆಳಕಿಗೆ ಬರುತ್ತದೆಂದು ಮುಚ್ಚಿಟ್ಟಿದ್ದಾರೆಂದು ತಿಳಿದಿದ್ದೇನೆ. ಸರಕಾರ ಯಾವ ಅಂಶವನ್ನೂ ಮುಚ್ಚಿಡಬಾರದು. ಶಿರಾಳಿಯವರು ದತ್‌ರವರು ವರದಿ ಕೊಡುವುದಕ್ಕಿಂತ ಮುಂಚೆ ವರದಿ ಸಲ್ಲಿಸಿದ್ದಾರೆ. ದತ್ ವರದಿ ಮಾತ್ರ ನಮ್ಮ ಮುಂದಿಟ್ಟು ಶಿರಾಳಿ ವರದಿಯನ್ನೇಕೆ ಇಟ್ಟಿಲ್ಲ ? ದತ್ ವರದಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಶಿರಾಳಿ ವರದಿ ಬೇಕು. ಧರ್ಮವೀರರ ಕಾಲದಲ್ಲಿ ಶಿರಾಳಿ ವರದಿ ತಯಾರಾಗಿದೆ. ಆ ವರದಿ ನಮ್ಮ ಮುಂದಿಡದಿರುವುದಕ್ಕೆ ಕಾರಣವೇನು ? ಕಾರಣ ನನಗೆ ಗೊತ್ತು. ಆದರ ಅನೇಕ ಅಂಶಗಳು ರಾಜ್ಯ ಸರಕಾರದ ಕುತ್ತಿಗೆಗೆ ಬರುತ್ತವೆ ಎಂದು ಅದನ್ನು ಮುಚ್ಚಿಡಲಾಗಿದೆ.

ಶ್ರೀ ಎಸ್. ಎಂ. ಕೃಷ್ಣ.— ಶಿರಾಳಿ ವರದಿಗೆ ಏನೂ ಹಣ ಖರ್ಚುಮಾಡಿಲ್ಲ, ದತ್ ವರದಿಗೆ ಸುಮಾರು ೭೦ ಸಾವಿರ ರೂಪಾಯಿ ಖರ್ಚಾಗಿದೆ.

ಶ್ರೀ ಎಸ್. ಬಂಗಾರಪ್ಪ.... ಇಲ್ಲಿ ಎರಡು ಅಂಶವಿದೆ. ವರದಿ ತಯಾರು ಮಾಡುವುದಕ್ಕೆ ಹಣ ಖರ್ಚಾಗುವುದು ಒಂದು ವಿಷಯವಾದರೆ ಮುಖ್ಯವಾದ ವಿಷಯ ಶಿರಾಳಿ ವರದಿಯಲ್ಲಿ ಅನೇಕ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ, ಇದು ಬಹಳ ಮುಖ್ಯವಾದುದು. ಶಿರಾಳಿ ವರದಿಯನ್ನು ಚರ್ಚೆಮಾಡಿದರೆ ಎಂ ಐ ಎಸ್ ಎಲ್ ನ ಸಂಪೂರ್ಣ ಅನ್ಯಾಯದ ಸುರಿಮಳೆ ಬೆಳಕಿಗೆ ಬರುವುದು. ರಾಜ್ಯ ಸರಕಾರಕ್ಕೆ ಶ್ರೀ ಎಸ್. ಎಂ. ಕೃಷ್ಣರವರಿಗೆ ಜವಾಬ್ದಾರಿಯಿದ್ದರೆ ಅದನ್ನು ಈ ಸಭೆಯ ಮುಂದಿಡಬೇಕೆಂದು ಒತ್ತಾಯ ಮಾಡುತ್ತೇನೆ. ಹಾಗೆ ಮಾಡುವರೆಂದು ನಂಬುತ್ತೇನೆ

ಈ ಕಾರ್ಖಾನೆಯ ಚರಿತ್ರೆ ನೋಡಿದರೆ ಮೊದಲು ಮೈಲ್ಡ್ ಸ್ಟೀಲ್ ತಯಾರಿಸಲು ಈ ಕಾರ್ಖಾನೆ ಪ್ರಾರಂಭವಾಯಿತು. ಅಲಾಯ್ ಸ್ಟೀಲ್ ಸಹ ಇಲ್ಲಿ ತಯಾರು ಮಾಡಬೇಕು, ಕಾರಣ ಅದಕ್ಕೆ ಹೆಚ್ಚು ಬೆಲೆ ಸಿಕ್ಕುತ್ತದೆ ಎಂದು ಕೇಂದ್ರ ಸರಕಾರದ ಸಚಿವರಾದ ಶ್ರೀ ಸಿ ಎಸ್ ಸುಬ್ರಹ್ಮಣ್ಯಂರವರು ಹೇಳಿದರೆಂದು ಕೇಳಿದ್ದೇನೆ. ಇದಕ್ಕೆ ಒಂದು ಪ್ಲಾಂಟ್ ತಯಾರಾಯಿತು. ದಸ್ತೂರ್ ಅಂಡ್ ಕಂಪನಿಯವರು ಇದಕ್ಕೆ ಒಂದು ಪ್ಲಾಂಟ್ ಕೊಟ್ಟರು. ಇಲ್ಲಿ ಸ್ಪೆಷಲ್ ಸ್ಟೀಲ್‌ಗೆ ಬೊಲರ್ಸ್ ಆಫ್ ಆಸ್ಟ್ರಿಯದವರನ್ನು ನೇಮಕ ಮಾಡಿದರು. ಆಗ ಎಂ. ಡಿ. ಶಿವನಂಜಪ್ಪನವರು ಮ್ಯಾನೇಜಿಂಗ್ ಡೈರೆಕ್ಟರಾಗಿದ್ದರು, ಅವರು ಹೆಸರು ವಾಸಿಯಾಗಿದ್ದಾರೆ, ಅವರ ಹೆಸರನ್ನು ಅನೇಕ ಸಾರಿ ಈ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ಟೆಕ್ನಿಕಲ್ ನೋ ಹೌ ತಿಳಿಯುವುದಕ್ಕೆ ಬೌಲರ್ಸ್ ಆಫ್ ಆಸ್ಟ್ರಿಯ ಫೀಜು ನಿಗದಿಮಾಡಿರುವುದು ೨೨ ಲಕ್ಷದ ೫೦ ಸಾವಿರ ಡಾಲರುಗಳು ಇದರ ಬಗ್ಗೆ ೧೯೬೩ ರಲ್ಲಿ ಅಗ್ರಿಮೆಂಟಾಗಿದೆ. ರಾಯಲ್ಟಿ ಫಿಕ್ಸ್ ಮಾಡಿದ್ದಾರೆ. ಟೆಕ್ನಿಕಲ್ ನೋ ಹೌಗೆ ಬೇರೆ. ಎಷ್ಟು ಕೋಟಿ ಹೋಯಿತು ಎಂದು ತಿಳಿಯಬೇಕು.

ಎರಡನೆಯ ವಿಷಯ ರಾಯಲ್ಟಿಗೆ ಸಂಬಂಧಪಟ್ಟದ್ದು. ಎಷ್ಟು ಪ್ರಮಾಣದಲ್ಲಿ ಪ್ರೊಡಕ್ಷನ್ ನಡೆಯುತ್ತದೆ ಅದರ ಮೇಲೆ ರಾಯಲ್ಟಿ ಕೊಡಬೇಕೆಂದು ೧೯೬೩ರಲ್ಲಿ ಆದ ಒಪ್ಪಂದದಲ್ಲಿ ನಮೂದಾಗಿದೆ. ಮಾರಾಟವಾಗುವ ಪದಾರ್ಥದ ಮೇಲೆ ರಾಯಲ್ಟಿ ಕೊಡಬೇಕು ಎಂದು ಗೊತ್ತು ಮಾಡಿದ್ದರೆ ಅದಕ್ಕೆ ಅರ್ಥವಿರುತ್ತಿತ್ತು. ಮೈಲ್ಡ್ ಸ್ಟೀಲ್, ಸ್ಪೆಷಲ್ ಸ್ಟೀಲ್ ಸೇರಿ ಒಂದು ಟನ್ನಿಗೆ ಮೂರು ಡಾಲರ್ ರಾಯಲ್ಟಿ ಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಒಂದು ವರ್ಷಕ್ಕೆ ಸರಾಸರಿ ಉತ್ಪನ್ನ ೬೫ ಸಾವಿರ ಟನ್ ಆಗುತ್ತದೆ. ಹತ್ತು ವರ್ಷಗಳಿಗೆ ಲೆಕ್ಕ ಹಾಕಿದರೆ ಸುಮಾರು ೧೯ ಲಕ್ಷ ೫೦ ಸಾವಿರ ಡಾಲರ್ ಕೊಡಬೇಕಾಗುತ್ತದೆ. ನಾವು

(ಶ್ರೀ ಎಸ್. ಬಂಗಾರಪ್ಪ)

ಎಂಥ ಅನ್ಯಾಯಕ್ಕೆ ಒಳಗಾಗಿದ್ದೇವೆ ಎನ್ನುವುದನ್ನು ನೋಡಬೇಕು ಟೆಕ್ನಿಕಲ್ ನೋ ಹೌ ಕೊಡುವುದಕ್ಕೆ ೨೨ ಲಕ್ಷ ೫೦ ಸಾವಿರ ಡಾಲರ್ ಫೀ ಕೊಡುವುದಲ್ಲದೆ ಒಂದು ಟನ್ನಿಗೆ ಮೂರು ರೂಪಾಯಿ ಪ್ರಕಾರ ೧೯ ಲಕ್ಷ ೫೦ ಸಾವಿರ ಡಾಲರ್ ರಾಯಲ್ಟಿಯನ್ನು ಹತ್ತು ವರ್ಷಗಳಿಗೆ ಕೊಡಬೇಕಾಗುತ್ತದೆ ಎನ್ನುವುದು ಬೆಳಕಿಗೆ ಬಂತು. ಪ್ರಾರಂಭದಲ್ಲಿ ಬೋಲಾರ ಕಂಪೆನಿಯವರು ಇಷ್ಟೇ ಕೊಡಬೇಕೆಂದು ಕೇಳಲಿಲ್ಲ. ಎರಡು ಲಕ್ಷ ಡಾಲರ್ ಮಾತ್ರ ಟೆಕ್ನಿಕಲ್ ನೋ ಹೌ ತಿಳಿದುಕೊಳ್ಳುವುದಕ್ಕೆ ಕೊಡಬೇಕು ಎಂದು ಹೇಳಿದ್ದರು.

ಶ್ರೀ ಎಚ್. ಡಿ. ದೇವೇಗೌಡ.—ಎರಡು ಎನ್‌ಕ್ವೈರಿ ರಿಪೋರ್ಟ್‌ಗಳು ಸರ್ಕಾರದ ಮುಂದೆ ಇವೆ. ಈಗ ಮಾಜಿ ಮುಖ್ಯ ಕಾರ್ಯದರ್ಶಿಯವರಾದ ಕೆ. ನಾರಾಯಣಸ್ವಾಮಿ ಅವರಿಂದ ಎನ್‌ಕ್ವೈರಿ ಆಗುತ್ತಿತ್ತೆ. ಈ ವಿಚಾರವಾಗಿ ಚರ್ಚೆ ಮಾಡುವುದಕ್ಕೆ ಹೆಚ್ಚು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಯಾರು ಯಾರು ತಪ್ಪಿತಸ್ಥರಿದ್ದಾರೆನ್ನುವುದನ್ನೆಲ್ಲಾ ಒಂದೇ ಸಲ ಹೇಳಿದರೂ ಸಾಕಾಗುತ್ತದೆ. ಇಂಥವರ ಮೇಲೆ ಪ್ರಾಸಿಕ್ಯೂಷನ್ ಕ್ರಮ ತೆಗೆದುಕೊಳ್ಳುತ್ತೇವೆ ಶ್ರೀ ಎಂ. ಡಿ. ಶಿವನಂಜಪ್ಪ ಮತ್ತು ಇತರರೆಲ್ಲ ಇದ್ದರು ಯಾರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿದರೆ ನಮಗೆ ಸಾಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಬೋಲಾರ ಕಂಪೆನಿಯವರು ಟೆಕ್ನಿಕಲ್ ನೋ ಹೌ ಕೊಡುವುದಕ್ಕೆ ೨ ಲಕ್ಷ ಡಾಲರುಗಳನ್ನು ತೆಗೆದುಕೊಳ್ಳಲು ತಯಾರಾಗಿದ್ದರು. ಕೊನೆಗೆ ಶ್ರೀ ಎಂ. ಡಿ. ಶಿವನಂಜಪ್ಪನವರು ಆಸ್ಟ್ರಿಯಾಕ್ಕೆ ಹೋಗಿ ಬಂದ ಮೇಲೆ ೨೨ ಲಕ್ಷ ೫೦ ಸಾವಿರ ಡಾಲರುಗಳಿಗೆ ಹೋಯಿತು. ಬಹಳ ಪ್ರಾಮುಖ್ಯವಾದ ಅಂಶವೆಂದರೆ ನಮ್ಮವರು ಹೋಗಿ ಮಾತುಕತೆ ನಡೆಸಿ ಕರಾರು ಮಾಡಿಸಿಕೊಂಡು ಬರಬೇಕೇ ಹೊರತು ಜಾಸ್ತಿ ಮಾಡುವುದಲ್ಲ ಎಂದು ನನ್ನ ಅಭಿಪ್ರಾಯ. ಇದರಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಅಂಶ ಎನ್ನುವುದೇ ನಮ್ಮ ತಲೆಯನ್ನು ತಿನ್ನುತ್ತಿದೆ. ಅದನ್ನು ಪತ್ತೆ ಹಚ್ಚಲು ನಮ್ಮಿಂದ ಆಗುತ್ತಿಲ್ಲ. ರಾಯಲ್ಟಿಯನ್ನು ಮಾರಾಟವಾಗುವುದರ ಮೇಲೆ ೨ ಪರ್ಸೆಂಟ್ ಕೊಟ್ಟರೆ ಸಾಕು ಎಂದು ಹೇಳಿದ್ದರು. ನೆಗೋಷಿಯೇಷನ್ಸ್ ಎಲ್ಲ ಆದ ಮೇಲೆ ಒಂದು ಟನ್ನಿಗೆ ಮೂರು ಡಾಲರುಗಳಿಗೆ ಏರಿಸಿದರು. ರಾಯಲ್ಟಿ ೨ ಪರ್ಸೆಂಟ್ ಮಾರಾಟವಾಗುವುದರ ಮೇಲೆ ಕೊಟ್ಟರೆ ಸಾಕು ಎಂದು ಬರಹರೂಪದಲ್ಲಿ ಬರೆದು ಕೊಟ್ಟಿದ್ದರು ಮತ್ತು ಆ ಬಗ್ಗೆ ಡಾಕ್ಯುಮೆಂಟ್ಸ್ ಸಹಿತ ಇವೆ. ಆದರೆ ನಾನಾಗಲೇ ಹೇಳಿದಂತೆ ನೆಗೋಷಿಯೇಷನ್ಸ್ ಆದ ಮೇಲೆ ಉತ್ಪನ್ನವಾಗುವುದರ ಮೇಲೆ ಒಂದು ಟನ್ನಿಗೆ ಮೂರು ಡಾಲರ್ ಪ್ರಕಾರ ಕೊಡಬೇಕು ಎಂದು ಒಪ್ಪಿಕೊಂಡರು. ಇದಕ್ಕಾಗಿಯೇ ಎಂ.ಐ.ಎಸ್.ಎಲ್. ಹಾಳಾಗುತ್ತಿದೆ ಎಂದು ಹೇಳಬೇಕಾಗುತ್ತದೆ. ಈ ಕಂಪೆನಿಯವರಿಗೆ ರಾಯಲ್ಟಿ ಎಲ್ಲಿಯವರೆಗೆ ಕೊಡಬೇಕು ಎಂದರೆ [illegible] ಅಂತ್ಯದವರೆಗೆ ಕೊಡಬೇಕು ಎಂದು ಅಗ್ರಿಮೆಂಟಿನಲ್ಲಿದೆ. ನನಗೆ ಬಂದಿರುವ ಸಮಾಚಾರದ ಪ್ರಕಾರ ಇದನ್ನು ಪ್ರೊಡಕ್ಷನ್ ಮೇಲೆ ಕೊಡಬೇಕು, ಮಾರಾಟವಾಗುವುದರ ಮೇಲೆ ಅಲ್ಲ. ನಮ್ಮ ದೇಶದಲ್ಲಿ ಟೆಕ್ನಿಕಲ್ ನೋ-ಹೌ ಇಲ್ಲವೇ? ನಮ್ಮ ದೇಶದಲ್ಲಿ ಟಾಟಾ ಕಂಪೆನಿಯವರು ಮೈಲ್ಡ್ ಸ್ಟೀಲ್, ಸ್ಪೆಷಲ್ ಸ್ಟೀಲ್ ತಯಾರು ಮಾಡುತ್ತಾರೆ. ಅವರು ಟೆಕ್ನಿಕಲ್ ನೋ ಹೌ ಕೊಡುತ್ತೇವೆಂದರೆ ಅದನ್ನು ಒಪ್ಪಿಕೊಳ್ಳಲಿಲ್ಲ. ಹಾಗೆಯೇ ಅವರನ್ನು ಬಿಟ್ಟರು ಆಸ್ಟ್ರಿಯಾ ಕಂಪೆನಿಗೆ ಸಂಪೂರ್ಣವಾಗಿ ಕೊಟ್ಟೆವು.

೧೯೬೩ರಲ್ಲಿ ನಡೆದ ಪರ್ಚೇಸ್ ಆಫ್ ಮೆಷಿನರಿ ಅಂಡ್ ಪ್ಲಾಂಟ್ ವಿಷಯ ಇದು ನಮ್ಮ ಕಾಲದಲ್ಲಿ ಆಗಿಲ್ಲ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಬಹುದು. ಯಾರ ಕಾಲದಲ್ಲಿ ಆಗಿದೆ ಎನ್ನುವ ವಿಷಯ ಮುಖ್ಯವಲ್ಲ. ಸರ್ಕಾರ ಒಂದೇ ಜವಾಬ್ದಾರಿ ಒಂದೇ, ಅವರು ಇದ್ದಿರಬಹುದು, ನೀವಿದ್ದಿರಬಹುದು, ನಾವಿದ್ದಿರಬಹುದು, ಮತ್ತೊಬ್ಬರು ಇದ್ದಿರಬಹುದು, ಕಾರ್ಖಾನೆಗೆ ಎಷ್ಟು ನಷ್ಟವಾಗುತ್ತಿದೆ ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಭದ್ರಾವತಿ ಕಾರ್ಖಾನೆಯ ವಿಸ್ತರಣಾ ಕಾರ್ಯಕ್ಕೆ ಫರ್ನೆಸ್‌ಗಳು ಬೇಕು ಎಂದು ಅದಕ್ಕಾಗಿ ಗ್ಲೋಬಲ್ ಟೆಂಡರ್ಸ್ ಕರೆದರು. ಸಾರ್ವೇಜಿಯನ್ ಫರ್ಮ್‌ನವರು ಒಂದು ಟೆಂಡರ್ ಕೋಟ್ ಮಾಡಿದರು. ಆ ಕಂಪೆನಿಯವರು ಫರ್ನೆಸ್ ತಯಾರು ಮಾಡುವುದರಲ್ಲಿ ಪಯೋನಿಯರ್ಸ್ ಅನೇಕ ರಾಷ್ಟ್ರಗಳಿಗೆ ಸಪ್ಲೈ ಮಾಡಿರುವ ಪರಿಣಿತರಾಗಿರತಕ್ಕದ್ದು ಸಾರ್ವೇಜಿಯನ್ ಫರ್ಮ್. ಅವರು ಕಡಿಮೆ ಕೋಟ್ ಮಾಡಿದ್ದರು, ಪ್ರಪಂಚದಲ್ಲಿ ಅನೇಕ ಕಡೆಗೆ ಫರ್ನೆಸ್ ಸಪ್ಲೈ ಮಾಡಿ ಹೆಸರು ಗಳಿಸಿರುವವರು ಅವರು. ಅದೇ ರೀತಿಯಾಗಿ ಪಶ್ಚಿಮ ಜರ್ಮನಿಯ ಡೆಮಾಗ್ ಎನ್ನುವವರು ಎಂ.ಐ.ಎಸ್.ಎಲ್. ಅನ್ನು ಕಬಳಿಸುವುದಕ್ಕೆ ಬುನಾದಿಯನ್ನು ಹಾಕಿದರು. ಅದು 'ಸೀಮನ್' ಇರಬಹುದು, 'ಡೆಮಾಗ್' ಆಗಲಿ ಅವರು ಕೊಟ್ಟಂತ ಕೊಟೇಷನ್ ಒಪ್ಪಿಕೊಂಡರು. ಪ್ರಪಂಚದಲ್ಲಿ ಎಲ್ಲ ರಾಷ್ಟ್ರಗಳಿಗೂ ಫರ್ನೆಸ್ ಸಪ್ಲೈ ಮಾಡಿ ಹೆಸರು ಗಳಿಸಿರುವಂಥ ಸಾರ್ವೇಜಿಯನ್ ಫರ್ಮ್‌ನವರೇ ಎಸ್‌ಸೆನ್ಷಿಯಲ್ ಸ್ಪೇರ್ ಪಾರ್ಟ್ಸ್ ಎಲ್ಲ ಸೇರಿಕೊಂಡು ಒಂದು ಮಿಲಿಯನ್ ಡಾಲರುಗಳಿಗೆ ಕೊಟೇಷನ್ ಕೊಟ್ಟಿದ್ದರು

ಡೆಮಾಗ್ ಫರ್ಮ್‌ನವರು ಎಸೆನ್‌ಷಿಯಲ್ ಸ್ಪೇರ್ ಪಾರ್ಟ್ಸ್ ಬಿಟ್ಟು ಕೋಟ್ ಮಾಡಿದ್ದರು. ಆವಾಗ ಭದ್ರಾವತಿ ಕಬ್ಬಿಣ ಕಾರ್ಖಾನೆಯ ಛೇರ್‌ಮನ್ ಆಗಿ ಕೆಲಸ ಮಾಡುತ್ತ ಇದ್ದವರು ಶ್ರೀ ಎಚ್. ಜಿ. ವಿ. ರೆಡ್ಡಿ ಅವರು. ಅವರ ಕಾಲದಲ್ಲಿ ಪಶ್ಚಿಮ ಜರ್ಮನಿಯ ಡೆಮಾಗ್ ಫರ್ಮ್‌ನವರಿಗೆ ಎರಡೂವರೆ ಕೋಟಿ ರೂಪಾಯಿ ಜಾಸ್ತಿ ಕೊಟ್ಟು ಎಸೆನ್‌ಷಿಯಲ್ ಸ್ಪೇರ್ ಪಾರ್ಟ್ಸ್ ಕೂಡಾ ತೆಗೆದುಕೊಂಡಿದ್ದಾರೆ. ಏತಕ್ಕಾಗಿ ಈ ರೀತಿ ಅನ್ಯಾಯ ಮಾಡಿದರು? ಅವರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ ಎನ್ನುವುದು ನನ್ನ ಪ್ರಶ್ನೆ. ಡೆಮಾಗ್ ಕಂಪೆನಿಯವರು ಬಂದು ಫರ್ನೆಸ್ ಎರೆಕ್ಟ್ ಮಾಡಿದರು. ಆದರೆ ಅದನ್ನು ಕಮಿಷನ್ ಮಾಡಿದ್ದು ಒಂದು ವರ್ಷ ಒಂಭತ್ತು ತಿಂಗಳಾದ ನಂತರ. ಇದು ಧರ್ಮವೀರರವರು ರಾಜ್ಯಪಾಲರಾಗಿದ್ದ ಕಾಲಕ್ಕೆ ಸಂಬಂಧಪಡುತ್ತದೆ. ಫರ್ನೆಸ್ ಸ್ಥಾಪನೆ ಮಾಡಿದರೂ ಅದನ್ನು ಕಮಿಷನ್ ಮಾಡುವುದಕ್ಕೆ ಡೆಮಾಗ್ ಕಂಪೆನಿಯವರು ತಯಾರಾಗಲಿಲ್ಲ. ಅದಕ್ಕೆ ಕಾರಣವೂ ಇದೆ ನಾರ್ತ್ ಕೋರಿಯಾ ಅಥವಾ ಸೌತ್ ಕೊರಿಯಾ ಇರಬಹುದು, ಅಲ್ಲಿ ಎರೆಕ್ಟ್ ಮಾಡಿದ್ದ ಫರ್ನೆಸ್ ಬ್ಲಾಸ್ಟ್ ಆಗಿತ್ತು. So they were very much afraid to commission this furnace. ಕಮಿಷನ್ ಮಾಡಿ ಬ್ಲಾಸ್ಟ್ ಆದರೆ ಅಗ್ರಿಮೆಂಟ್ ಪ್ರಕಾರ ತೊಂದರೆ ಇತ್ಯಾದಿ ಬರುತ್ತದೆ ಎಂದು ಅವರು ಕಮಿಷನ್ ಮಾಡಲಿಲ್ಲ. ನಾನಾಗಲೇ ಹೇಳಿದಂತೆ ಆಗ ಶ್ರೀ ಎಚ್. ಜಿ. ವಿ. ರೆಡ್ಡಿ ಅವರು ಎಂ.ಐ.ಎಸ್.ಎಲ್ ಚೇರ್‌ಮನ್ ಆಗಿದ್ದರು. ಇಲ್ಲೇನಾಯಿತು ಎಂದರೆ ಆ ಕಾಲಕ್ಕೆ ಶ್ರೀಮಾನ್ ಹೆಚ್. ಜಿ. ವಿ. ರೆಡ್ಡಿಯವರು ಇದರ ಚೇರ್ಮನ್ನರಾಗಿ ನೇಮಕವಾಗಿದ್ದರು ಇಲ್ಲಿಗೆ ಆಗ ಶ್ರೀ ಐ. ಪಿ. ಮಲ್ಲಪ್ಪನವರನ್ನು ಛೇರ್ಮನ್ನರಾಗಿ ನೇಮಕ ಮಾಡಿದರು. ಇವರಿಗೆ ಶ್ರೀ ರೆಡ್ಡಿಯವರು ಚಾರ್ಜು ಕೊಡುವುದರಲ್ಲಿದ್ದರು ಆ ಕಾಲಕ್ಕೆ ಶ್ರೀಮಾನ್ ಧರ್ಮವೀರರವರು ರಾಜ್ಯಪಾಲರಾಗಿದ್ದರು. ಇವರನ್ನು ಎಂ.ಐ.ಎಸ್.ಎಲ್‌ಗೆ ಕರೆಸಿ ಆ ಫರ್ನೆಸನ್ನು ಓಪನ್ ಮಾಡಿಸಬೇಕೆಂದು ಅವರ ಮೂಲಕ ಓಪನಿಂಗು ಸೆರಮನಿ ಕೂಡ ಮಾಡಿಸಿಬಿಟ್ಟರು. ಆದರೆ ಡಿಮಾಗ್ ಕಂಪೆನಿಯವರು ಮಾಡಿದ ಫರ್ನೇಸನ್ನು ಕಮಿಷನ್ ಮಾಡಲಾಗಲಿಲ್ಲ. ಆಗ ಶ್ರೀ ರೆಡ್ಡಿಯವರು ಶ್ರೀಮಾನ್ ಮಲ್ಲಪ್ಪನವರಿಗೆ ಚಾರ್ಜು ಕೊಡುವ ಆತುರದಲ್ಲಿದ್ದರು. ಅಂತೂ ಇದನ್ನು ಓಪನ್ ಮಾಡಿಸಬೇಕೆಂದು ಮಾಡಿಸಿಯೇಬಿಟ್ಟರು. ಮತ್ತು ದೊಡ್ಡದಾಗಿ ಹೂವಿನ ಹಾರವನ್ನೂ ಹಾಕಿಸಿಕೊಂಡು ಬಿಟ್ಟರು. ಇನ್ನು ಇದರ ಬಗ್ಗೆ ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ಅದೊಂದು ದೊಡ್ಡ ಚರಿತ್ರೆಯೇ ಆಗಿದೆ. ಇಲ್ಲಿ ಓಪನ್ ಮಾಡಿದ ಫರ್ನೇಸು ಒಂದು ದಿನ ಕೂಡ ನಡೆಯಲಿಲ್ಲ. ಆ ನಂತರ ಆಗಿದ್ದ ರಾಜ್ಯಪಾಲರಾದ ಶ್ರೀ ಧರ್ಮವೀರರವರಿಗೆ ಇದರ ವಿಚಾರ ತಿಳಿದು ಅವರೇ ಪತ್ರಿಕಾ ಹೇಳಿಕೆ ಕೊಟ್ಟು ಇದರಲ್ಲಿ ತುಂಬಾ ಮೋಸವಾಗಿದೆ. ಡಿಮಾಗ್ ಕಂಪೆನಿಯವರು ಸರಿಯಾದ ಕೆಲಸಗಳನ್ನು ಮಾಡಿಲ್ಲ ಎಂದೂ ಹೇಳಿ ಇದನ್ನು ಮಾಡಿರುವುದು ತಪ್ಪು ಎಂದೂ ಅವರೇ ಆಗ ಹೇಳಿದರು.

ಉಪಾಧ್ಯಕ್ಷರು.—ಆಗ ಏನೋ ಸೂರ್ಯಗ್ರಹಣ ಬಂದಿತ್ತೊ, ಇಲ್ಲವೇ ಚಂದ್ರಗ್ರಹಣ ಬಂದಿತ್ತೊ?

ಶ್ರೀ ಎಸ್. ಬಂಗಾರಪ್ಪ.—ಯಾವ ಗ್ರಹಣವೋ ಗೊತ್ತಿಲ್ಲ, ಅಂತೂ ಇದರಲ್ಲಿ ಸ್ವಾರ್ಥಗ್ರಹಣವೇ ಬಂದಿತ್ತು. ಆ ನಂತರ ಶ್ರೀ ಹೆಚ್. ಜಿ. ವಿ. ರೆಡ್ಡಿಯವರು ಕಾಫಿ ಬೋರ್ಡು ಚೇರ್ಮನ್ನರಾಗಿ ಇಲ್ಲಿ ನೇಮಕವಾದರು. ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚು ಲಕ್ಷ ಕೊಡಬೇಕಾಗಿದೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾಗಿದೆ. ಅದರಲ್ಲೂ ದಿಮಾಗ್ ಕಂಪೆನಿಯನ್ನು ನಮ್ಮ ಎಂ ಐ ಎಸ್ ಎಲ್‌ರವರು ನೇಮಕ ಮಾಡಿದ್ದರಿಂದ ಕಂಬೈನ್ಡ್ ಬಾರ್ ಅಂಡ್ ರಾಡ್ ಇವುಗಳನ್ನು ಮಾಡಲು ಸುಮಾರು 4 ಕೋಟಿ ಯಷ್ಟು ಖರ್ಚು ಬಂತು. ಆದರೆ ಇವರ ಯೋಜನೆ ಪೂರ್ತಿಯಾಗಿ ಮೆಟೀರಿಯಲೈಸ್ ಆಯಿತೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ವಿವರಗಳನ್ನು ತಿಳಿಸಬೇಕೆಂದು ಕೇಳುತ್ತೇನೆ. ಇದಕ್ಕೆ ಬದಲು ನಾಲ್ಕು ಬೇರೆ ಬೇರೆ ಫೌಂಡರಿಗಳನ್ನು ಮಾಡಿದ್ದರೆ ಅದರಿಂದ ಅನುಕೂಲವಾಗುತ್ತಿತ್ತು ಎಂದೂ ಆಗ ಬಂದ ವರದಿಯಲ್ಲಿ ಕೂಡ ತಿಳಿಸಲಾಗಿತ್ತು. ಆದರೆ ಅದರಂತೆ ಮಾಡಲಿಲ್ಲ ಇನ್ನೂ ಇಲ್ಲಿ ಸ್ಟೇನ್‌ಲೆಸ್ ಸ್ಟೀಲನ್ನು ಕೂಡ ತಯಾರು ಮಾಡುತ್ತಿದ್ದಾರೆ. ಇಲ್ಲಿ ಬರಿ ರಾಡುಗಳನ್ನು ತಯಾರು ಮಾಡುತ್ತಿದ್ದಾರೆಂದು ಕೇಳುತ್ತೇವೆ ಇದರ ಜೊತೆಗೆ ಇಲ್ಲಿ ಸ್ಟೇನ್‌ಲೆಸ್ ಶೀಟುಗಳನ್ನೂ ಮಾಡಲು ಅನುಕೂಲವಿದೆ ಮತ್ತು ಇದಕ್ಕೆ ಹೆಚ್ಚು ಡಿಮ್ಯಾಂಡು ಇದೆ ಎಂದು ಕೇಳುತ್ತೇವೆ ಮಾನ್ಯ ಸಚಿವರು ಇಲ್ಲಿ ಹೆಚ್ಚು ಡಿಮ್ಯಾಂಡು ಇರುವ ಸ್ಟೇನ್‌ಲೆಸ್ ಸ್ಟೀಲ್ ಶೀಟುಗಳನ್ನು ಮಾಡಲು ಅವಕಾಶವಿದೆ. ಇದನ್ನು ಮಾಡಿಸಬೇಕೆಂದು ಸರಕಾರಕ್ಕೆ ಇಲ್ಲಿ ಸಲಹೆ ಕೊಡುತ್ತೇವೆ. ಇದೊಂದು ದೊಡ್ಡ ಚರಿತ್ರೆ ಸುಮಾರು 1918 ರಿಂದಲೂ ಬೆಳೆದುಕೊಂಡು ಬಂದಿದೆ. 1918ರಲ್ಲಿ ಕೂಡ ಇಲ್ಲಿಗೆ ಇಬ್ಬರು ಸಿವಿಲ್ ಇಂಜನೀಯರನ್ನು ವೆಸ್ಟ್ ಜರ್ಮನಿಯ ದಿಮಾಗ್ ಕಂಪನಿಯವರ ಕಡೆಯಿಂದ ಕರಿಸಿ ಅವರು ಇಲ್ಲಿ ಒಂದು ಗೋಡೆ ಕಟ್ಟಬೇಕು ಎಂದು ಮಾಡಿಸಿದರು. ಇವರಿಗೆ ಆಗ ಕೊಟ್ಟ ಸಂಬಳ ಎಂದರೆ ತಿಂಗಳಿಗೆ 12 ಸಾವಿರ ರೂಪಾಯಿಗಳು. ಇದೇ ರೀತಿ ಹಿಂದೆ ಇಲ್ಲಿ ಹಂಶ್ ಎನ್ನುವವರು ಒಬ್ಬರು ಎಂ ಐ ಎಸ್ ಎಲ್ ಕಂಪೆನಿಗೆ ಸಲಹೆ ಮಾಡಲು ಬಂದಿದ್ದರು. ಇವರಿಗೆ ದೊಡ್ಡದಾಗಿ ಸಂಬಳ ಕೊಟ್ಟು ಇವರ ಇನ್‌ಕಮ್ ಟ್ಯಾಕ್ಸ್ ಕೂಡ ಸರ್ಕಾರವೇ ಕೊಡಬೇಕಾಯಿತು. ಇವರು ಬರೀ ಹೆಲಿ

(ಶ್ರೀ ಎಸ್. ಬಂಗಾರಪ್ಪ)

ಕ್ಯಾಪ್ಟರಿನಲ್ಲೇ ರಾಜ್ಯದಲ್ಲಿ ಪೂರಾ ಓಡಾಡುತ್ತಿದ್ದರು. ಇದರ ಬಗ್ಗೆ ಇಲ್ಲಿ ಹೆಚ್ಚು ಹೇಳಲು ಹೋಗುವುದಿಲ್ಲ ಟೆಕ್ನಿಕ್ ನೋ ಹೌ ಎಂದು ತಿಳಿದವರನ್ನು ಹಾಕಬೇಕೆಂದಾಗ ಶ್ರೀ ಐ. ಪಿ. ಮಲ್ಲಪ್ಪನವರನ್ನು ಇಲ್ಲಿಗೆ ನೇಮಕ ಮಾಡಿದರು.

ಶ್ರೀ ಎಸ್. ಎಂ. ಕೃಷ್ಣ.—ಶ್ರೀ ಹುತ್‌ರವರಿಗೆ ಒಂದೂವರೆ ಕೋಟಿ ರೂಪಾಯಿಗಳಷ್ಟು ಇನ್ ಕಂ ಟ್ಯಾಕ್ಸ್ ಕೊಡಬೇಕೆಂದು ಡಿಮ್ಯಾಂಡ್ ಕೂಡ ಹೋಗಿತ್ತು. ಆದರೆ ಕೇಂದ್ರ ಸರ್ಕಾರದವರು ಇದನ್ನು ಅವರಿಂದ ವಸೂಲು ಮಾಡಕೂಡದು ಎಂದು ಮನ್ನಾ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮನ್ನಾ ಮಾಡಿದರೆ ನಮ್ಮ ಸರಕಾರಕ್ಕೆ ಬರುವ ದುಡ್ಡು ಹೋಯಿತು ಅದನ್ನು ಯಾರು ತುಂಬಬೇಕು? ಹೀಗೆ ಎಂ ಐ ಎಸ್ ಎಲ್ ಕಂಪನಿ ಚರಿತ್ರೆ ಇದೆ. ಇದರಂತೆ ಇಲ್ಲಿ ಹೇಳಿರುವ ಡಾರ್ಮೈಟ್ ಪ್ಲಾಂಟ್ ಎಂದಿದೆ ಇದಕ್ಕೆ ಸುಮಾರು ೧೨ ಲಕ್ಷ ರೂಪಾಯಿಗಳಷ್ಟು ಖರ್ಚಾಗಿದೆ. ಇದರ ಬಗ್ಗೆ ನಾನು ಮೂರು ನಾಲ್ಕು ದಿನಗಳ ಹಿಂದೆ ಒಂದು ಪ್ರಶ್ನೆ ಕೂಡ ಕಳುಹಿಸಿದ್ದೆ. ಇದು ಒಂದು ಹೊಸ ರೀತಿಯಾದ ಬ್ರಿಕ್ ಮೇಕಿಂಗ್ ಪ್ಲಾಂಟು. ಇದರಲ್ಲಿ ಒಂದು ರೀತಿಯ ಸ್ಪೆಷಲೈಸ್ಡ್ ಬ್ರಿಕ್ಸ್ ಎಂದು ತಯಾರು ಮಾಡುತ್ತಾರೆ. ಇದಕ್ಕೂ ಕೂಡ ವೆಸ್ಟ್ ಜರ್ಮನಿಯವರನ್ನೇ ಕರಿಸಿ ಒಂದು ಪ್ಲಾಂಟನ್ನು ಆರಂಭ ಮಾಡಿದರು. ಆದರೆ ಇದರ ಪ್ಲಾಂಟೇ ಈಗ ಮಾಯವಾಗಿ ಕೇವಲ ಒಂದು ಸ್ಪೇರ್ ಪಾರ್ಟ್ಸ್ ಮಾತ್ರ ಇಲ್ಲಿ ಉಳಿದಿದೆ ಇದನ್ನು ಸೇಲಂನಿಂದ ಬಂದ ಒಂದು ಕಂಪೆನಿಯವರು ಸ್ಟಾರ್ಟ್ ಮಾಡಬೇಕೆಂದು ಬಂದಿದ್ದರು. ಸೇಲಂನಿಂದ ಬರ್ನ್ ಅಂಡ್ ಕಂಪನಿಯವರು ಬಂದು ಇದನ್ನು ಮತ್ತೆ ಆರಂಭ ಮಾಡಬೇಕೆಂದು ಬಂದರೂ ಅವರಿಗೆ ಮಾಡಲಾಗಲಿಲ್ಲ. ಅದೇನು ಕಾರಣವೋ ನಮಗೆ ಗೊತ್ತಾಗಲಿಲ್ಲ. ಇಲ್ಲಿ ಬರೀ ಒಂದು ಸ್ಪೇರ್ ಪಾರ್ಟ್ ಮಾತ್ರ ಉಳಿದಿದೆ. ಕೊನೆಗೆ ಸ್ಪೇರ್ ಪಾರ್ಟ್ಸ್ ಕೂಡಾ ಇಲ್ಲದೆ ಹೋಗುತ್ತದೆ ಎಂದು ತೋರುತ್ತೆ ಇನ್ನು ಈ ಕಂಪೆನಿಗೆ ಕೋಲ್‌ನ್ನು ಸರಬರಾಜು ಮಾಡಲು ಎಸ್. ಟಿ. ಸ್ವಾತಿಯ ಅಂಡ್ ಕೋ ಇವರನ್ನು ನೇಮಕ ಮಾಡಲಾಗಿತ್ತು. ಇವರಿಗೆ ಶೇಕಡಾ ಹದಿನೈದರಷ್ಟು ಕಮಿಷನ್ ಬೇರೆ ಕೊಡುತ್ತಿದ್ದರು. ಆದರೆ ಇವರು ಕೊಡತಕ್ಕ ಸ್ಟ್ಯಾಂಡರ್ಡ್ ಆಫ್ ಮೆಟಿರಿಯಲ್ಸ್‌ಗಳು ಸಬ್ ಸ್ಟ್ಯಾಂಡರ್ಡ್ ರೀತಿಯಾಗಿತ್ತು ಎಂದು ಇವರಿಗೆ ಕೊಡುವ ಕಮಿಷನ್ ಸರಿಯಾದುದಲ್ಲ ಎಂದೂ ಕೂಡಾ ದೂರುಗಳು ಬಂದಿದ್ದವು.

ಶ್ರೀ ಎಸ್. ಎಂ. ಕೃಷ್ಣಾ.—ಈ ಸ್ವಾತಿಯಾ ಕಂಪನಿಯವರು ಕೊಡುತ್ತಿರುವ ಕೋಲ್ ಸರಿಯಾದುದಲ್ಲ ಎಂದು ದೂರು ಬಂದ ಕೂಡಲೇ ಅಗ್ರಿಮೆಂಟು ಪ್ರಕಾರ ಇವರ ಅಗ್ರಿಮೆಂಟನ್ನು ಟರ್ಮಿನೇಟು ಮಾಡಲಾಯಿತು. ಈಗ ಕಂಪನಿಯವರೇ ನೇರವಾಗಿ ಇದ್ದಿಲನ್ನು ಕೊಂಡುಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇವೆಲ್ಲ ಶ್ರೀಮಾನ್ ಶಿವನಂಜಪ್ಪನವರ ಕಾಲದಿಂದಲೇ ನಡೆಯುತ್ತ ಬಂದಿರುವುದು. ಇವರಾದ ಮೇಲೆ ಚಂದಪ್ಪ ಪಾಟೀಲ್‌ರವರು ಬಂದರು. ಆದರೂ ಶ್ರೀಮಾನ್ ಶಿವನಂಜಪ್ಪನವರ ಕಾಲದಿಂದಲೇ ನಡೆದು ಬಂದದ್ದು ಎಂದು ನಮಗೆ ಗೊತ್ತಾಗುತ್ತದೆ. ಇದಲ್ಲದೆ ೧೯೬೬–೧೯೬೭ ರಲ್ಲಿ ಶ್ರೀಮಾನ್ ಶಿವನಂಜಪ್ಪನವರಿಗೆ ಬರ್ತ್ ಡೇ ಪಾರ್ಟಿ ಕೊಡಬೇಕೆಂದು ಬೆಂಗಳೂರಿನಲ್ಲಿರುವ ಅಶೋಕಾ ಹೋಟೆಲಿನಲ್ಲಿ ಸ್ವಾತಿಯಾ ಕಂಪೆನಿಯವರು ಹಾಗೂ ಇನ್ನಿತರ ಕಂಪೆನಿಗಳವರು ಬಹಳ ದೊಡ್ಡದಾದ ಡಿನ್ನರು ಪಾರ್ಟಿಯನ್ನು ಕೊಟ್ಟರು ಹೀಗೆ ಇಂತಹ ದೊಡ್ಡ ಪಾರ್ಟಿಯನ್ನು ಈ ಕಂಪೆನಿಗಳವರು ಕೊಡಲು ಕಾರಣಗಳೇನು ಎನ್ನುವುದನ್ನು ನಮ್ಮ ಸರಕಾರ ವಿಚಾರ ಮಾಡಬೇಕಾದುದು ಅವಶ್ಯಗತ್ಯ. ಇಲ್ಲಿ ಬಹಳ ದೊಡ್ಡ ಭಾರಿ ಕಂಟ್ರಾಕ್ಟರುಗಳು ಸೇರಿ ಇಂತಹ ಒಂದು ಪಾರ್ಟಿಯನ್ನು ಆಗ ಕೊಟ್ಟರು ಎಂದು ಗೊತ್ತಾಗಿದೆ. ಇದೂ ಅಲ್ಲದೆ ನಮ್ಮ ಮಾನ್ಯ ಮಂತ್ರಿಗಳೇ ಈಚೆಗೆ ಒಂದು ಪ್ರೆಸ್ ಕಾನ್‌ಫರೆನ್ಸ್‌ನ್ನು ಅಶೋಕಾ ಹೋಟೆಲಿನಲ್ಲಿ ಕರೆದಿದ್ದರು. ಇಂತಹ ಪ್ರೆಸ್ ಕಾನ್‌ಫರೆನ್ಸ್ ಕರೆಯಲು ನಮ್ಮ ಎಂ.ಐ.ಎಸ್ ಕಂಪೆನಿಯವರ ದೊಡ್ಡ ಆಫೀಸು ಇತ್ತು. ಅಲ್ಲದೆ ವಿಧಾನ ಸೌಧದಲ್ಲಿ ನಮ್ಮ ಮಂತ್ರಿಗಳ ಚೇಂಬರೇ ಇತ್ತು. ಇದೂ ಅಲ್ಲದೆ ಬೇರೆ ಕಡೆ ಸೇರಲು ಅವಕಾಶಗಳೂ ಇದ್ದವು. ಇದನ್ನು ಬಿಟ್ಟು ಪ್ರೆಸ್ ಕಾನ್‌ಫರೆನ್ಸ್ ಎಂದು ಅಶೋಕಾ ಹೋಟೆಲ್‌ನಲ್ಲಿ ಕರೆದು ಇದಕ್ಕೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಎಂ ಐ ಎಸ್ ಡಬ್ಲ್ಯೂ ಕಂಪೆನಿಯ ಲೆಕ್ಕಕ್ಕೆ ಹೋಗುತ್ತದೆ. ಈ ಕಂಪೆನಿಯಲ್ಲೇ ನಷ್ಟವಾಗುತ್ತಿರುವಾಗ ಇದರ ಬಗ್ಗೆ ಪ್ರೆಸ್ ಕಾನ್‌ಫರೆನ್ಸ್ ಕರೆಯಲು ಅಶೋಕಾ ಹೋಟೆಲಿನಲ್ಲೇ ಏಕೆ ಮಾಡಬೇಕಾಗಿತ್ತು? ಇದನ್ನು ತಪ್ಪಿಸಬಹುದಾಗಿತ್ತು. ಈ ರೀತಿ ಮಾಡಿರುವುದು ಸರಿಯಲ್ಲ.

ಇನ್ನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಅದು ಏನೆಂದರೆ ಈ ಕಂಪನಿಗೆ ಸರಿಯಾಗಿ ಸರಬರಾಜು ಮಾಡಲಿಲ್ಲ ಎಂದು ಅನೇಕ ಕೇಸುಗಳನ್ನು ಹಾಕಿದ್ದರು. ಇದರಲ್ಲಿ ಬೇರೆ ಬೇರೆ ಕಂಪೆನಿಗಳ ಕೇಸುಗಳಿವೆ, ಏನೆಂದರೆ ರಾಮಕೃಷ್ಣ ಕುಳವಂತರಾಯ ಕಂಪನಿಯವರಿಂದ ಸುಮಾರು ೮ ಲಕ್ಷ

ಭಾರತ್ ಸ್ಟೀಲ್ ರಾಡ್ಸ್‌ನಿಂದ ೪.೯ ಸಾವಿರ ಕರ್ನಾಟಕ ಎಕ್ಸ್‌ಪೋರ್ಟರ್ಸ್ ೧೫.೭೨ ಸಾವಿರ, ಸ್ಟೀಲ್ ಎಂಟರ್‌ಪ್ರೈಸಸ್ (ಪ್ರೈವೇಟು) ಲಿಮಿಟೆಡ್ ಸುಮಾರು ಐದು ಲಕ್ಷ ರೋಲಿಂಗು ಮಿಲ್ಸ್‌ನಿಂದ ಏಳು ಲಕ್ಷ ಇನ್ನೊಂದು ಕಂಪೆನಿಯಿಂದ ೯ ಲಕ್ಷ ಮತ್ತು ಶಕ್ತಿ ಸ್ಟೀಲ್ ಪೈಪ್ಸ್ ಕಂಪನಿಯಿಂದ ಸುಮಾರು ಎರಡೂವರೆ ಲಕ್ಷ ಬರಬೇಕೆಂದು ಅವರ ಮೇಲಲ್ಲಾ ಕೇಸುಗಳಾಗಿವೆ. ಇದುವರೆಗೆ ಇವರಿಂದ ಎಷ್ಟು ಹಣ ವಸೂಲಾಗಿದೆ ಮತ್ತು ಇನ್ನೂ ಎಷ್ಟು ಇವರಿಂದ ಬಾಕಿ ಇದೆ ಎಂಬುದನ್ನು ತಿಳಿಯಬೇಕಾಗಿದೆ. ಇದರ ಬಗ್ಗೆ ವಿವರಗಳನ್ನು ಸಚಿವರು ತಿಳಿಸಬೇಕೆಂದು ಹೇಳುತ್ತೇನೆ.

ಗಂಗಾವತಿಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಇದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಚಂದಪ್ಪ ಎನ್ನುವವರು ಕೊಯಮತ್ತೂರಿನವರು. ಶ್ರೀ ಚಂದಪ್ಪನವರನ್ನು ಕೊಯಮತ್ತೂರಿನಿಂದ ಕರೆಸಿದ್ದಾರೆ. The State Gover ment has got its own shares in the Gengavathi Suger Factory. ಅವರನ್ನು ಗಂಗಾವತಿ ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಏತಕ್ಕೆ ಮಾಡಿದಿರಿ? ಅವರನ್ನು ತಮಿಳುನಾಡಿನಿಂದ ಏತಕ್ಕೆ ಕರೆಸಿದ್ದೀರಿ? ಕರ್ನಾಟಕದಲ್ಲಿ ಬೇರೆ ಯಾರೂ ಇರಲಿಲ್ಲವೆ? ಚೀಫ್ ಅಕೌಂಟ್ಸ್ ಆಫೀಸರ್ ಶ್ರೀ ರಾಜೇಂದ್ರನ್ ಕೂಡ ಕೊಯಮತ್ತೂರು ಜಿಲ್ಲೆಯ ಪೊಲ್ಲಾಚಿಯವರು ಚೀಫ್ ಅಕೌಂಟೆಂಟ್ ಶ್ರೀ ಚಂದ್ರಶೇಖರ್ ಅವರೂ ಕೂಡ ತಮಿಳುನಾಡು ರಾಜ್ಯದ ಸೇಲಂನವರು. ಹೀಗೆ ತಮಿಳುನಾಡು ರಾಜ್ಯದಿಂದ ಅಧಿಕಾರಗಳನ್ನು ಗಂಗಾವತಿ ಸಕ್ಕರೆ ಕಾರ್ಖಾನೆಗೆ ತುಂಬಿಸಿದ್ದೀರಿ. ಇದಕ್ಕೆ ರಾಜ್ಯಸರಕಾರ ಹೇಗೆ ಒಪ್ಪಿಗೆ ಕೊಟ್ಟಿತು? ಆ ಕಾರ್ಖಾನೆಯಲ್ಲಿ ೯೦ ಪರ್ಸೆಂಟ್ ಜನರದ್ದು ಪೇರುಗಳು ಇವೆ. ಇಷ್ಟು ಪೇರುಗಳಿದ್ದರೂ ಕೂಡ ಅವರನ್ನು ಹೇಗೆ ತಮಿಳು ನಾಡಿನಿಂದ ಕರೆದುಕೊಂಡು ಬಂದರು? ಹೇಗೆ ನೇಮಕ ಮಾಡಿದರು? ಜೊತೆಗೆ ಇದೇ ಶ್ರೀ ಚಂದ್ರಪ್ಪನವರು ಮತ್ತೊಂದು ಸಕ್ಕರೆ ಕಾರ್ಖಾನೆಯನ್ನು ಭದ್ರಾವತಿಯಲ್ಲಿ ಪ್ರಾರಂಭ ಮಾಡಬೇಕೆಂದು ಇಟ್ಟುಕೊಂಡಿದ್ದಾರೆ. The State Government has recommend their case to Central Government for grant of a letter of intent. ಒಂದು ಸಕ್ಕರೆ ಕಾರ್ಖಾಯನ್ನು ಶಿವಮೊಗ್ಗದಲ್ಲಿ ಸರಕಾರದ ಆಧಾರದ ಮೇಲೆ ಮಾಡಬೇಕೆಂದು ಇದ್ದರೂ ಕೂಡ ಶ್ರೀ ಚಂದಪ್ಪ ಅವರಿಗೆ letter to intent ಹೇಗೆ ರೆಕಮೆಂಡ್ ಮಾಡಿದ್ದಾರೆ ಎಂಬುದು ಪ್ರಶ್ನೆ? ಜೊತೆಗೆ ತಮಿಳುನಾಡು ರಾಜ್ಯದಿಂದ ಜನರನ್ನು ಗಂಗಾವತಿ ಸಕ್ಕರೆ ಕಾರ್ಖಾನೆಗೆ ಏತಕ್ಕೆ ತುಂಬಿದ್ದೀರಿ ಎಂದು ಹೇಳಬೇಕು.

4-00 P. M.

ಎಂ.ಎಸ್.ಐ.ಎಲ್. ಛೇರ್ಮನರಾದ ಶ್ರೀ ಎಂ. ಡಿ. ಶಿವನಂಜಪ್ಪನವರನ್ನು ಮುನಿಸಿಪಲ್ ಕಮಿಷರನ್ನಾಗಿ ಮಾಡಬೇಕು. ಅವರು ಎಲ್ಲಿ ಕಾಲು ಇಡುತ್ತಾರೋ ಅಲ್ಲೆಲ್ಲಾ ಹಗರಣಗಳು ನಡೆದಿವೆ. ಅವರನ್ನು ಎಂ.ಎಸ್.ಐಎಲ್. ನಲ್ಲಿ ಏತಕ್ಕೆ ಇಟ್ಟಿದ್ದೀರಿ? ಹೀಗೆ ಶ್ರೀಯುತ ಟಿ. ಶಾಮಣ್ಣ, ಎಂ.ಎಸ್. ಶಿವನಂಜಪ್ಪ, ಮತ್ತು ರಾಮಗೋಪಾಲ್ ಇವರನ್ನು ಖಾಯಂ ಆಗಿ ಇಟ್ಟು ಕೈಗಾರಿಕೆಗಳನ್ನು ಸುಧಾರಿಸಬೇಕೆಂದಿದ್ದೀರಿ. ದಯಮಾಡಿ, ತಮಗೆ ಅವರ ಸರ್ವಿಸ್ ಬೇಕೇ ಬೇಕು ಎಂದರೆ ಅವರನ್ನು ಮುನಿಸಿಪಾಲಿಟಿಗೆ ಹಾಕಿ ಅವರನ್ನು ಅಲ್ಲೇ ಕೂಡಿಸಿಬಿಟ್ಟು ಅನ್ಯಾಯ ಮಾಡಬೇಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಮತ್ತೊಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಾನು ಯಾರನ್ನಾದರೂ ಹೊಗಳಬೇಕು, ಮತ್ತೊಂದು ಮಾಡಬೇಕೆಂಬ ಅಭಿಪ್ರಾಯವಿಲ್ಲ. ಆದರೆ, ಒಂದುಮಾತು ಹೇಳುತ್ತೇನೆ. ಶ್ರೀ ಐ.ಪಿ. ಮಲ್ಲಪ್ಪನವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾಗ ಅವರ ಕಾರನ್ನು ಮಾರಿ, ಎಂ.ಎಸ್.ಐ.ಎಲ್. ಕಾರನ್ನು ಅನ್ಯಾಯವಾಗಿ ಉಪಯೋಗ ಮಾಡುತ್ತಿದ್ದರು ಆಫೀಸರುಗಳ ಪ್ರೊಮೋಷನ್ ವಿಚಾರದಲ್ಲಿ ಬಹಳಷ್ಟು ಗಲಾಟೆ ನಡೆದು ಇದ್ದರೂ ಕೂಡ ಅದನ್ನು ನಾರಾಯಣ ಸ್ವಾಮಿಯವರ ಎನ್‌ಕ್ವಾಯರಿ ಬಗ್ಗೆ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಸೇರಿಸಿಲ್ಲ ಆಫೀಸರ್ಸ್ ಅರೆಸ್ಟ್ ಆಗಿ ಕೋರ್ಟಿನ ಕೇಸ್ ಕೂಡ ಆಗಿದೆ. ಅದರ ಬಗ್ಗೆ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ನಾನು ಒಂದು ಉತ್ತರವನ್ನು ಮಾನ್ಯ ಕೈಗಾರಿಕಾ ಸಚಿವರಿಂದ ನಿರೀಕ್ಷಣೆ ಮಾಡುತ್ತೇನೆ. ಈಗ ಏನು ಘಟನೆಗಳು ನಡೆದಿವೆ, ಅವುಗಳ ಬಗ್ಗೆ ಸೂಕ್ತ ವಿಚಾರಣೆ ಮಾಡಿ ಎಂತಹ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಇದರ ಬಗ್ಗೆ We are almost beating the dead horse. ಅಲ್ಲಿ ಇರುವ ಸರ್ವಿಸ್ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ (ರಾಮದುರ್ಗ).— ಈ ಸಭೆಯ ಮುಂದೆ ಇರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಕೇವಲ ೫೧ನೇ ಡಿಮ್ಯಾಂಡಿನ ಮೇಲೆ ನನ್ನ ಭಾಷಣವನ್ನು ಸೀಮಿತಗೊಳಿಸುತ್ತಿದ್ದೇನೆ ಅದರಲ್ಲೂ ಕೂಡ ನಾನು ಹತ್ತಿ ಮತ್ತು ಕೈಮಗ್ಗದ ನೇಕಾರರ ವಿಷಯವಾಗಿ ಮಾತ್ರ ಮಾತನಾಡಲು ಇಚ್ಛಿಸುತ್ತೇನೆ ಇಷ್ಟೊಂದು ವಿಶಾಲವಾದ ಬೇಡಿಕೆಯಾದ ಇಂಡಸ್ಟ್ರೀ ಅಂಡ್ ಕಾಮರ್ಸ್ ಮೇಲೆ ಮಾತನಾಡಲು ಬೇಕಾದಷ್ಟು ಅವಕಾಶ ಇದ್ದರೂ ಕೂಡ, ಇಂತಹ ಒಂದು ಚಿಕ್ಕ ವಿಷಯವನ್ನು ಆರಿಸಿಕೊಂಡು, ಅದರ ಮೇಲೆ ಹಲವು ಮಾತುಗಳನ್ನು ಮಾತನಾಡಲು ಏತಕ್ಕೆ ಇಚ್ಛಿಸಬೇಕೆಂದು ಅಧ್ಯಕ್ಷರು ಕೇಳಬಹುದು. ಕೇಳದೇ ಇದ್ದರೂ ಕೂಡ ನಾನು ಹೇಳಬಯಸುತ್ತೇನೆ. ಇದು ಬಹಳ ಗುಟ್ಟಿನ ವಿಷಯ. ನನ್ನು ನಿಮ್ಮ ಮುಂದೆ ಅಷ್ಟೇ ಇರಲಿ ಇತರ ವಿಷಯ ಗೊತ್ತಿಲ್ಲದೇ ಇರುವುದರಿಂದ, ಈ ಒಂದು ವಿಷಯದ ಮೇಲೆ ಮಾತನಾಡುತ್ತೇನೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾನು ವ್ಯವಸಾಯಗಾರನಾದ್ದರಿಂದ, ಮೊದಲು ಹತ್ತಿ ಮತ್ತು ಕೈಮಗ್ಗದ ವಿಷಯದಲ್ಲಾಗಲೀ, ಅಥವಾ ಅದನ್ನು ಬೆಳೆಯುವ ರೀತಿಯಲ್ಲಾಗಲೀ, ನನಗೆ ಗೊತ್ತಿರಲಿಲ್ಲ ವಿಧಾನ ಸಭೆಗೆ ಸದಸ್ಯನಾದ ನಂತರ ಹಿಂದೆಂದೂ ಕಾಣದಂಥ ಕ್ಷಾಮ ತಲೆದೋರಿದಾಗ, ಅಲ್ಲಿನ ಜನರು ಪಡತಕ್ಕ ಗೋಳನ್ನು ಮತ್ತು ಅವರು ಎದುರಿಸತಕ್ಕ ಸಮಸ್ಯೆಗಳನ್ನೂ ನೋಡಿ ಅವರ ಕಷ್ಟ ಸುಖಗಳಲ್ಲಿ ಸಮಭಾಗಿಯಾಗಿ ಅವುಗಳನ್ನು ತಿಳಿದುಕೊಳ್ಳುವ ಒಂದು ಅವಕಾಶ ಸಿಕ್ಕಿತು, ಹಿಂದೆ ಕ್ಷಾಮ ಬಂದಾಗ ಬಡ ನೇಕಾರರು ನಮ್ಮ ತಾಲ್ಲೂಕಿನಲ್ಲಿ ಕ್ಷಾಮ ತಲೆದೋರಿದಾಗ ಅಲ್ಲಿದ್ದ ೨೦ ಸಾವಿರ ಜನಸಂಖ್ಯೆ ಹತ್ತಿ ನೇಕಾರರು ಎಂತಹ ಭವಣೆ ಪಟ್ಟವರು ಎಂದು ಹೇಳಿದರೆ, ತಮ್ಮಲ್ಲಿರತಕ್ಕ ವಸ್ತುವಡವೆಗಳನ್ನು ಮಾರಿ, ಮನೆಯಲ್ಲಿರತಕ್ಕ ಪಾತ್ರೆಗಳನ್ನು ಮಾರುವಂಥ ಒಂದು ದಾರುಣ ಸ್ಥಿತಿಯಲ್ಲಿ ಇದ್ದರು. ಆಗ ಮಾನ್ಯ ಎಸ್ ಎಂ ಕೃಷ್ಣ ಅವರು ಗೋಕಾಕಿನಲ್ಲಿ ನೂಲಿನ ಡಿಪೋ ತೆಗೆದು ಹಂಚುವ ಕ್ರಮ ಕೈಗೊಂಡರು. ಅದಕ್ಕೆ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ ೨೦ ಸಾವಿರ ಜನಸಂಖ್ಯೆ ಇರತಕ್ಕ ನೇಕಾರರ ಸಮಸ್ಯೆ ಇಡೀ ದೇಶದ ಸಮಸ್ಯೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದಲ್ಲಿ ಇರತಕ್ಕ ಸುಮಾರು ೧, ೩೭, ೦೦೦ ಲೂಮುಗಳಲ್ಲಿ ಹತ್ತಿ ಕೈಮಗ್ಗದ ಲೂಮುಗಳಲ್ಲಿ ೧, ೦೨, ೫೩೦ ಲೂಮುಗಳು ಸಹಕಾರ ಸಂಘಗಳ ಕಕ್ಷೆಯೊಳಗೆ ಬಂದಿವೆ. ಹಿಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದಂಥ ಹ್ಯಾಂಡ್ ಲೂಂ ಕೈಗಾರಿಕೆ ದೇಶದಲ್ಲೇ ಅತಿ ಪ್ರಾಮುಖ್ಯವಾದ ಕೈಗಾರಿಕೆ ಭಾರತಾದ್ಯಂತ ಮೂರು ಲಕ್ಷ ಲೂಂ ಇದ್ದು, ೧೦ ದಶ ಲಕ್ಷ ಜನರ ಇದರ ಮೇಲೆ ಉಪಜೀವನ ನಡೆಯತಕ್ಕ ಕೈಗಾರಿಕೆ ಎಂದು ಹೇಳಿದರ ತಪ್ಪಾಗಲಿಕ್ಕಿಲ್ಲ.

ಪರಾವಲಂಬಿಯಾಗಿ ಬಾಳದೆ ಇರತಕ್ಕ ಜನರನ್ನು, ಸ್ವಾವಲಂಬಿಗಳಾಗಿ ಆಗುವುದಕ್ಕೆ ಆಸ್ಪದ ಕೊಡುತ್ತದೆ. ಈ ಒಂದು ಸ್ವಾವಲಂಬಿ ಜನಗಳ ಉಪಜೀವನಕ್ಕೆ ಏಟು ಬಿದ್ದು ಅವರು ಜೀವನ ಸಾಗಿರುವುದು ಕಷ್ಟಕರವಾಗಿದೆ. ಅವರನ್ನು ಆರ್ಥಿಕವಾಗಿ ಪುನರ್‌ವಸತೀಕರಣ ಮಾಡುವ ಸಲುವಾಗಿ ಏನೇನು ಸಹಾಯ ಬೇಕೋ ಅದನ್ನು ಅರಿತುಕೊಂಡು ಅದನ್ನು ಸಿನ್‌ಸಿಯರ್ ಆಗಿ ಅನುಷ್ಠಾನಕ್ಕೆ ತಂದರೆ ಮಾತ್ರ ಯಶಸ್ಸು ಆದೀತು ಎಂದು ಹೇಳಬಯಸುತ್ತೇನೆ. ಈ ನೇಕಾರರಿಗೆ ಮೊದಲು ಈ ದೇಶದಲ್ಲಿ ಎಷ್ಟೊಂದು ಮಹತ್ವ ಇತ್ತು? ಇಲ್ಲಿ ತಯಾರಾದ ಹ್ಯಾಂಡ್‌ಲೂಮ್, ಮಧ್ಯ ಏಷ್ಯಾ ಮತ್ತು ಯೂರೋಪಿಯನ್ ರಾಷ್ಟ್ರಗಳಿಗೆ ಹೋಗುತ್ತಿತ್ತು. ಪರ ದೇಶದಲ್ಲಿ ಯಾಂತ್ರಿಕ ಯುಗ ಶುರುವಾದ ಮೇಲೆ ಬಡ ಕೈಗಾರಿಕಾ ಉದ್ದಿಮೆ ಮೇಲೆ ಏಟು ಬಿತ್ತು ಈ ಟೆಕ್ಸ್‌ಟೈಲ್ ಮಿಲ್ಲುಗಳು ಕಾಂಪಿಟೇಷನ್ ಮಾಡುತ್ತಾ ಇರುವಾಗ ಇವರು ತತ್ತರಿಸಿ ಹೋದರು ಅವರ ಬಾಳು ಇನ್ನಷ್ಟು ಕಷ್ಟವಾಯಿತು. ೧೯೨೮ ರಲ್ಲಿ ರಾಯಲ್ ಅಗ್ರಿಕಲ್ಚರ್ ಕಮಿಷನ್ ಆಯಿತು. ಅಂದಿನಿಂದ ಇಲ್ಲಿಯವರೆಗೆ ಅವರ ಏಳಿಗೆಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡರು ೧೯೪೮ ರಲ್ಲಿ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಆಯಿತು, ಅವರ ಸಲಹೆ ಮೇರೆಗೆ ಆಲ್ ಇಂಡಿಯಾ ಹ್ಯಾಂಡ್ ಲೂಮ್ ಬೋರ್ಡ್ ಆಸ್ತಿತ್ವಕ್ಕೆ ಬಂತು. ಅಂದಿನಿಂದ ಸರ್ಕಾರ ವಿಶೇಷ ಆಸ್ಥೆ ವಹಿಸುತ್ತಾ ಬಂತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಷ್ಟೊಂದು ವ್ಯವಸ್ಥೆಗಳನ್ನು ಮಾಡಿದರೂ ಕೂಡ ಸಮಾಜದಲ್ಲಿ ಇದ್ದ ನೇಕಾರಿ ಜನ, ಕೂಲಿ ಕಸಬು ಮಾಡಿಕೊಂಡಿರತಕ್ಕ ಜನ ನಿಕೃಷ್ಟಾವಸ್ಥೆಯಲ್ಲಿ ಇರಲಿಕ್ಕೆ ಪ್ರತಿಯೊಂದು ಪಂಚವಾರ್ಷಿಕ ಯೋಜನೆಯಲ್ಲಿ ಹಣ ನಿಗಧಿ ಮಾಡಿ ಮ್ಯಾಸೀವ್ ಪ್ರೋಗ್ರಾಂ ಹಾಕಿಕೊಂಡು ಅವರ ಬಾಳು ಹಸನಾಗಬೇಕು ಆರ್ಥಿಕ ಪುನರ್ವಸತೀಕರಣ ಆಗಬೇಕು ಎಂದು ಇಟ್ಟುಕೊಂಡು ನಾಲ್ಕನೆಯ ಪಂಚವಾರ್ಷಿಕ ಯೋಜನ ಕೊನೇ ಹಂತದಲ್ಲಿ ಇರುವಾಗ, ಅವರು ನಿಕೃಷ್ಟಾವಸ್ಥೆಯಲ್ಲಿ ಇರಲು ಕಾರಣ ಏನು? ೨೦ ವರ್ಷಗಳಿಗೊಮ್ಮೆ ಉದ್ಯೋಗದಲ್ಲಿ ಗಂಡಾಂತರ ಏತಕ್ಕೆ ಬರುತ್ತಿದೆ ಎಂದು ಕೂಲಂಕಷವಾಗಿ ನೋಡಬೇಕಾಗಿದೆ. ೧೯೫೨ ರಲ್ಲಿ ಈ ಉದ್ಯೋಗದಲ್ಲಿ ಕ್ರೈಸಿಸ್ ಬಂತು, ಮದ್ರಾಸಿನಲ್ಲಿ ಹ್ಯಾಂಡ್‌ಲೂಮ್ ಗುಡ್ಸ್ ಹ್ಯೂಜ್ ಅಕ್ಯುಮಲೇಷನ್ ಆಯಿತು. ಪುನಃ ನೇಕಾರರು ನಿರುದ್ಯೋಗಿಗಳಾಗಿ ಅನೇಕ ತಾಪತ್ರಯಗಳನ್ನು ಅನುಭವಿಸುವ ಪರಿಸ್ಥಿತಿ ೧೯೭೨ ರಲ್ಲಿ ಬಂತು. ನೇಕಾರರಿಗೆ ನೂಲು ಯೋಗ್ಯ ಬೆಲೆಗೆ ಸಿಕ್ಕದೆ ಇದ್ದಾಗ ನೂಲಿನ ಡಿಪೋ ತೆಗೆದರು, ಅವರಿಗೆ ಕೊಳ್ಳಲು ಒಂದು ಪೈಸೆ ಇಲ್ಲದಿದ್ದಾಗ ಕಾರ್ಡ್ ಕೊಟ್ಟು ಯೋಗ್ಯ ಬೆಲೆಗೆ ಹಂಚಲಾಗಿದೆ. ಅಲ್ಲಿ ಇರತಕ್ಕ ಮುಖ್ಯಸ್ಥರು, ವೀವರ್ಸ್ ಸಂಘ ಸಂಸ್ಥೆಗಳಲ್ಲಿನ ಪ್ರಭಾವ ವ್ಯಕ್ತಿಗಳು, ಪಟ್ಟಭದ್ರ ಹಿತಾಸಕ್ತಿಗಳು ನೂಲಿನ ವಿತರಣೆ ಕಾಲದಲ್ಲಿ ಒಂದು ಕೂಪನ್ನಿಗೆ ೧೦ ರೂಪಾಯಿ ಕೊಟ್ಟು ಎಲ್ಲಾ ನೂಲನ್ನು

ಅವರೇ ತೆಗೆದುಕೊಂಡು ಹೋದರು. ಆಲ್ ಇಂಡಿಯಾ ಹ್ಯಾಂಡ್‌ಲೂಮ್ ಬೋರ್ಡ್ ಆ ಕಾಲದಲ್ಲಿ ಯೋಗ್ಯವಾದ ಆರ್ಟ್ ಸಿಲ್ಕನ್ನು ಸಂಘ ಸಂಸ್ಥೆಗಳಿಗೆ ಹಂಚಿದರೆ ಅಲ್ಲಿನ ಸಹಕಾರ ಸಂಘದ ಛೇರಮನ್‌ರೂ ಆ ಸಂಘದ ಸದಸ್ಯರೂ ಒಂದು ಎಳೆ ನೂಲು ಕೂಡ ಬಡ ನೇಕಾರರಿಗೆ ಮುಟ್ಟಿಸಿಲ್ಲ. ಇಂತಹ ಪರಿಸ್ಥಿತಿ ೨೦ ವರ್ಷಕ್ಕೂ ಮೇಲ್ಪಟ್ಟು ಬರುತ್ತಿದೆ. ಯಾವುದೋ ಅಪ್ರಮಾಣಿಕವಾದ ಜನ ಸಹಕಾರ ಸಂಘದಲ್ಲಿ ಇರುವುದರಿಂದಲೋ, ಅಥವಾ ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಇಂಪ್ಲಿಮೆಂಟ್ ಮಾಡುವಂಥ ಭಾವನೆ ನಮ್ಮಲ್ಲಿ ಇಲ್ಲದೇ ಇರುವುದರಿಂದಲೋ, ಈ ರೀತಿ ಆಗುತ್ತಿದೆ. ಇದಕ್ಕೆ ಕಾರಣ ನೇಕಾರರು ಅಜ್ಞಾನಿಗಳಾಗಿದ್ದಾರೆ, ತಮ್ಮ ಖಾತೆ ಸಾಗರದಂಥ ವಿಶಾಲವಾದ ಕ್ಷೇತ್ರ. ಐದನೇ ಪ್ಲಾನಿನಲ್ಲಿ ೧೯೭೪-೭೫ರ ಬಜೆಟ್‌ನಲ್ಲಿ ನಿಗದಿ ಮಾಡಿದ ಹಣ ಕೇವಲ ೩೫ ಲಕ್ಷ ಇಷ್ಟೊಂದು ಅಲ್ಪ ಹಣ ವಿನಿಯೋಗ ಮಾಡತಕ್ಕದ್ದಕ್ಕೆ ತಮಗೆ ಅಷ್ಟೊಂದು ಲಕ್ಷ್ಯ ವಹಿಸಲಿಕ್ಕೆ ಪುರುಸೊತ್ತು ಸಿಕ್ಕುತ್ತಾ ಇರಲಿಕ್ಕಿಲ್ಲ. ನಿಮ್ಮ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯಲ್ಲಿ ಹ್ಯಾಂಡ್ ಲೂಮ್ ಒಂದು ತೃಣ ಮಾತ್ರ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ತಾವು ಮಿನಿಸ್ಟರು. ದಕ್ಷರಾದವರು, ಮೇಲಾಗಿ ಯುವಕರು, ಎತ್ತರಕ್ಕೆ ಹೋಗುವ ಆಸೆವುಳ್ಳವರು, ಎತ್ತರಕ್ಕೆ ಮುಟ್ಟುತ್ತೇವೆಂಬ ವಿಶ್ವಾಸ ಇಟ್ಟುಕೊಂಡಿರುವವರು. ಪ್ರತಿ ದಿವಸದಲ್ಲಿ ಅರ್ಧ ಗಂಟೆ ಕಾಲ ಬಡ ನೇಕಾರರ ಅವಸ್ಥೆಯನ್ನು ಸುಧಾರಿಸಲಿಕ್ಕೆ ಮತ್ತು ಸಂಘ ಸಂಸ್ಥೆಗಳ ಮೂಲಕ ಅವರ ಪುನರ್ವಸತೀಕರಣ ಮಾಡುವ ಕಡೆಗೆ ಸ್ವಲ್ಪ ಲಕ್ಷ್ಯ ವಹಿಸಿದರೆ ಇವರ ಬಾಳು ಬಂಗಾರವಾದೀತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮುಂದಿನ ವರ್ಷ ಈ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ಅವರ ಕುಂದುಕೊರತೆಗಳನ್ನು ನೀಗಿ ಅವರ ಬಾಳು ಬಂಗಾರವಾಗಿ, ನಾನು ತಮಗೆ ಬರೇ ಧನ್ಯವಾದವನ್ನು ಮಾಡುವಂಥ ಪ್ರಸಂಗ ಬರಲಿ ಎಂದು ಪರಮಾತ್ಮನಲ್ಲಿ ಬೇಡುತ್ತೇನೆ. ಪ್ರತಿ ವರ್ಷ ಹ್ಯಾಂಡ್ ಲೂಮ್ ಬೋರ್ಡ್‌ನವರು ಅಲ್ಲಿಂದ ಇಲ್ಲಿಯವರೆಗೆ ಮಾಸೀವ್ ಪ್ರೋಗ್ರಾಮ್ ಹಾಕಿಕೊಂಡಿದ್ದು ಅದರ ಮುಖಾಂತರ ವ್ಯವಸ್ಥಿತ ಹಂತದಲ್ಲಿ ಸಹಾಯ ಕೊಡುತ್ತಾ ಬಂದಿದ್ದಾರೆ ಸಹಾಯ ಮಾಡಲಿಲ್ಲ ಎಂದು ಹೇಳುವುದಿಲ್ಲ. ಆದರೆ ಪ್ರತಿಯೊಂದು ತಾಲ್ಲೂಕಿನಲ್ಲಿ ಅಪ್ರಮಾಣಿಕವಾದ ಸಂಘ ಸಂಸ್ಥೆಗಳು ಮತ್ತು ಅಪ್ರಮಾಣಿಕವಾದ ಪಟ್ಟಭದ್ರ ಹಿತಾಶಕ್ತಿಗಳು ಇದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಅಂಥ ಒಬ್ಬರು, ಇಬ್ಬರನ್ನು ಮುಟ್ಟುಗೋಲು ಹಾಕಿದರೆ ವ್ಯವಸ್ಥೆ ಸರಿಯಾದೀತು. ನೂಲಿನ ಹಂಚಿಕೆ ವ್ಯವಸ್ಥೆ ಇದ್ದಾಗ ಬೆಳಗಾಂನಲ್ಲಿ ಘೋರಾಟ ಮಾಡಿ ಹೋಗುವ ಪರಿಸ್ಥಿತಿ ಇತ್ತು. ಮಾನ್ಯ ಮಂತ್ರಿಗಳು ಒಂದು ಸಲ ಭಾಷಣ ಮಾಡುವಾಗ ಆರ್ಟ್ ಸಿಲ್ಕ್ ಪರಿಸ್ಥಿತಿ ಬಗ್ಗೆ ಹೇಳಿದರು. ಅಂಥ ಪರಿಸ್ಥಿತಿ ಬಂದು ತಾವು ಬೇಕಾದಷ್ಟು ಪ್ರೋಗ್ರಾಮ್‌ಗಳನ್ನು ಹಾಕಿಕೊಂಡು ಅಸಿಸ್ಟೆನ್ಸ್ ಕೊಡುತ್ತಾ ಇದ್ದೀರಿ, ೬೦ ಕೌಂಟುಗಳಿಗಿಂತ ಒಳಗಿನ ನೂಲನ್ನು ಹ್ಯಾಂಡ್‌ಲೂಮ್ ನೇಕಾರರು ಉಪಯೋಗ ಮಾಡಿಕೊಂಡರೆ ಎಕ್ಸೈಸ್ ಡ್ಯೂಟಿ ಇಲ್ಲ. ಹೈಯರ್ ಕೌಂಟಿನ ನೂಲನ್ನು ಹ್ಯಾಂಡ್‌ಲೂಮ್‌ನವರು ಉಪಯೋಗ ಮಾಡುವಾಗ ಅದಕ್ಕೆ ಕಡಿಮೆ ಪ್ರಮಾಣದ ಎಕ್ಸೈಸ್ ಡ್ಯೂಟಿಚಾರ್ಜ್ ಮಾಡುತ್ತಾರೆ ಅದನ್ನು ಕೂಡ ಮನ್ನಾ ಮಾಡಿ ಅವರ ಆರ್ಥಿಕ ಬೆಳವಣಿಗೆಗೆ ಆಸ್ಪದ ಮಾಡಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಹ್ಯಾಂಡ್‌ಲೂಮ್ ನೇಕಾರರು ಅವರ ಉತ್ಪನ್ನಕ್ಕೆ ಒಂದು ಪ್ರತಿಶತಕ್ಕ ನೂಲಿನ ಮೇಲೆ ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡುತ್ತಿದ್ದಾರೆ. ಆದುದರಿಂದ ಕೈಮಗ್ಗದ ನೇಕಾರರು ಉಪಯೋಗ ಮಾಡಲು ಎಲ್ಲಾ ನೂಲಿನ ಮೇಲೆ ಸೇಲ್ಸ್ ಟ್ಯಾಕ್ಸ್ ಮನ್ನಾ ಮಾಡಬೇಕು. ಸೇಲ್ಸ್‌ಟ್ಯಾಕ್ಸ್ ಕೊಡುವ ಪ್ರಸಂಗ ಬರಬಾರದು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ಒಂದು ಸಹಕಾರ ಸಂಘದ ಕಕ್ಷೆಯಲ್ಲಿ ಉತ್ಪನ್ನವಾಗುವ ನೂಲನ್ನು ಎಲ್ಲಾ ಮಟ್ಟದಲ್ಲಿ ಟ್ಯಾಕ್ಸ್‌ನಿಂದ ಎಕ್ಸೆಂಪ್ಟ್ ಮಾಡಿದ್ದೀರಿ. ಸಹಕಾರ ಸಂಘದ ಕಕ್ಷೆ ಹೊರಗಡೆ ಮಾಸ್ಟರ್ಸ್ ವೀವರ್ಸ್ ಕಂಟ್ರೋಲ್‌ನಲ್ಲಿ ನೇಕಾರರು ಉತ್ಪಾದನೆ ಮಾಡುವ ನೂಲಿನ ಮೇಲೆ ಆಕ್ಟ್ರಾಯಿ ವಸೂಲು ಮಾಡಬಾರದು ಆಜ್ಞೆ ಮಾಡಿರುವುದಕ್ಕೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಇನ್ನು ಒಂದು ವಿಷಯವನ್ನು ಹೇಳಲಿಚ್ಛಿಸುತ್ತೇನೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಇವರ ಬಗ್ಗೆ ೧೬೦ ಲಕ್ಷ ನಿಗಧಿ ಮಾಡಿದ್ದೀರಿ. ೧೯೬೯ ರಿಂದ ಇಲ್ಲಿಯವರೆಗೆ ಬಜೆಟ್ ಪ್ರಾವಿಷನ್ ನೋಡಿದರೆ, ಪ್ರತಿ ವರ್ಷ ಬಹಳ ಕಡಿಮೆ ಆಗುತ್ತಾ ಹೋಯಿತು. ೧೯೬೯ ರಲ್ಲಿ ೨೦ ಲಕ್ಷ ೭೦-೭೧ ರಲ್ಲಿ ೧೩ ಲಕ್ಷ ಮುಂದೆ ಬರುವ ಎರಡು ವರ್ಷಗಳಲ್ಲಿ ೧೩ ಲಕ್ಷ ತೋರಿಸುತ್ತಾ ಹೋಗಿದ್ದೀರಿ. ಇದರಿಂದ ಅವರ ಕಡೆಗೆ ಎಷ್ಟು ಲಕ್ಷ ಕೊಡಬೇಕೋ ಅಷ್ಟು ಕೊಡದೆ ಅಲಕ್ಷ್ಯ ಮಾಡಿದ್ದೀರಿ ಎಂದು ಹೇಳಬೇಕಾಗುತ್ತದೆ, ದಯವಿಟ್ಟು ಐದನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಕೂಡ ಹೆಚ್ಚು ಹಣವನ್ನು ಒದಗಿಸಿ ಅವರಿಗೆ ಯೋಗ್ಯವಾದ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆರ್ಗನೈಜೇಷನ್ ಎಕ್ಸ್‌ಪೆನ್ಸ್ ವಿಚಾರ ತೆಗೆದುಕೊಂಡರೆ ಸುಮಾರು ೯ ಲಕ್ಷ ಚಿಲ್ಲರೆ, ಬೇರೆ ಸ್ಟಾಫ್‌ನ ಟಿ. ಎ. ಮತ್ತು ಸಂಬಳಕ್ಕೆ ಹೋಗುತ್ತಿದೆ ಅವನ್ನು ತೆಗೆದರೆ ಅವರ ಸಲುವಾಗಿ ವಿನಿಯೋಗವಾಗುವುದು ಬಹಳ ಕಡಿಮೆ ಪ್ರಮಾಣದಲ್ಲಿದ್ದು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಲಿಚ್ಛಿಸುತ್ತೇನೆ. ರಿಸರ್ವ್ ಬ್ಯಾಂಕ್ ಸ್ಕೀಮ್‌ನ ಬಗ್ಗೆ ಸ್ಪೆಷಲ್ ಸ್ಟಾಫ್ ನೇಮಿಸಿದ್ದೀರಿ; ಸ್ಟಾಫ್ ಮೇಲೆ ಪ್ರತಿ ವರ್ಷ ಎರಡು ಲಕ್ಷ ರೂಪಾಯಿ ವಿನಿಯೋಗವಾಗುತ್ತಿದೆ. ಅವರು ಮಾಡುವಂಥ ಕೆಲಸ ಏನು? ೧೯೭೨ ರ ೪೭.೫೭ ಲಕ್ಷ ರೂಪಾಯಿ ಪೇಪರ್ಸ್ ಬೆಲ್ಟ್ ಆಪ್ ಮಾಡಿ ಮೇಲೆ ಕಳು

(ಶ್ರೀ ಆರ್. ಎಸ್. ಪಾಟೀಲ)

ಹಿಸಿಕೊಟ್ಟಿರು. ೭೧–೭೨ ರಲ್ಲಿ ೬೫ ಲಕ್ಷ ರೂಪಾಯಿ, ೧೯೭೨-೭೩ ರಲ್ಲಿ ೫೧ ಲಕ್ಷ ರೂಪಾಯಿ, ೭೩–೭೪ ರಲ್ಲಿ ೩೦ ಲಕ್ಷ ರೂಪಾಯಿ ಪೇಪರ್ ಬಿಲ್ಟ್‌ಅಪ್ ಮಾಡಿ ಕಳುಹಿಸಿಕೊಟ್ಟಿರು. ಆದರೆ ಮಂಜೂರು ಆದುದು ಮೂರನೇ ಒಂದು ಮಾತ್ರ. ೧೯೬೯–೭೦ ರಲ್ಲಿ ೧೦ ಲಕ್ಷ, ೧೯೭೧–೭೨ ರಲ್ಲಿ ೧೨ ಲಕ್ಷ, ೧೯೭೨–೭೩ ರಲ್ಲಿ ೧೮ ಲಕ್ಷ, ೧೯೭೩–೭೪ ರಲ್ಲಿ ೧೪ ಲಕ್ಷ, ೧೯೭೪–೭೫ ರಲ್ಲಿ ೬೦ ಲಕ್ಷ, ೭೦ ಲಕ್ಷ ರಿಕಾರ್ಡ್ ಬಿಲ್ಟ್‌ಅಪ್ ಮಾಡಿ ಈ ಬಡ ನೇಕಾರರಿಗೆ ಅಷ್ಟು ಮೊತ್ತ ಸಾಲ ಸಿಕ್ಕುತ್ತದೆ ಎಂದು ಹೊರಗಡೆ ಸಾಲ ಮಾತ್ರಿ, ಸಾಲ ಮಂಜೂರು ಆಗಿ ಬಂದನಂತರ ಕೊಡುತ್ತೇವೆಂದು ಮಾತು ಕೊಟ್ಟು, ಸಾಲ ತೆಗೆದುಕೊಂಡು ಬಂದಿರುವಾಗ ಸಾಲ ಮಂಜೂರು ಆಗದೇ ಹೋದಾಗ ಅವರ ಗತಿ ಏನು? ವರ್ಷಕ್ಕೆ ಎಷ್ಟು ಸಾಲ ಸಿಕ್ಕುತ್ತದೆಯೋ, ಅಷ್ಟು ಸಾಲ ನಿಗದಿ ಮಾಡಲಾಗಿತ್ತೋ ಅಷ್ಟಕ್ಕೆ ಪತ್ರಗಳನ್ನು ಕಳುಹಿಸಿದರೆ ಬಡ ನೌಕರರಿಗೆ ಆಗತಕ್ಕ ಕಷ್ಟ ಪರಿಹರಿಸಬಹುದಾಗಿತ್ತು. ಮೊದಲು ೧೯೬೭ ರಲ್ಲಿ ವಿಧಾನಸಭೆಗೆ ಸದಸ್ಯನಾದಾಗ ಒಂದು ಹೌಸಿಂಗ್ ಕಾಲೋನಿ ಮಾಡಿಸಿದೆ ಅಂದಿನಿಂದ ಇಂದಿನವರೆಗೆ ಬೇಸ್‌ಮೆಂಟ್ ಲೆವಲ್‌ನಲ್ಲೇ ಇದೆ ಆಡಳಿತ ಸಂಘದ ದೋಷದಿಂದಲೋ, ಚೇರ್‌ಮನ್ ದೋಷದಿಂದಲೋ, ೮ ವರ್ಷ ಆದರೂ ಕೂಡ ಅದು ಕಾರ್ಯರೂಪಕ್ಕೆ ಬಂದಿಲ್ಲ. ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಕೆಲಸ ಮಾಡಿಸಿರತಕ್ಕದ್ದನ್ನು ನೋಡಿದರೆ ಸಂತೋಷವಾಗುತ್ತದೆ. ನನ್ನ ತಾಲ್ಲೋಕಿನಲ್ಲಿ ೮ ವರ್ಷಗಳ ಹಿಂದೆ ಆದಂಥ ಹೌಸಿಂಗ್ ಕಾಲೋನಿ ೧೫ ೨೫ ಸಾವಿರ ರೂಪಾಯಿ ಖರ್ಚಾದರೂ ಇದುವರೆಗೂ ಕಾರ್ಯರೂಪಕ್ಕೆ ಬರದೆ ಬೇಸ್‌ಮೆಂಟ್ ಲೆವೆಲ್‌ನಲ್ಲೇ ಇದೆ, ಯಾರ ದೋಷವೇ ಇರಲಿ, ಸಂಘದ ದೋಷ ಇದ್ದರೆ, ನನ್ನ ತಾಲ್ಲೋಕಿನಲ್ಲಿ ಇದ್ದರೂ ಕೂಡ ಅವರ ಮೇಲೆ ಉಗ್ರವಾದಂಥ ಕ್ರಮ ತೆಗೆದುಕೊಂಡು ತಿಳಿಸಲು ಹಿಂದುಮುಂದೆ ನೋಡುವುದಿಲ್ಲ.

ವೀವರ್ಸ್ ಟ್ರೈನಿಂಗ್ ಸಲುವಾಗಿ ನಾನು ಒಂದೊಂದಾಗಿ ಹೇಳುತ್ತಿದ್ದೇನೆ. ೪ನೇ ಪಂಚವಾರ್ಷಿಕ ಯೋಜನೆಯಲ್ಲಿ ತಮ್ಮ ಪುಸ್ತಕದಲ್ಲಿ ಹೇಳಿದಂತೆ ೪ ವರ್ಷಗಳ ಅವಧಿಯಲ್ಲಿ ೬೨ ಜನ ನೇಕಾರರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ. ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸಿರುವ ಇಷ್ಟೊಂದು ಜನ ಇರುವಾಗ, ಅವರು ಹಳೆಯ ಪದ್ಧತಿಗಳ ಮೇಲೆ ಬಟ್ಟೆಗಳನ್ನು ತಯಾರಿಸುತ್ತಿರುವಾಗ, ಆಕರ್ಷಣೀಯವಾದ ಬಟ್ಟೆಗಳ ಮೇಲೆ ಹೆಚ್ಚು ಜನರ ಒಲವು ಇರುವಾಗ, ಓಬೀರಾಯನ ಕಾಲದ ಡಿಸೈನ್‌ಗಳ ಬಟ್ಟೆಗಳನ್ನು ತೊಡಿರಿ ಎಂದು ಹೇಳುವ ಮಾತು ಸಮಂಜಸವಾಗಲಿಕ್ಕಿಲ್ಲ. ೪ ವರ್ಷದ ಅವಧಿಯಲ್ಲಿ ಕೇವಲ ೬೨ ಜನಕ್ಕೆ ಟ್ರೈನಿಂಗ್ ಕೊಟ್ಟಿದ್ದೀರಿ. ಒಂದೇ ವರ್ಷದಲ್ಲಿ ೩೦ ಜನರಿಗೆ ಈ ವರ್ಷ ಟ್ರೈನಿಂಗ್ ಕೊಟ್ಟಿದ್ದೀರಿ. ಟ್ರೈನಿಂಗ್ ಕೊಟ್ಟನಂತರ ಜನ ಎಲ್ಲಿಗೆ ಹೋಗಬೇಕು, ಏನು ಮಾಡಬೇಕು, ಅವರು ಸಂಘಸಂಸ್ಥೆಗಳಿಗೆ ಹೋಗಿ ಮಾಹಿತಿ ಕೊಡುತ್ತಾರೆಯೋ ಎನ್ನುವುದನ್ನು ತಿಳಿಸಬೇಕು ಅವರು ಅನ್‌ಎಂಪ್ಲಾಯ್ಡ್ ಆಗಿ ಉಳಿದ ಉದಾಹರಣೆಗಳು ಬೇಕಾದಷ್ಟು ಇವೆ. ಪ್ರತಿಯೊಂದು ಸಂಘಸಂಸ್ಥೆಗಳು ಡಿಸೈನ್ ಮಾಡುವುದರಿಂದ ಅವರಿಗೆ ಉತ್ತಮ ಕ್ವಾಲಿಟಿ ಬಟ್ಟೆಗಳನ್ನು ನೇಯುವುದರಲ್ಲಿ ಟ್ರೈನಿಂಗ್ ಕೊಟ್ಟು ಬಹಳ ಆಕರ್ಷಕ ಪರಿಸ್ಥಿತಿಗೆ ತರಬೇಕು ಎಂದು ನಾನು ಹೇಳುತ್ತೇನೆ. ಇಲ್ಲಿಯವರೆಗೆ ಮಿಲ್ಲಿನ ಬಟ್ಟೆ ಮೇಲೆ ಹೆಚ್ಚಿನ ಸೇಲ್ಸ್ ಟ್ಯಾಕ್ಸ್ ಇತ್ತು. ಆದುದರಿಂದ ಬಟ್ಟೆ ಬಹಳ ಬೆಲೆ ಬಾಳುವುದರಿಂದ ಹ್ಯಾಂಡ್‌ಲೂಂ ಬಟ್ಟೆಗೆ ಬೆಲೆ ಬರುತ್ತಿದೆ. ಮಹಾರಾಷ್ಟ್ರ ಬೆಳಗಾಂ ಮುಂತಾದ ಕಡೆಗಳಿಂದ ಕಾರ್ ತೆಗೆದುಕೊಂಡು ಬಂದು, ಖಣಗಳನ್ನು, ಸೀರೆಗಳನ್ನು, ಧೋತರುಗಳನ್ನು ತೆಗೆದುಕೊಂಡು ಹೋಗುವುದನ್ನು ನೋಡಿದರೆ, ಇದಕ್ಕೆ ಡಿಮ್ಯಾಂಡ್ ಇದೆ, ಬೆಲೆ ಬರುತ್ತಾ ಇದೆ ಎನ್ನುವುದನ್ನು ಕಂಡುಕೊಂಡಿದ್ದೇವೆ. ಇನ್ನಷ್ಟು ಡಿಸೈನ್ ಕ್ವಾಲಿಟಿ ಇಂಪ್ರೂವ್ ಆಗುವ ಸಲುವಾಗಿ ಹೆಚ್ಚು ಹೆಚ್ಚು ಜನರಿಗೆ ಟ್ರೈನಿಂಗ್ ಕೊಟ್ಟರೆ ಹೆಚ್ಚು ಉಪಯೋಗವಾದೀತು ಎಂದು ನಾನಾದರೂ ಹೇಳಬಯಸುತ್ತೇನೆ, ಸ್ವಾಮಿ. ಮೈಸೂರು ರಾಜ್ಯದಲ್ಲಿ ಕಲೆಕ್ಟೀವ್ ವೀವಿಂಗ್ ಸೆಂಟರ್ಸ್ ೨ ಕಡೆ ಫಂಕ್ಷನ್ ಮಾಡುತ್ತಾ ಇವೆ. ಎಂದರೆ, ಮೇಲುಕೋಟೆ, ಆನೆಕಲ್, ಮತ್ತು ಬನಹಟ್ಟಿಯಲ್ಲಿ. ಈಗ ಮೇಲುಕೋಟೆ ಮತ್ತು ಆನೆಕಲ್‌ನಲ್ಲಿರುವ ಕಲೆಕ್ಟೀವ್ ಸೆಂಟರ್ಸ್ ೨ ಮಾತ್ರ ಫಂಕ್ಷನ್ ಮಾಡುತ್ತಾ ಇವೆ. ಬನಹಟ್ಟಿಯಲ್ಲಿರುವುದು ಫಂಕ್ಷನ್ ಮಾಡುತ್ತಾ ಇಲ್ಲ. ಅದು ಫಂಕ್ಷನ್ ಮಾಡದೇ ಇರುವುದಕ್ಕೆ ಕಾರಣ ಏನು ? ಅಲ್ಲಿ ನೇಮಿಸಿದಂಥ ಅಧಿಕಾರಿಗಳು ದಕ್ಷತೆಯಿಂದ ಕೆಲಸಮಾಡಿಲ್ಲವೇ ? ಮತ್ತೆ ಯಾವ ಕಾರಣದಿಂದ ಅದು ಫಂಕ್ಷನ್ ಮಾಡುತ್ತಾ ಇಲ್ಲ ಎನ್ನುವುದನ್ನು ದಯಮಾಡಿ ತಿಳಿಸಬೇಕು. ರಾಮದುರ್ಗ ತಾಲ್ಲೂಕಿನಲ್ಲಿ ಇಂಥ ಒಂದು ಸೆಂಟರನ್ನು ಕೊಡಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ದೇಶದಲ್ಲಿ ಡೈಯಿಂಗ್ ಹೌಸಸ್ ಕೊಡುತ್ತಾ ಇದ್ದೀರಿ ರಾಮದುರ್ಗ ತಾಲ್ಲೂಕಿನಲ್ಲಿ ಮುನೆಹಾಳು ಸೊಸೈಟಿಗೆ ಕೊಟ್ಟಿದ್ದೀರಿ. ೨ ವರ್ಷವಾದರೂ ಕೂಡ ಡೈಯಿಂಗ್ ಹೌಸ್ ಮಾಡಲಿಕ್ಕೆ ಬಂದಿಲ್ಲ. ಅದಕ್ಕೆ ಕಾರಣ ತಮ್ಮಿಂದ ಹಣ ಹಾಕದೇ ಇರಬಹುದು, ಅಲ್ಲಿ ಇರತಕ್ಕ ಸೂಪರ್‌ವಿಷನ್ ಮಾಡತಕ್ಕ ಅಧಿಕಾರಿಗಳು ಆಸ್ಥೆ ವಹಿಸದೇ ಇರಬಹುದು ಅಥವಾ ಸಂಘದವರು ನಿಷ್ಕ್ರಿಯರಾಗಿರಬಹುದು, ಯಾವ ಕಾರಣಕ್ಕೆ ಅದು ಕಾರ್ಯರೂಪಕ್ಕೆ ಬಂದಿಲ್ಲ ಎನ್ನುವುದನ್ನು ದಯವಿಟ್ಟು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಏನೆಲ್ಲಾ

ಸೌಲಭ್ಯಗಳು ಸ್ಟೇಟ್ ಲೆವೆಲ್‌ನಲ್ಲಿ ಸಿಗುತ್ತದೆ, ಅವೆಲ್ಲವೂ ಕೂಡ ಪ್ರಭಾವೀ ಜನರ ಕೈಯಲ್ಲಿ ಸಿಗುವುದು ಕಂಡುಬರುತ್ತದೆ. ಹೌಸಿಂಗ್ ಕಾಲೋನಿ, ಡೈಯಿಂಗ್ ಹೌಸ್, ಕ್ಯಾಲೆಂಡರ್ ಪ್ಲಾಂಟ್ ಅಲ್ಲಿನ ಪ್ರತಿನಿಧಿಗಳು, ಅವರ ಸಂಘಕ್ಕೆ ದೊರಕುತ್ತದೆ. ನನ್ನ ಸಹೋದ್ಯೋಗಿಗಳು ಆಗಿದ್ದಾರೆ, ಸಿಸ್ಟರ್ ಸೊಸೈಟಿ ನಮ್ಮ ತಾಲ್ಲೂಕಿನಲ್ಲಿ ಇದೆ ಆದಕ್ಕಿಂತ ನಿಕೃಷ್ಟ ಪರಿಸ್ಥಿತಿಯಲ್ಲಿರತಕ್ಕ ಸಂಘ ಸಂಸ್ಥೆಗಳನ್ನು ಎತ್ತುವ ಸಲುವಾಗಿ, ಸೊಸೈಟಿಯಲ್ಲಿರುವವರು ಹ್ಯಾಂಡ್‌ಲೂಂ ಬೋರ್ಡ್‌ನಲ್ಲಿದ್ದಂತಹವರು ರಾಜ್ಯಮಟ್ಟದ ಸಂಸ್ಥೆಗಳಲ್ಲಿ ಗಮನಕೊಡದೇ ಕೇವಲ ತಾವು ಇರುವ ಸಂಘಗಳಿಗೆ ಸಹಾಯ ತೆಗೆದ.ಕೊಂಡಿರುವುದರಿಂದ, ಆ ಸಂಘಗಳು ಬೆಳೆದು ಬಂದಿದೆ. ಇನ್ನಿತರ ಸಂಘಗಳು ಯಾವ ಅವಸ್ಥೆಯಲ್ಲಿದ್ದುವೊ ಅವು ಹಾಗೇ ಇವೆ. ರೇಪೆಟಲೈಸೇಷನ್ ಸ್ಕೀಂನಲ್ಲಿ ಡಾರ್ಮೆಂಟ್‌ಸೊಸೈಟಿ ಎಂದು ಹೇಳುತ್ತೀರಿ, ಪ್ರಾಮಾಣಕವಾದಿ ಸೊಸೈಟಿಗಳು ಡಾರ್ಮೆಂಟ್ ಸೊಸೈಟಿಗಳಾಗಿವೆ. ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಏನೆಲ್ಲ ಸೌಲಭ್ಯಗಳನ್ನು ದೊರಕಿಸಿಕೊಂಡು ತಮ್ಮ ಸ್ವಂತ ಉಪಯೋಗಕ್ಕೆ ತೆಗದುಕೊಂಡಿದ್ದಾರೆ. ಸಾಮಾನ್ಯ ಬಡ ನೌಕರರನ್ನು ಶೋಷಣೆಮಾಡುವ ಸಂಘಸಂಸ್ಥೆಗಳು ಬೆಳೆದು ಬಂದಿವೆ. ರಿಬೇಟ್ ಸ್ಕೀಂ ಎಂದು ಮೋಸಮಾಡುತ್ತಿದ್ದಾರೆ ರಿಬೇಟ್ ಸ್ಕೀಂ ಬಳಕೆದಾರರಿಗೆ ಕೊಳ್ಳುವವರಿಗೆ ಆಕರ್ಷಣೆ ಕೊಡುತ್ತಾ ಇದ್ದಂಥ ಸ್ಕೀಂ ಎಂದು ನಾನು ತಿಳಿದುಕೊಂಡಿದ್ದೇನೆ ಹಿಂದೆ ಬರಗಾಲವಿದ್ದಾಗ, ನೂಲಿನ ಕೊರತೆ ಇತ್ತು, ಉತ್ಪಾದನೆ ಕುಂಠಿತವಾಗಿತ್ತು. ಉತ್ಪಾದನೆ ಮಾಡಲಿಕ್ಕೆ ಡಿಮ್ಯಾಂಡ್ ಇರಲಿಲ್ಲ. ಸೊಸೈಟಿಯುವರು ೪೦೦ ರಿಂದ ೮೦೦ ರವರೆಗೆ ರಿಬೇಟ್‌ಮಾಡಿ ಕಳಿಸಿದ್ದು ತಮಗೆ ಗೊತ್ತುಂಟು. ಬೋಗಸ್ ಉತ್ಪಾದನೆ, ಬೋಗಸ್ ಮಾರಾಟ ಆದಾಗ ಇದನ್ನು ಕಂಡು ಹಿಡಿಯುವವರು ಯಾರು ? ಅಲ್ಲಿರುವ ಅಸಿಸ್ಟೆಂಟ್ ಡೈರೆಕ್ಟರ್ ಒಂದಾಗಿ ಬಿಟ್ಟರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಅಪ್ರಮಾಣಕವಾದ ಸಂಘ ಸಂಸ್ಥೆಗಳು ಬೆಳೆದು ಬಂದಿವೆ ಜನತೆಯನ್ನು ಮೋಸ ಮಾಡಬಾರದು. ಪ್ರಾಮಾಣಿಕವಾಗಿ ಲಭ್ಯವಾಗುವುದನ್ನು ಸ್ವೀಕರಿಸಬೇಕು. ಆದುದರಿಂದ ಅವುಗಳ ಕಡೆ ಗಮನಹರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ೧೮೧ ಲಕ್ಷ ರೂಪಾಯಿ ಹ್ಯಾಂಡ್‌ಲೂಂ ಬಟ್ಟೆ ಮಾರಾಟವಾದರೆ ರಿಬೇಟ್ ಹಿಂದಿನವರ್ಷ ೧೦ ಲಕ್ಷ ಮಾರಾಟವಾಯಿತು ಪ್ರಾಮಾಣಿಕವಾದ ಸಂಘ ಸಗಸ್ಥೆಗಳ ಬಗ್ಗೆ ನಾನು ಮಾತನಾಡುತ್ತಿಲ್ಲ. ಅಪ್ರಾಮಾಣಿಕವಾದಂಥ ಸಂಘಸಂಸ್ಥೆಗಳ ಬಗ್ಗೆ ನಾನು ಮಾತನಾಡುವುದು. ಇಲ್ಲಿಯವರೆಗೆ ಸಾಲಗಳನ್ನು ತೆಗೆದುಕೊಂಡಂಥ ಸದಸ್ಯರಾಗಲೀ, ಸಂಘಗಳಾಗಲೀ ಅವೆಲ್ಲವೂ ಕೂಡ ಒಂದಲ್ಲ ಒಂದು ಹಾದಿಯಲ್ಲಿ ರಾಜ್ಯಮಟ್ಟದಲ್ಲಿರತಕ್ಕ ಸಂಘಸಂಸ್ಥೆಗಳ ಸದಸ್ಯರಾಗಿರುವುದರಿಂದ, ಅವರು ಇವುಗಳನ್ನು ಯಶಸ್ವಿಯಾಗಿ ಪಡೆದಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ದಯವಿಟ್ಟು ಇದನ್ನು ಪರಿಶೀಲಿಸಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ. ಮೊದಲೇ ಹೇಳಿದಂತೆ ತಾವು ಒಂದು ದೊಡ್ಡ ಡಿಪಾರ್ಟ್‌ಮೆಂಟಿನ ಖಾತೆಯ ಮಂತ್ರಿಗಳಾಗಿದ್ದೀರಿ. ಇದೇ ಹೌಸ್‌ನಲ್ಲಿ ಒಂದು ಅಶ್ಯೂರೆನ್ಸ್‌ನ್ನು ತಾವು ಹಿಂದಿನ ಸಲ ಕೊಟ್ಟಿದ್ದೀರಿ. ಹ್ಯಾಂಡ್‌ಲೂಂ ಡೈರೆಕ್ಟೋರೇಟ್ ಮಾಡುತ್ತೇವೆ ಎಂದು. ಎರಡು ವರ್ಷ ಆಗುತ್ತಾ ಬಂತು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಐನೇ ಪಂಚವಾರ್ಷಿಕ ಯೋಜನೆ ಹಾಕಿಕೊಂಡಿದ್ದೀರಿ. ಈ ಅವಧಿಯಲ್ಲಿ ಸಪರೇಟ್ ಸಂಸ್ಥೆಯಾಗಿ ಅವರ ಕಷ್ಟ ಸುಖಗಳನ್ನು ನೋಡತಕ್ಕ ಡಿಪಾರ್ಟ್‌ಮೆಂಟ್ ಅಸ್ತಿತ್ವಕ್ಕೆ ಬರಲಿ ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ಒಂದು ದೊಡ್ಡ ಸಮುದ್ರದಂತಿರುವ ಖಾತೆ. ಜಾಯಿಂಟ್ ರಿಜಿಸ್ಟ್ರಾರ್ ಲೇಟ್ ಹೋಗಿ ಅಲ್ಲೇ …ದ್ದಾರೆ- ಅವರು ಎಷ್ಟು ದಿವಸ ಇರುತ್ತಾರೋ, ಹೇಗೆ ಮಾಡುತ್ತಾರೋ ದೇವರೇ ಬಲ್ಲ. ಇತರ ಕೆಲಸ ಹೆಚ್ಚು ಇರುವುದರಿಂದ ಇದರ ಕಡೆ ಗಮನಹರಿಸುವುದಕ್ಕೆ ಅವರಿಗೆ ಆಗುವುದಿಲ್ಲ. ಆದುದರಿಂದ ಇದಕ್ಕೆ ಸಪರೇಟ್ ಡೈರೆಕ್ಟೋರೇಟ್ ಆದಷ್ಟು ತೀವ್ರವಾಗಿ ಮಾಡಿದರೆ ತಮಗೂ ಅನುಕೂಲವಾದೀತು. ದೊಡ್ಡ ದೊಡ್ಡ ಉದ್ದಿಮೆಗಳಿಗೆ ಅಷ್ಟೊಂದು ಶ್ರೇಯಸ್ಸು ಬರುವುದಿಲ್ಲ ಕೊಣಂದೂರು ಲಿಂಗಪ್ಪನವರು ಹೇಳಿದಹಾಗೆ, ಲ್ಯಾಂಡ್ ಹೋಲ್ಡರ್ಸ್, ಲ್ಯಾಂಡ್ ಅಂದರೆ ನೆಲ, ಹೋಲ್ಡರ್ ಅಂದರೆ ಹಿಡಿದವನು. ನೆಲ ಹಿಡಿದಂಥ ಜನಕ್ಕೆ ಒಂದು ಪೈಸೆ ಸಹಾಯ ಮಾಡಿದರೆ, ಅವನು ಎದ್ದು ಓಡಾಡುವಂತೆ ಮಾಡಿದರೆ, ಅವರ ಕಲ್ಯಾಣವಾದೀತು, ತಮ್ಮ ಹೆಸರು ಅಜರಾಮರವಾಗಿ ಉಳಿದೀತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರ ಸಮಭಾಗಿ ಅವರು ಸಮೀಪದರ್ಶಿಯಾಗಿ ನಾನು ಎಲ್ಲವನ್ನೂ ನೋಡಿದ್ದೇನೆ. ಇವರನ್ನು ಯಾವರೀತಿ ಎತ್ತುವುದು ಎನ್ನುವುದು ಕೂಡ ತಿಳಿಯದಂಥ ಸಮಸ್ಯೆ. ನಿಮ್ಮ ಡಿಪಾರ್ಟ್‌ಮೆಂಟ್ ಮೂಲಕ ಪ್ರಾಮಾಣಿಕರಾದ ಅಧಿಕಾರಿಗಳನ್ನು ಚುನಾಯಿಸಿ ಅವರನ್ನು ಮೇಲೆತ್ತುವಂಥ ಕಾರ್ಯವನ್ನು ಮಾಡುತ್ತೀರಿ ಎಂದು ಆಸೆಮಾಡುತ್ತೇನೆ. ಇದನ್ನು ಊಹಿಸಿ, ಕೆಳವರ್ಗದವರಿಗೆ ಏನೇನು ಬೇಕು, ಯಾವ ಯಾವ ಕೆಲಸಗಳನ್ನು ಮಾಡಿದರೆ ಅವರಿಗೆ ಒಳ್ಳೆಯದಾಗುತ್ತದೆಂದು ನಿಮಗೆ ಅನ್ನಿಸುತ್ತದೋ ಆ ಎಲ್ಲಾ ಕಾರ್ಯಗಳನ್ನು ಅವರಿಗೆ ಮಾಡಿಕೊಟ್ಟು ಮುಂದಿನ ವರ್ಷದ ಬೇಡಿಕೆ ಮೇಲೆ ನಾನು ಮಾತನಾಡುವಾಗ, ನಿಮಗೆ ಬರೀ ಧನ್ಯವಾದವನ್ನು ಅರ್ಪಿಸಿ, ನನ್ನ ಭಾಷಣ ಮುಗಿಸುವಂತಾಗಲಿ ನಮ್ಮ ಜನರ ಹತ್ತಿರ ಹೋಗಿ, ನಮ್ಮ ಮಾನ್ಯ ಕೃಷ್ಣ ಅವರು ಇದ್ದಾರೆ, ನಿಮ್ಮ ಕಷ್ಟ ಇಂದಿಗೆ ತೀರಿತು ಎಂದು ಹೇಳುವ ಹಾಗೆ ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಕೆ. ಎಂ. ನಾಗಣ್ಣ ;— (ಚಿಕ್ಕಪೇಟೆ) ; ಸ್ವಾಮಿ, ಅಧ್ಯಕ್ಷರೇ, ನಾನು ಸಿರಿಕಲ್ಚರ್ ಬಗ್ಗೆ ಮಾತನಾಡಬೇಕೆಂದು ಇದ್ದೆ, ಸಂಬಂಧಪಟ್ಟ ಮಂತ್ರಿಗಳು ಇದುವರೆಗೆ ಇಲ್ಲೇ ಕುಳಿತಿದ್ದವರು, ಈಗ ಇಲ್ಲಿ ಇಲ್ಲದೇ ಇರುವುದರಿಂದ, ಅವರು ಇದ್ದಿದ್ದರೆ ಬಹಳ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಆದರೂ ಕೈಗಾರಿಕಾ ಮಂತ್ರಿಗಳು ಇರುವುದರಿಂದ ಅವರು ನಾನು ಕೊಡತಕ್ಕಂಥ ಟೀಕೆಗಳು ಮತ್ತು ಸಲಹೆಗಳನ್ನು ಅವರಿಗೆ ತಿಳಿಸುತ್ತಾರೆ ಎಂದು ಅಂದು-ಕೊಂಡಿದ್ದೇನೆ.

ರೇಷ್ಮೆ ವ್ಯವಸಾಯ ಪ್ರಾಮುಖ್ಯವಾದಂಥ ಒಂದು ಸಣ್ಣ ಕೈಗಾರಿಕೆ, ನಮ್ಮ ಕರ್ನಾಟಕ ಪ್ರದೇಶದಲ್ಲಿ ಶೇಕಡ ೫ ಪರ್ಸೆಂಟ್ ಜನರು ಈ ಉದ್ಯಮದಲ್ಲಿ ತೊಡಗಿದ್ದಾರೆ. ಆ ಜನರು ಈ ಉದ್ಯಮವಲ್ಲದೆ ವ್ಯವಸಾಯವನ್ನು ಅದರ ಜೊತೆಗೆ ಸೇರಿಸಿಕೊಂಡಿದ್ದಾರೆ. ಈ ಎರಡು ಕೆಲಸವನ್ನು ಮಾಡುತ್ತಿದ್ದಾರೆ, ಈ ಬೆಳೆಯನ್ನು ಬೆಳೆಯಲಿಕ್ಕೆ ಪ್ರಾಮುಖ್ಯವಾಗಿ ಬೇಕಾಗಿರತಕ್ಕಂಥದ್ದು ಹಿಪ್ಪುನೇರಳೆ ಸೊಪ್ಪು ಸರಿಯಾಗಿ ಅವರಿಗೆ ಸಾಕಷ್ಟು ನೀರನ್ನು ಭಾವಿಗಳ ಮುಖಾಂತರ ಒದಗಿಸದಿದ್ದರೆ ಹಿಪ್ಪು ನೇರಳೆ ಸೊಪ್ಪು ಕಡಿಮೆಯಾದರೆ ಆವಾಗ ರೇಷ್ಮೆ ಕೂಡ ಕಡಿಮೆಯಾಗುತ್ತದೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಇದು ಅಲ್ಲದೆ ಕೇಂದ್ರ ಸರ್ಕಾರದವರು ಈ ಇಲಾಖೆಗೆ ಸ್ವಲ್ಪ ಹೆಚ್ಚು ಕಡಿಮೆ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ೮೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ತಾವು ಹೇಳಿದಿರಿ. ಇದಕ್ಕಾಗಿ ತಾವು ಖರ್ಚು ಮಾಡಿರುವುದು, ಒಂದು ವರ್ಷದಲ್ಲಿ ೪೮ ಲಕ್ಷ ರೂಪಾಯಿಗಳು, ಇನ್ನೊಂದು ವರ್ಷ ೧೮ ಲಕ್ಷ ರೂ. ಗಳು, ಒಟ್ಟು ೬೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಿಮ್ಮ ಹಣವನ್ನು ಎಲ್ಲಾ ರೈತರಿಗೂ, ಎಲ್ಲಾ ಜನರಿಗೂ ಹಂಚಿಲ್ಲ ತಮಗೆ ಯಾರು ಬೇಕೋ, ತಮ್ಮ ಕೃಪಾಕಟಾಕ್ಷಕ್ಕೆ ಯಾರು ಒಳಗಾಗಿದ್ದಾರೋ ಅಂಥ ರೈತರಿಗೆ ಮಾತ್ರ ಹಣವನ್ನು ಹಂಚಿದ್ದೀರಿ. ಬೇರೆ ರೈತರಿಗೆ ಕಡಿಮೆ ಹಣವನ್ನು ಹಂಚಿದ್ದೀರಿ. ನ್ಯಾಯವಾಗಿ ಹಂಚಿದ್ದರೆ ೨೨ ಕೋಟಿ ರೂಪಾಯಿಗಳನ್ನು ಹಂಚಬೇಕಾಗಿತ್ತು, ಆದರೆ ೬೬ ಲಕ್ಷ ರೂಪಾಯಿಗಳನ್ನು ಮಾತ್ರ ಹಂಚಿದ್ದೀರಿ. ಇದಕ್ಕೆ ಏನು ಕಾರಣ ಎಂಬುದನ್ನು ಹೇಳಬೇಕು. ಅದರ ಪರಿಣಾಮವಾಗಿ ೧೯೭೩ನೇ ಡಿಸೆಂಬರ್, ೧೯೭೪ನೇ ಜನವರಿ ತಿಂಗಳಿನಲ್ಲಿ ನಿಮ್ಮ ಬಡ್ಜೆಟ್‌ನಲ್ಲಿ ಹಣವಿಲ್ಲದ ಪ್ರಯುಕ್ತ ನಿಮ್ಮ ಸಂಸ್ಥೆಯವರು ಮೊಟ್ಟೆ ಉತ್ಪಾದನೆ ಮಾಡಲಿಕ್ಕೆ ಆಗಲಿಲ್ಲ ಎರಡು ತಿಂಗಳು ಸುಮ್ಮನೇ ಕುಳಿತುಕೊಂಡರು. ಮೊಟ್ಟೆ ಉತ್ಪಾದನೆ ಆಗದೇ ಇದ್ದುದರಿಂದ, ಹಿಪ್ಪುನೇರಳೆ ಸೊಪ್ಪು ಖರ್ಚಾಗುವುದಕ್ಕೆ ಅವಕಾಶವಾಗಲಿಲ್ಲ. ಈ ಕಾರಣದಿಂದಾಗಿ ರೇಷ್ಮೆ ತಯಾರಿಕೆ ಕಡಿಮೆಯಾಯಿತು. ಇನ್ನು ಕೆಲವು ರೈತರು ಹೆಚ್ಚು ಬೆಲೆಯನ್ನು ತೆತ್ತು ಲೈಸನ್ಸ್ ಪಡೆದವರಿಂದ ಮೊಟ್ಟೆಯನ್ನು ಪಡೆದು ರೇಷ್ಮೆಯನ್ನು ತಯಾರಿಸಿದ್ದರಿಂದ ಹೆಚ್ಚು ಬೆಲೆ ಆಗುವುದಕ್ಕೆ ಕಾರಣವಾಯಿತು. ಹಾಗೆ ಕೆಲವರು ಬೆಳೆದಂಥ ಸೊಪ್ಪು ಖರ್ಚಾಗದೆ ಉಳಿದಿದ್ದ ಪ್ರಯುಕ್ತ ಬಹಳ ಮಟ್ಟಿಗೆ ನುಕ್ಸಾನು ಆಯಿತೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಸೊಪ್ಪು ಚೆನ್ನಾಗಿ ಬೆಳೆದರೆ ರೇಷ್ಮೆ ತಯಾರು ಮಾಡಲಿಕ್ಕೆ ಅನುಕೂಲವಾಗುತ್ತದೆ. ಸೊಪ್ಪು ಕೊರತೆ ಇದ್ದ ಪ್ರಯುಕ್ತ ಗೂಡು ಬೆಲೆ ಜಾಸ್ತಿಯಾಯಿತು. ಒಂದು ಸಾವಿರ ಗೂಡಿಗೆ ೧೨ ರಿಂದ ೧೫ ರೂಪಾಯಿ ಇದ್ದಂಥ ಗೂಡಿನ ಬೆಲೆಗೆ ೪೦ ರೂಪಾಯಿಗಳನ್ನು ಕೊಡಬೇಕಾಗಿ ಬಂತು. ಸರ್ಕಾರದವರು ಈ ಒಂದು ಕೃತಕ ಅಭಾವವನ್ನುಂಟು ಮಾಡಿದ್ದರಿಂದ ರೇಷ್ಮೆ ಬೆಲೆ ಜಾಸ್ತಿಯಾಗುವುದಕ್ಕೆ ಕಾರಣವಾಯಿತು.

ಇನ್ನು ರೇಷ್ಮೆ ಬೆಳೆ ಉತ್ಪನ್ನ ಜಾಸ್ತಿ ಮಾಡಬೇಕು, ಸೊಪ್ಪನ್ನು ಜಾಸ್ತಿ ಬೆಳೆಯಬೇಕಾದರೆ ಸರ್ಕಾರದವರು ಏನು ಕ್ರಮವನ್ನು ಕೈಗೊಳ್ಳಬೇಕು ಎನ್ನುವುದಕ್ಕೆ ಕೆಲವು ಸಲಹೆಗಳನ್ನು ಹೇಳುತ್ತೇನೆ.

ಹಳೆಯ ತೋಟಗಳನ್ನು ನವೀಕರಿಸಿ, ಹೆಚ್ಚು ಸುಧಾರಣೆ ಮಾಡಿ, ಹೆಚ್ಚು ನೀರನ್ನು ಜಮೀನುಗಳಿಗೆ ಉಪಯೋಗಿಸಿಕೊಳ್ಳುವ ಹಾಗೆ ಮಾಡಬೇಕು, ಹೆಚ್ಚು ಹೆಚ್ಚು ಭಾವಿಗಳನ್ನು ತೋಡಬೇಕು. ಹುಳು ಸಾಕಲಿಕ್ಕೆ ಯೋಗ್ಯವಾದ ಮನೆಗಳನ್ನು ನಿರ್ಮಿಸಬೇಕು ಮೊಟ್ಟೆ ಉತ್ಪಾದನೆಗೆ ಗ್ರೈನೇಟನ್ನು ಜಾಸ್ತಿ ಮಾಡಬೇಕು. ರೈತರಿಗೆ ಅಗತ್ಯವಾದ ಸಲಕರಣೆಗಳನ್ನು ಕೊಡುವುದಕ್ಕೆ ಪ್ರಯತ್ನಿಸಬೇಕು. ಇದರ ಜೊತೆಗೆ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್‌ನ್ನು ಸ್ಥಾಪನೆ ಮಾಡಬೇಕು, ಇದಕ್ಕೆ ಕನಿಷ್ಟ ಪಕ್ಷ ೨ ಕೋಟಿ ರೂ. ಗಳಷ್ಟು ಬಂಡವಾಳವನ್ನು ಹಾಕಿ ಸ್ಥಾಪನೆ ಮಾಡಬೇಕು, ಅದರಿಂದ ಏನು ಆಗುತ್ತದೆ ಎಂದು ಹೇಳಿದರೆ, ತಯಾರಾದ ರೇಷ್ಮೆ ಮಾರ್ಕೆಟಿಂಗ್ ಸೊಸೈಟಿ ಇದ್ದರೆ ಯಾವಾಗ ಮಾರಬೇಕು, ಯಾವಾಗ ಮಾರಿದರೆ ಅನುಕೂಲ ವಾಗುತ್ತದೆ ಎಂಬುದು ತಿಳಿಯುತ್ತದೆ ಇದರಿಂದ ರೇಷ್ಮೆ ತಯಾರು ಮಾಡುವವರಿಗೂ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗೆ ರೇಷ್ಮೆ ಉತ್ಪನ್ನವನ್ನು ಜಾಸ್ತಿ ಮಾಡಿದ ಪಕ್ಷದಲ್ಲಿ ಸಿಲ್ಕನ್ನು ನಮ್ಮ ಪ್ರದೇಶದಲ್ಲಿರತಕ್ಕ ನೇಕಾರರಿಗೆ ಕೊಟ್ಟು ಹೊರದೇಶಗಳಿಗೂ ಸಹ ಕಳುಹಿಸುವುದಕ್ಕೆ ಅನುಕೂಲವಾಗುತ್ತದೆ. ಹಾಗೂ ರೈತರಿಗೆ ಕೇಂದ್ರ ಸರ್ಕಾರದವರ ರಾಷ್ಟ್ರೀಕೃತ ಬ್ಯಾಂಕ್‌ಗಳ ಮುಖಾಂತರ ಹಣವನ್ನು ಕೊಡಿಸಿಕೊಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ನವರು ಹಾಕಬಹುದಾದಂಥ ಬಡ್ಡಿ ೩ ಪರ್ಸೆಂಟ್ ಬಡ್ಡಿಯಾದರೆ ಅದರಲ್ಲಿ ಒಂದೂವರ ಪರ್ಸೆಂಟನ್ನು ಕೇಂದ್ರ ಸರ್ಕಾರದವರು, ಇನ್ನೊಂದೂವರೆ ಪರ್ಸೆಂಟನ್ನು ನೀವು ಕೊಡಬೇಕಾಗುತ್ತದೆಂದು ನಾನಾದರೂ ಅಂದುಕೊಂಡಿದ್ದೇನೆ.

ಇನ್ನು ರೋಗರಹಿತ ಬಿತ್ತನೆ ಬೀಜಗಳ ವ್ಯವಹಾರಕ್ಕೆ ಅನುಭವ ಇರತಕ್ಕಂಥ ಅಧಿಕಾರಿಗಳು ಇರಬೇಕು. ಆದಕ್ಕಾಗಿ ನೀವು ಒಂದು ಸೀಡ್ಸ್ ಕಾರ್ಪೊರೇಷನ್ ಮಾಡಬೇಕು ಎಂದು ನಾನಾದರೂ ಸಲಹೆ ಮಾಡುತ್ತೇನೆ.

ಇನ್ನು ರೇಷ್ಮೆ ಬೆಲೆ ಹೇಗೆ ಜಾಸ್ತಿ ಆಯಿತು, ಏತಕ್ಕೆ ಜಾಸ್ತಿ ಆಯಿತು ಎನ್ನುವ ಬಗ್ಗೆ ವಿವರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹೋದವರ್ಷ ಆಗಸ್ಟ್‌ನಲ್ಲಿ ಬೆನಾರಸ್‌ನ ಒಂದು ಸೊಸೈಟಿಯವರು ಬಂದು ೫೫ ಸಾವಿರ ಕೆ. ಜಿ. ರೇಷ್ಮೆಯನ್ನು ಖರೀದಿ ಮಾಡಿ ತೆಗೆದುಕೊಂಡು ಹೋದರು. ಮತ್ತೆ ಅದರಲ್ಲಿ ಕೆಲವು ಭಾಗವನ್ನು ಅದು ಸರಿಯಾಗಿಲ್ಲ ಎಂದು ವಾಪಸ್ಸು ಕಳುಹಿಸಿದರು. ಆವಾಗ ಅಂದರೆ ಸೆಪ್ಟಂಬರ್ ತಿಂಗಳಿನಲ್ಲಿ ಸ್ವಲ್ಪ ಧಾರಣೆ ಕಡಿಮೆ ಆಯಿತು. ಈ ಬಗ್ಗೆ ಸ್ವಲ್ಪ ಅಂಕಿ ಅಂಶ ಹೇಳುತ್ತೇನೆ. ತಾರೀಖು ೧೬-೮-೧೯೭೩ ರಲ್ಲಿ ನಾವು ತಯಾರ್ಮಾಡತಕ್ಕಂಥ ರೇಷ್ಮೆಗೆ ಒಂದು ಕೆ. ಜಿ. ಗೆ ೨೬೫ ರೂಪಾಯಿ ಇತ್ತು, ೧೮-೮-೧೯೭೩ ರಲ್ಲಿ ಅದು ಮತ್ತೆ ೧೦ ರೂಪಾಯಿ ಜಾಸ್ತಿ ಆಯಿತು, ಮತ್ತೆ ೫ ದಿವಸದೊಳಗೆ ಪುನಃ ೫ ರೂಪಾಯಿ ಜಾಸ್ತಿ ಆಯಿತು, ಆಮೇಲೆ ೨೭-೮-೧೯೭೩ ರಲ್ಲಿ ಏಕ್‌ದಮ್ ೨೫ ರೂಪಾಯಿ ಜಾಸ್ತಿ ಆಯಿತು. ಅಲ್ಲಿಗೆ ಒಟ್ಟು ಒಂದು ಕೆ. ಜಿ. ಗೆ ೩೦೫ ರೂಪಾಯಿ ನಿಗದಿಮಾಡಿದರು. ಬೆನಾರಸ್‌ನವರು ರೇಷ್ಮೆ ತೆಗೆದುಕೊಂಡು ಹೋಗಿ ಕೆಲವು ಭಾಗ ರೇಷ್ಮೆಯನ್ನು ವಾಪಸ್ಸು ಕಳುಹಿಸಿದಾಗ ಆ ಸಂದರ್ಭದಲ್ಲಿ ಒಂದು ಕೆ. ಜಿ. ಗೆ ೬೦-೭೦ ರೂಪಾಯಿ ಕಡಿಮೆಯಾಯಿತು. ಆ ಸಂದರ್ಭದಲ್ಲಿ ಬಹು ವರ್ತಕರು ಮುಖ್ಯಮಂತ್ರಿಗಳ ಹತ್ತಿರ ಬಂದು ರೇಷ್ಮೆ ಬೆಲೆ ಕಡಿಮೆಯಾಗಿ ಹೋಯಿತು ಇದರಿಂದ ರೈತರು ಕೆಟ್ಟು ಹೋಗುತ್ತಾರೆ ಎಂದು ಅವರಲ್ಲಿ ಕೇಳಿಕೊಂಡಾಗ ಆವಾಗ ಮುಖ್ಯಮಂತ್ರಿಗಳು ಒಂದು ಪತ್ರಿಕಾ ಹೇಳಿಕೆ ಕೊಟ್ಟರು. ನಿಮ್ಮ ರೇಷ್ಮೆ ಸೊಸೈಟಿಗೆ ಎಷ್ಟು ಕೋಟಿ ರೂಪಾಯಿ ಬೇಕಾದರೂ ಕೊಡುತ್ತೇವೆ, ರೇಷ್ಮೆ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಬಿಡುವುದಿಲ್ಲ ಎಂದೂ. ಹಾಗೆ ಅವರು ಹೇಳಿಕೆ ಕೊಟ್ಟ ತಕ್ಷಣ ಏನಾಯಿತು ಎಂದರೆ ತಕ್ಷಣ ಅದರ ಬೆಲೆ ಯಾವ ರೀತಿ ಏರಿತು ಎಂದರೆ ೧೫-೧೨-೧೯೭೩ ರಲ್ಲಿ ೧೫ ರೂಪಾಯಿ ಜಾಸ್ತಿ ಆಯಿತು, ೫-೧-೧೯೭೪ ರಲ್ಲಿ ೧೦ ರೂಪಾಯಿ ಜಾಸ್ತಿ ಆಯಿತು, ೨೧-೧-೧೯೭೪ ರಲ್ಲಿ ೩ ರೂಪಾಯಿ ಜಾಸ್ತಿ ಆಯಿತು, ೧೬-೨-೧೯೭೪ ರಲ್ಲಿ ೫ ರೂಪಾಯಿ ಜಾಸ್ತಿ ಆಯಿತು, ೧೦-೪-೧೯೭೪ ರಲ್ಲಿ ೧೦ ರೂಪಾಯಿ ಜಾಸ್ತಿ ಆಯಿತು, ೨೫-೪-೧೯೭೪ ರಲ್ಲಿ ೧೨ ರೂಪಾಯಿ ಜಾಸ್ತಿ ಆಯಿತು. ಮೊದಲು ಈ ರೇಷ್ಮೆಗೆ ೩೦೫ ರೂಪಾಯಿ ಇದ್ದ ಬೆಲೆ ಇವೊತ್ತಿನ ದಿವಸ ಈ ರೀತಿಯಾಗಿ ಏರಿ ಇಂದು ೩೬೫ ರೂಪಾಯಿಗೆ ಬಂದು ಕೂತುಕೊಂಡಿದೆ. ಈಗಿನ ಬೆಲೆಗೂ ಒಂದು ವರ್ಷದಲ್ಲಿ ಇದ್ದ ಬೆಲೆಗೂ ಇಷ್ಟು ಬೆಲೆ ಏರಿದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ರೇಷ್ಮೆ ಬೆಲೆ ಕಡಿಮೆಯಾದರೆ ನೇಕಾರರಿಗೆ ಅನುಕೂಲವಾಗುತ್ತದೆ ಅನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಒಂದು ವೇಳೆ ರೇಷ್ಮೆ ಬೆಲೆ ಜಾಸ್ತಿ ಆದರೆ ರೇಷ್ಮೆಯಲ್ಲಿ ತಯಾರಾದಂಥ ಬಟ್ಟೆಗೂ ಜಾಸ್ತಿಬೆಲೆ ಆಗಬೇಕು. ಆದರೆ ಅದು ಜಾಸ್ತಿ ಆಗುತ್ತಾ ಇಲ್ಲ. ಈಗ ನಮ್ಮ ಸರ್ಕಾರದ ಧೋರಣೆ ಏನು ಎಂದರೆ ರೇಷ್ಮೆ ಬಿತನೆಯನ್ನು ಸಾಧ್ಯವಾದಷ್ಟಿಗೆ ಹೊರಗೆ ಕಳುಹಿಸಬೇಕು ಎಂದು ಹೇಳುತ್ತಿದ್ದೀರಿ ಏತಕ್ಕೆಂದರೆ ಅದರಿಂದ ೧೫ ಕೋಟಿ ರೂಪಾಯಿಯಷ್ಟು ಫಾರಿನ್ ಎಕ್ಸ್‌ಛೇಂಜ್ ಅರ್ನ್ ಮಾಡಬಹುದು ಎಂದು. ಆದಕ್ಕೆ ನಾನು ಹೇಳುವುದು ನೀವು ೧೫ ಕೋಟಿ ರೂಪಾಯಿಯಷ್ಟು ರೇಷ್ಮೆ ಬಿತ್ತನೆಯನ್ನು ಹೊರಗಿನ ದೇಶಕ್ಕೆ ಕಳುಹಿಸುವ ಬದಲು ಅದರಿಂದಲೇ ತಯಾರಾದಂಥ ಬಟ್ಟೆಯನ್ನು ಹೊರದೇಶಕ್ಕೆ ಕಳುಹಿಸಿದರೆ ೫೦ ಕೋಟಿ ರೂಪಾಯಿ ಫಾರಿನ್ ಎಕ್ಸ್‌ಛೇಂಜ್ ಬರುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ಹೇಳುವುದಾದರೆ ಮುಖ್ಯವಾಗಿ ಪ್ರಪಂಚದಲ್ಲಿ ಬೇಕಾಗಿರತಕ್ಕಂಥಾದ್ದು ಆಹಾರ ಮತ್ತು ಬಟ್ಟೆ. ನಮ್ಮ ದೇಶದಲ್ಲಿ ಆಹಾರ ಎಷ್ಟು ಮುಖ್ಯವೋ ಅದೇ ರೀತಿ ಬಟ್ಟೆಯೂ ಮುಖ್ಯ. ಈಗ ಪಾಶ್ಚಿಮಾತ್ಯ ದೇಶದಲ್ಲಿ ಒಂದು ಹೊಸ ಫ್ಯಾಷನ್ ಆಗಿಹೋಗಿಬಿಟ್ಟಿದೆ. ಅದು ಯಾವುದೆಂದರೆ ಪಾಶ್ಚಿಮಾತ್ಯ ಜನಗಳಲ್ಲಿರುವ ಹೆಂಗಸರು ಮೊಣಕಾಲಿನವರೆಗೆ ಲಂಗ ಉಡುವುದನ್ನು ಬಿಟ್ಟು ಸೀರೆ ಉಡುವ ಅಭ್ಯಾಸವಾಗಿಬಿಟ್ಟಿದೆ. ಅದಕ್ಕೋಸ್ಕರ ನಾನು ಹೇಳುವುದು ಅನೇಕ ತರಹವಾದ ಅನೇಕ ನಮೂನೆಯ ಬಟ್ಟೆಗಳನ್ನು ಭಾರತ ದೇಶದಲ್ಲಿರುವ ಅದರಲ್ಲೂ ನಮ್ಮ ಮೈಸೂರು ದೇಶದ ರೇಷ್ಮೆಯಿಂದ ತಯಾರು ಮಾಡಿದ ರೇಷ್ಮೆ ಬಟ್ಟೆಯನ್ನು ಪಾಶ್ಚಿಮಾತ್ಯ ದೇಶಗಳಿಗೆ ರಫ್ತು ಮಾಡಿದರೆ ಈಗ ನೀವು ಇದರಿಂದ ಎಷ್ಟು ಫಾರಿನ್ ಎಕ್ಸ್‌ಛೇಂಜ್ ಗಳಿಸುತ್ತೀರೋ ಅದರ ನಾಲ್ಕರಷ್ಟು ಫಾರಿನ್ ಎಕ್ಸ್‌ಛೇಂಜ್ ಬರುತ್ತದೆ ಎಂದು ಹೇಳುತ್ತೇನೆ. ಅದರ ಜೊತೆಗೆ ಈ ರೇಷ್ಮೆ ಕಸಬನ್ನು ನಂಬಿಕೊಂಡಿರತಕ್ಕಂಥ ವಿದ್ಯುತ್ ಮಗ್ಗದವರಿಗೆ ಮತ್ತು ಕೈಮಗ್ಗದವರಿಗೆ ಬಹಳ ಅನುಕೂಲವಾಗುತ್ತದೆ. ನೂಲಿನಲ್ಲಿ ಕೆಲಸ ಮಾಡಿದವರನ್ನು ಬಿಟ್ಟು ಈ ಕಸುಬನ್ನೇ ಮಾಡತಕ್ಕಂಥಾವರು ೫ ಲಕ್ಷ ಜನ ಇರಬಹುದು. ಅವರಿಗೆಲ್ಲಾ ಈ ಉದ್ಯೋಗದಿಂದ ಒಂದು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಈಗ ಬೆಂಗಳೂರು ನಗರ ತೆಗೆದುಕೊಂಡರೆ ರೇಷ್ಮೆ ಬೆಲೆ ಜಾಸ್ತಿಯಾಗಿರುವುದರಿಂದ ಅನೇಕರು ಮಗ್ಗಗಳಲ್ಲಿ ನೇಯುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಏತಕ್ಕೆಂದರೆ ಅವರು ರೇಷ್ಮೆಯನ್ನು ಕೊಳ್ಳತಕ್ಕಂಥಾ ಬೆಲೆಗೂ ಮತ್ತು ಅವರು ತಯಾರು ಮಾಡತಕ್ಕಂಥ ಮಾಲಿನ ಬೆಲೆಗೂ ಅಂತರ ಇರುವುದರಿಂದ. ಅವರಿಗೂ ಕೂಲಿಯೂ ಕೂಡ ಗಿಟ್ಟುವ ಪರಿಸ್ಥಿತಿ ಇಲ್ಲದೇ ಇರುವುದರಿಂದ

(ಶ್ರೀ ಕೆ. ಎಂ. ನಾಗಣ್ಣ)

ಅನೇಕರು ಮಗ್ಗಗಳಲ್ಲಿ ನೇಯುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಇಂಥಾ ಸಂದರ್ಭದಲ್ಲಿ ಅವರ ನೆರವಿಗೆ ಸರ್ಕಾರದವರು ಹೋಗಬೇಕಾಗಿತ್ತು. ರೇಷ್ಮೆ ಬೆಲೆ ಕುಂಠಿತವಾದಾಗ ಮುಖ್ಯಮಂತ್ರಿಗಳು ಯಾವರೀತಿಯಾಗಿ ಒಂದು ಹೇಳಿಕೆ ಕೊಟ್ಟು ಆ ವರ್ತಕರಿಗೆ ಸಹಾಯ ಮಾಡಿದರೋ ಅದೇ ರೀತಿಯಾಗಿ ಕೈಮಗ್ಗದವರಿಗೆ ಮತ್ತು ವಿದ್ಯುತ್‌ಚಾಲಿತ ಮಗ್ಗದವರಿಗೆ ಏಕೆ ಸಹಾಯ ಮಾಡಲಿಲ್ಲ. ಅವರ ಸ್ಥಿತಿ ಮನಗಂಡರೂ ಸಹ ಸರ್ಕಾರ ಅವರ ಕಡೆ ಗಮನ ಹರಿಸದೇ ಇರುವುದು ಶೋಚನೀಯ. ನಾನು ಅದಕ್ಕಾಗಿ ವ್ಯಥೆ ಪಡುತ್ತಿದ್ದೇನೆ. ಅದೂ ಅಲ್ಲದೆ ತಾವು ಹಳ್ಳಿಗಳಿಂದ ಮತ್ತು ತಾಲ್ಲೂಕುಗಳಿಂದ ಬಂದವರಾಗಿರುವುದರಿಂದ ನಿಮಗೆ ಅಲ್ಲಿಯ ರೈತರ ಕಷ್ಟ ಕಾಣುತ್ತದೆಯೇ ಹೊರತು ನಗರವಾಸಿಗಳ ಕಷ್ಟ ನಿಮಗೆ ಕಾಣುತ್ತಾ ಇಲ್ಲ. ಹೆಚ್ಚು ತೆರಿಗೆಗಳನ್ನು ಕೊಡುವವರು ನಗರವಾಸಿಗಳು, ಅವರ ಕಡೆ ನಿಮ್ಮ ದೃಷ್ಟಿ ಕಾಣಿಸುತ್ತಾ ಇಲ್ಲ ಬೆಂಗಳೂರು ರಸ್ತೆಯಲ್ಲಿ ಮಂತ್ರಿಗಳು ಓಡಾಡಿದ್ದು ನಾನು ಎಂದೂ ನೋಡಿಲ್ಲ. ನೀವು ಹಳ್ಳಿಗಳ ಕಡೆಯಿಂದ ಬಂದಿರುವ ಹೊತ್ತಿಗೆ ನಿಮ್ಮ ಊರಿಗೆ ಹೋಗುತ್ತಿರುತ್ತೀರಿ. ಆದುದರಿಂದ ಆ ರೈತರ ಕಷ್ಟಸುಖಗಳನ್ನು ಕೇಳಿಕೊಳ್ಳುತ್ತೀರಿ ಅವನ್ನು ನಾನು ಬೇಡಿ ಎನ್ನುವುದಿಲ್ಲ, ಅವರಿಗೂ ಕೂಡ ಅನುಕೂಲತೆಗಳನ್ನು ಒದಗಿಸಿ ಕೊಡಬೇಕಾದ್ದು ನಿಮ್ಮ ಕರ್ತವ್ಯ. ಆದರೆ ಅದೇ ರೀತಿ ಬೆಂಗಳೂರು ನಗರಕ್ಕೆ ಮತ್ತು ಇತರ ಮುಖ್ಯ ಕೇಂದ್ರಗಳಿಗೂ ಸಹ ಅನುಕೂಲತೆಯನ್ನು ಒದಗಿಸಿ ಕೊಡಬೇಕಾದ್ದು ನಿಮ್ಮ ಕರ್ತವ್ಯ. ಹಳ್ಳಿಗಾಡುಗಳಿಂದ ಎಷ್ಟು ತೆರಿಗೆ ಬರುತ್ತದೆ ನಗರವಾಸಿಗಳಿಂದ ಎಷ್ಟು ತೆರಿಗೆ ಬರುತ್ತದೆ ಅದನ್ನು ಯೋಚನೆ ಮಾಡಿದರೆ ಗೊತ್ತಾಗುತ್ತದೆ. ಆದುದರಿಂದ ನೀವು ನಗರವಾಸಿಗಳ ಕಡೆ ಮಲತಾಯಿ ಧೋರಣೆ ತೋರಿಸುವುದು ಸರಿಯಲ್ಲ ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳಬೇಕಾಗಿ ಬರುತ್ತದೆ ಅದಕ್ಕೋಸ್ಕರ ತಮ್ಮಲ್ಲಿ ಪ್ರಾರ್ಥನೆ ಮಾಡುವುದು ಏನೆಂದರೆ ನಮ್ಮ ದೇಶದಲ್ಲಿ ತಯಾರಾಗತಕ್ಕಂಥ ರೇಷ್ಮೆಯನ್ನು ಹೊರಗೆ ಕಳುಹಿಸಬೇಡಿ ಎಂದು. ಭಾರತ ದೇಶದಲ್ಲಿ ತಯಾರಾಗತಕ್ಕಂಥ ರೇಷ್ಮೆಯಲ್ಲಿ ಅದರಲ್ಲೂ ನಮ್ಮ ಮೈಸೂರು ದೇಶದಲ್ಲಿ ತಯಾರಾಗತಕ್ಕಂಥ ರೇಷ್ಮೆಯಲ್ಲಿ ಶೇಕಡ ೮೦ ರಷ್ಟು ರೇಷ್ಮೆಯನ್ನು ನಮ್ಮ ದೇಶದ ಜನತೆಗೆ, ನಮ್ಮ ದೇಶದ ಜನಗಳ ಉಪಯೋಗಕ್ಕಾಗಿ ಬಳಸಿ, ಇನ್ನು ೨೦ ರಷ್ಟು ಬಾಕಿ ಉಳಿಯುವ ರೇಷ್ಮೆಯನ್ನು ಟೆಂಡರ್ ಕರೆದು ಬೇರೆಯವರಿಗೆ ಕೊಡಿ. ನಮ್ಮ ದೇಶದಲ್ಲಿ ತಯಾರಾಗತಕ್ಕಂಥ ರೇಷ್ಮೆಯನ್ನು ಪೂರ್ತಾ ಅವರಿಗೆ ಏತಕ್ಕೆ ಕಳುಹಿಸುತ್ತೀರಾ ? ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನೀವು ಹೊರಗಿನ ದೇಶದಲ್ಲಿ ಯಾವರೀತಿ ವ್ಯಾಪಾರ ಮಾಡುತ್ತೀರಾ ಎನ್ನುವುದು ಗೊತ್ತು. ನೀವು ಫಾರಿನ್ ಎಕ್ಸ್‌ಛೇಂಜ್ ಬರುತ್ತದೆ ಅನ್ನುವ ದೃಷ್ಟಿಯಿಂದ ನೀವು ಈ ಕೆಲಸ ಮಾಡುತ್ತಿದ್ದೀರಿ. ಇಲ್ಲಿ ಒಂದು ಕೆ. ಜಿ. ಗೆ ೩೦೦ ರೂಪಾಯಿ ಬೆಲೆ ಇದ್ದರೆ ಹೊರದೇಶದವರಿಗೆ ೧೦೦ ರೂಪಾಯಿಗೆ ಕಳುಹಿಸುತ್ತೀರಿ. ಆದರಿಂದ ಲುಕ್ಸಾನು ಎಷ್ಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ನಿಮಗೆ ಫಾರಿನ್ ಎಕ್ಸ್‌ಛೇಂಜ್ ಬರುತ್ತದೆ ಎನ್ನುವ ಒಂದು ದೃಷ್ಟಿಯಿಂದಲೇ ನಿಮಗೆ ನಷ್ಟವಾದರೂ ಕೂಡ ಅವರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಿ ನೀವು ಈ ರೀತಿ ಮಾಡುವುದು ವ್ಯಾಪಾರಸ್ಥರ ಲಕ್ಷಣವೇ ? ನಿಜವಾಗಿಯೂ ಇಂಥಾ ಕೆಲಸಕ್ಕೆ ಕೈಹಾಕದೇ ಇದ್ದಿದ್ದರೆ ಚೆನ್ನಾಗಿತ್ತು. ಯಾವ ವ್ಯಾಪಾರ ಮಾಡಬೇಕಾದರೂ ಲಾಭ ನೋಡಿಕೊಂಡು ಮಾಡಬೇಕು. ನಿಮಗೆ ಕಾಶ್ಮೀರದ್ದು ಒಂದು ಉದಾಹರಣೆ ಕೊಡುತ್ತೇನೆ. ಕಾಶ್ಮೀರದಲ್ಲಿ ತಯಾರಾದಂಥ ರೇಷ್ಮೆಯನ್ನು ಅಲ್ಲಿಯ ಮಗ್ಗದವರಿಗೆ ೮೦ ರಷ್ಟು ಹಂಚಿ ಉಳಿದ ೨೦ ರಷ್ಟನ್ನು ಟೆಂಡರ್ ಕರೆದು ಹೊರಗಡೆಯವರಿಗೆ ಕೊಡುತ್ತಾರೆ. ಆದುದರಿಂದ ತಾವೂ ಕೂಡ ಅದೇ ರೀತಿಯಾಗಿ ನಮ್ಮ ದೇಶದಲ್ಲಿ ತಯಾರು ಮಾಡಿದಂಥ ರೇಷ್ಮೆಯನ್ನು ೮೦ ರಷ್ಟು ಇಲ್ಲಿಯ ಮಗ್ಗದವರಿಗೆ ಕಾರ್ಡ್ ಮೂಲಕ ಹಂಚಿ. ಹಾಗೆ ಹಂಚಾದ ಮೇಲೆ ಉಳಿದ ರೇಷ್ಮೆಯನ್ನು ಹೊರಗೆ ಕಳುಹಿಸಿ. ಅಥವಾ ಟೆಂಡರ್ ಮುಖಾಂತರವಾದರೂ ಕರೆಯಿರಿ, ಯಾರು ಹೆಚ್ಚು ಟೆಂಡರ್ ಕೊಟ್ಟು ತೆಗೆದುಕೊಳ್ಳುತ್ತಾರೋ ಅವರು ತೆಗೆದುಕೊಳ್ಳಿ. ಆದುದರಿಂದ ತಾವು ಫಾರಿನ್ ಎಕ್ಸ್‌ಛೇಂಜ್ ಬರುತ್ತದೆ ಅನ್ನುವ ದೃಷ್ಟಿಯಿಂದ ಎಲ್ಲ ರೇಷ್ಮೆಯನ್ನೂ ಹೊರಗೆ ಕಳುಹಿಸಬೇಡಿ, ಇಲ್ಲಿ ತಯಾರು ಮಾಡಿದಂಥ ರೇಷ್ಮೆಯನ್ನು ಇಲ್ಲಿಯ ಜನಕ್ಕೇನೆ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ನಮ್ಮ ದೇಶದಲ್ಲಿ ತಯಾರಾಗುವ ೨೦ ಲಕ್ಷ ಕೆ. ಜಿ. ನೂಲಿನಲ್ಲಿ ಕೇವಲ ೧,೬೦೦ ಕೆ. ಜಿ. ಮಾತ್ರ ಹೊರಗಡೆ ದೇಶಕ್ಕೆ ರಫ್ತು ಮಾಡಿದೆ.

ಶ್ರೀ ಕೆ. ಎಂ. ನಾಗಣ್ಣ : ಅದೂ ಅಲ್ಲದೆ ಈ ರೀತಿ ರೇಷ್ಮೆ ಮಾರಾಟ ಮಾಡುವಂಥ ಪದ್ಧತಿ ಯಾವ ವ್ಯಾಪಾರಸ್ಥರೂ ಕೂಡ ಮಾಡುವುದಿಲ್ಲ ಎಂದು ಕಾಣುತ್ತದೆ. ಏತಕ್ಕೆಂದರೆ ಇಲ್ಲಿ ತಯಾರಾದಂಥ ರೇಷ್ಮೆಯನ್ನು ಮಾರಲಿಕ್ಕೆ ನಿಮಗೆ ಅನುಕೂಲತೆ ಇದ್ದರೂ ಕೂಡ ಇದಕ್ಕೆ ಏಜನ್ಸಿ ನೇಮಿಸಿಕೊಂಡಿದೀರಿ. ಇವರು ಯಾರು ಯಾರು ಎಂದರೆ ೪-೫ ಜನ ದೊಡ್ಡ ವರ್ತಕರು ಇದ್ದಾರೆ ನೀವು ರೇಷ್ಮೆಯನ್ನು ಮಾರಲಿ ಮಾರದೇ ಹೋಗಲಿ ಅವರಿಗೆ 1½ ಪರ್ಸೆಂಟ್ ಕಮೀಷನ್ ಕೊಡಬೇಕಾಗುತ್ತದೆ.

ವಿನಾಕಾರಣ ಅವರಿಗೆ ಕಮಿಷನ್ ಅನ್ನು ಕೊಡುತ್ತಿದ್ದಾರೆ. ಅವರು ಯಾರು ಎಂದರೆ ದೊಡ್ಡ ವರ್ತಕರು. ಕಬಾಡೆ ಶಂಕರಸಾ ಎನ್ನುವವರು ಇದ್ದಾರೆ, ಚಿನ್ನಯ್ಯ ಪರಶಿವಮೂರ್ತಿ, ಪಿ. ಕೆ. ಶ್ರೀನಿವಾಸ ಶೆಟ್ಟಿ ಎನ್ನುವವರು ಇದ್ದಾರೆ. ಕಬಾಡೆ ಶಂಕರಸಾ ಎನ್ನುವವರು ಮುಖ್ಯಮಂತ್ರಿಗಳ ಹೆಸರಿನಲ್ಲಿ ಎರಡುಲಕ್ಷ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ ಈ ಬಗ್ಗೆ ವಿಚಾರಣೆ ನಡೆಸಿ ಎಂದು ನಾನು ಪತ್ರ ಬರೆದಿದ್ದರೂ ಕೂಡ ಆ ಬಗ್ಗೆ ಯಾವ ಕ್ರಮವನ್ನು ಇವರು ಹಾಕಿಕೊಳ್ಳಲಿಲ್ಲ. ನಾನು ಪತ್ರ ಬರೆದಿದ್ದಕ್ಕೆ, ವಿಚಾರಣೆ ಮಾಡದೆ, ತಾವು ಹೇಳುವುದು ಸರಿಯಲ್ಲ ಎಂದು ನನಗೆ ಉತ್ತರ ಬರೆದರು. ಅಲ್ಲಿಗೆ ಅದು ಮುಕ್ತಾಯವಾಯಿತು ವರ್ತಕರಿಗೆ ರೇಷ್ಮೆಯನ್ನು ನೇರವಾಗಿ ಕೊಡುವುದನ್ನು ಬಿಟ್ಟು ಮಗ್ಗದವರಿಗೆ ಏಕೆ ನೇರವಾಗಿ ಕೊಡಬಾರದು, ಏಕೆ ಬೇಕು ನಿಮಗೆ ಈ ಏಜೆಂಟ್ಸ್ ? ನಿಮ್ಮ ಮನೆಯಲ್ಲಿ ತಯಾರಾದಂಥ ಸರಕಿಗೆ ನಿಮ್ಮ ಮನೆಯಲ್ಲೇ ಕೊಂಡು ಕೊಳ್ಳುವವರು ಇರಬೇಕಾದರೆ, ಅವರಿಗೆ ಏಕೆ ಕೊಡಬೇಕು ? ಇವನ್ನು ನಿಮ್ಮ ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ತೀರ್ಮಾನಮಾಡಬೇಕು. ಅಗಲ್ಲವೆ, ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿ ಹೇಗೆ ಕೆಲಸಗಳನ್ನು ನಡೆಸುತ್ತಿದೆ ಎಂದರೆ, ಈ ಸೊಸೈಟಿಗೆ ಬಂದ ಮಾಲನ್ನು ೪-೫ ಜನ ಏಜೆಂಟರುಗಳು ಕೆಲವೇ ಗಂಟೆಗಳಲ್ಲಿ ಹಂಚಿಕೊಳ್ಳುತ್ತಾರೆ. ತರುವಾಯ, ಸಿಲ್ಕಿನ ರೇಟನ್ನು, ಸೊಸೈಟಿಯವರು, ಏಜೆಂಟರು ಸೇರಿ ಜಾಸ್ತಿ ಮಾಡುತ್ತಾರೆ. ಏಜೆಂಟರು ತೆಗೆದುಕೊಂಡು ಹೋದ ಮಾಲಿಗೆ ಇವರು ತಕ್ಷಣ ಹಣವನ್ನು ಕೊಡುವುದಿಲ್ಲ ಲಕ್ಷಾಂತರ ರೂಪಾಯಿಗಳಿಗೆ ಇವರು ಬಡ್ಡಿ ಕೊಡಬೇಕಾಗಿಲ್ಲ. ಆದರೆ ಒಬ್ಬ ಮಗ್ಗದವನು ರೇಷ್ಮೆಯನ್ನು ತೆಗೆದುಕೊಂಡು ಹೋದರೆ, ಅವನು ತೆಗೆದುಕೊಂಡ ಹೋರಲಾಗಾಯಿತು, ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಇದರಿಂದ ಈ ವರ್ತಕರಿಗೆ ಲಕ್ಷಾಂತರ ರೂಪಾಯಿಗಳ ಬಡ್ಡಿ ಉಳಿಯುತ್ತದೆ. ಅಲ್ಲದೆ, ಸೊಸೈಟಿಯಿಂದ ತೆಗೆದುಕೊಂಡುಹೋದ ಸರಕನ್ನು ಹೊರಗಡೆಮಾರಿ, ಮಾರಿದ ಹಣವನ್ನು ಉಪಯೋಗಿಸಿಕೊಂಡು, ೫—೬ ತಿಂಗಳವರೆಗೆ ಸೊಸೈಟಿಗೆ ಹಣವನ್ನೇ ಕಟ್ಟುವುದಿಲ್ಲ. ಇದನ್ನೆಲ್ಲಾ ನೋಡಿಕೊಂಡು ಸೊಸೈಟಿಯವರು ಕಣ್ಣುಮುಚ್ಚಿಕೊಂಡು ಕೂತಿದ್ದಾರೆ ಇಂಥ ಕೆಲಸಗಳು ಸರ್ಕಾರದ ಅಧೀನದಲ್ಲಿ ನಡೆಯತಕ್ಕಂಥ ಸಂಸ್ಥೆಯಲ್ಲಿ ನಡೆಯಬಾರದು ಎಂದು ನಾನಾದರೂ ಅಂದುಕೊಂಡಿದ್ದೇನೆ. ಇದಕ್ಕೆ ಎಲ್ಲಾ ಕಾರಣಕರ್ತರು, ಯಾರು ಎಂದರೆ, ರಂಗನಾಥರಾವ್ ಎನ್ನುವವರು, ಡೈರೆಕ್ಟರ್ ಆಫ್ ಸಿಲ್ಕ್ ಇಂಡಸ್ಟ್ರೀಸ್ ಅವರು. ಅವರು ಎರಡೂವರೆ ತಿಂಗಳ ಹಿಂದೆಯೇ ರಿಟೈರ್ ಆಗಬೇಕಾಗಿತ್ತು. ಆದರೆ ಯಾವುದೋ ಕಾರಣದಿಂದ ಸರ್ಕಾರದವರು ಅದು ಯಾವ ಅಭಿಮಾನದಿಂದಲೋ ಅವರನ್ನು ನಾಲ್ಕೈದು ದಿವಸಗಳ ಕೆಳಗೆ ರಿಟೈರ್ ಮಾಡಿದ್ದಾರೆ. ಎರಡೂವರೆ ತಿಂಗಳ ಹಿಂದೆಯೇ ರಿಟೈರ್ ಆಗಬೇಕಾದವರನ್ನು ಇಲ್ಲಿಯವರೆಗೆ ಅಧಿಕಾರದಲ್ಲಿ ಇಟ್ಟುಕೊಳ್ಳಲಿಕ್ಕೆ, ಯಾವ ಮೇಲೂ ಇಲ್ಲದೆ ಇಂತಹ ಅಭಿಮಾನ ಇವರ ಮೇಲೆ ಹೇಗೆ ಬಂತು ? ಇದಕ್ಕೆ ಸರ್ಕಾರದವರು ಜವಾಬು ಹೇಳಬೇಕಾಗಿ ಬರುತ್ತದೆ. ನಾನು ಹಿಂದೆ ಹೇಳಿದ ಹಾಗೆ, ಕರ್ನಾಟಕ ದೇಶದೊಳಗೆ ರೇಷ್ಮೆ ಸೀರೆಗಳು ೧೦೦ ವೆರೈಟಿ, ರಖಂ ಮಾಡಿದರೂ ಖರ್ಚಾಗುತ್ತದೆ. ಯಾವ ಯಾವ ರಖಂ ಮಾಡಿದರೂ ಖರ್ಚಾಗುತ್ತದೆ. ರೇಷ್ಮೆಯ ಹುಳುಗಳನ್ನು ಸಾಕತಕ್ಕವರಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು, ಯಾವ ರೀತಿಯಲ್ಲಿ ಸಹಾಯ ಮಾಡುತ್ತೀರೋ ಅದೇ ರೀತಿ ರೇಷ್ಮೆಯಿಂದ ಬಟ್ಟೆ ಮಾಡತಕ್ಕವರಿಗೂ ಸಹಾಯ ಮಾಡುವುದು ನಿಮ್ಮ ಕರ್ತವ್ಯ. ಅವರು ಬಹಳ ಕಷ್ಟದಲ್ಲಿದ್ದಾರೆ. ಇದಕ್ಕೋಸ್ಕರ ಸರ್ಕಾರದವರು ೧೦ ಕೋಟಿ ರೂಪಾಯಿಗಳನ್ನು ಬಂಡವಾಳ ರೂಪದಲ್ಲಿ ಹಾಕಿ ಒಂದು ಸೊಸೈಟಿಯನ್ನು ತೆಗೆಯಿರಿ. ನಿಮ್ಮ ಬಂಡವಾಳ ಎಲ್ಲಿಗೂ ಹೋಗುವುದಿಲ್ಲ. ಜವಳಿ ವ್ಯಾಪಾರವನ್ನು ಮಾಡಿ ಕೆಟ್ಟವರು ಯಾರೂ ಇಲ್ಲ. ಎಲ್ಲಾ ವ್ಯಾಪಾರಗಳಲ್ಲಿಯೂ ಏರುಪೇರುಗಳು ಆಗುವುದು ಉಂಟು. ಆದರೆ ಜವಳಿ ವ್ಯಾಪಾರದಲ್ಲಿ ಏರುಪೇರುಗಳಿಲ್ಲ. ರೈತರಿಗೆ ಕೊಟ್ಟ ಸಾಲ ವಾಪಸ್ ಬರಬಹುದು, ಬರದೆ ಇರಬಹುದು, ಆದರೆ ಈ ಹತ್ತುಕೋಟಿ ರೂಪಾಯಿಗಳ ಬಂಡವಾಳ ಸರಿಯಾಗಿ ಇರುತ್ತದೆ ಯಾವ ರೀತಿಯಲ್ಲಿ ರೇಷ್ಮೆ ಮಾಡತಕ್ಕವರಿಗೆ ೨೦_೨೫ ಪರ್ಸೆಂಟ್‌ವರೆಗೆ ಸಹಾಯ ಮಾಡುತ್ತೀರೋ ಅದೇ ರೀತಿಯಲ್ಲಿಯೂ ಇವರಿಗೂ ಹಣವನ್ನು ಅಡ್ವಾನ್ಸ್ ಮಾಡಿದರೆ, ಅವರಿಗೆ ಅನುಕೂಲವಾಗುತ್ತದೆ. ೧೯೨೦ನೇ ಇಸವಿಯೊಳಗೆ ನಾನು ವೀವರ್ಸ್ ಸೊಸೈಟಿಯ ಸದಸ್ಯನಾಗಿದ್ದೆ. ನಾವು ಸೊಸೈಟಿಗೆ ಬಟ್ಟೆಯನ್ನು ಖರೀದಿ ಮಾಡುತ್ತಿದ್ದೆವು, ಖರೀದಿ ಮಾಡಿದ್ದನ್ನು ಒಂದು ರೂಪಾಯಿಗೆ ಒಂದು ಆಣೆ ಬಡ್ಡಿಯಂತೆ ಮಾರುತ್ತಿದ್ದೆವು. ಬೆಂಗಳೂರು ನಗರದ ವರ್ತಕರೂ ಕೂಡ ನಮ್ಮಲ್ಲಿ ಆಗ ಬಂದು ಜವುಳಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಆದ್ದರಿಂದ ನಾನು ಕಾಶ್ಮೀರದಲ್ಲಿ ಯಾವರೀತಿಯಲ್ಲಿ ರೇಷ್ಮೆಯ ನೂಲನ್ನು ಮಗ್ಗದವರಿಗೆ ಕಾರ್ಡಿನ ಮೂಲಕ ಮಗ್ಗದವರಿಗೆ ಕೊಡುತ್ತಾರೋ ಅದೇ ರೀತಿ ಇಲ್ಲಿಯೂ ರೇಷ್ಮೆಯನ್ನು ಮಗ್ಗದವರಿಗೆ ಕೊಡಬೇಕು ಎಂದು ಹೇಳುತ್ತೇನೆ. ೧೯೭೩ನೇ ಇಸವಿಯಲ್ಲಿ ಸಿಲ್ಕ್ ಫೈಬರ್ಸ್‌ನಿಂದ ೧೪.೩೦ ಕೋಟಿ ರೂಪಾಯಿ ಆದಾಯ ಬಂದಿದೆ. ಈಚೆಗೆ ಸ್ವಲ್ಪ ದಿವಸಗಳಲ್ಲಿ ಇದು ಕಡಿಮೆಯಾಗಿದೆ. ಬರಬರುತ್ತಾ ಹೆಚ್ಚು ಆದಾಯ ಬರುವುದಕ್ಕೆ ಅವಕಾಶ ಇದೆ. ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ರಂಗನಾಥ್ ಸಾಹೇಬರು ರಿಟೈರ್ ಆಗಿ ೪—೫ ದಿವಸಗಳಾಗಿದೆ ಎರಡೂವರೆ ತಿಂಗಳ ಮೊದಲೇ ಇವರು ರಿಟೈರ್ ಆಗಬೇಕಾಗಿತ್ತು. ಅವರನ್ನು ಮತ್ತೆ ರಕ್ಷಣೆ ಮಾಡುವುದಕ್ಕೆ ಆಲೋ

(ಶ್ರೀ ಕೆ. ಎಂ. ನಾಗಣ್ಣ)

ಚನೆ ಮಾಡುತ್ತಿದ್ದಾರೆಂದು ಕೇಳಿದ್ದೇನೆ ಸಿಲ್ಕ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮಾಡಿ, ಅದಕ್ಕೆ ಇವರನ್ನು ನೇಮಿಸಬೇಕು ಎಂದು ಇದ್ದಾರೆಂದು ಕೇಳಿದ್ದೇನೆ. ಸ್ವಾಮಿ ರಂಗನಾಥ ಸಾಹೇಬರು ಇದುವರೆಗೂ ಸಲ್ಲಿಸಿತ ತಕ್ಕ ಸೇವೆ ಸಾಕು, ಇನ್ನೂ ಹೆಚ್ಚು ಇವರಂತೆ ಸೇವೆ ಸಲ್ಲಿಸುವವರು ಉಳಿದಿದ್ದಾರೆ. ಇವರ ರೀತಿಯಲ್ಲಿ ಅವರುಗಳು ಸೇವೆಯನ್ನು ಸಲ್ಲಿಸದಿದ್ದರೂ ಕೂಡ, ಇವರಿಗಿಂತ ಉತ್ತಮ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಾರೆಂದು ನನ್ನ ಭಾವನೆ. ಆದ್ದರಿಂದ ಇಂಥವರಿಗೆ ರಕ್ಷಣೆ ಕೊಡಲಿಕ್ಕೆ ದಯಮಾಡಿ ಹೋಗಬೇಡಿ, ಎಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ. ಮಾನ್ಯ ಮುಖ್ಯಮಂತ್ರಿಗಳು ನನ್ನ ಮಾತನ್ನು ಗಮನಿಸಬೇಕು. ಮುಖ್ಯಮಂತ್ರಿಗಳು ಪೋಲೀಸ್ ಖಾತೆ, ಮತ್ತು ಬಹಳ ದೊಡ್ಡ ಜಿ. ಎ. ಡಿ. ಅಡ್ಮಿನಿಸ್ಟ್ರೇಷನ್ ಅನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಇಂಥಾದ್ದರೊಳಗೆ ರೇಷ್ಮೆ ಅಭಿವೃದ್ಧಿಯ ಖಾತೆಯನ್ನು ತಮ್ಮಲ್ಲಿಯೇ ಇಟ್ಟುಕೊಂಡಿದ್ದಾರೆ. ಇನು ಭ್ರಷ್ಟಾಚಾರದಿಂದ ಕೂಡಿದ ಖಾತೆ ಎಷ್ಟರಮಟ್ಟಿಗೆ ಇದರಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದನ್ನು ಹೇಳಲಿಕ್ಕೆ ಅಸದಳ. ಇನ್ನು ಮುಂದೆಯೂ ಕೂಡ ಇದು ನಡೆಯುತ್ತದೆ. ಆದ್ದರಿಂದ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ, ದಯಮಾಡಿ ತಾವು ಈ ಖಾತೆಯನ್ನು ಬಿಟ್ಟುಬಿಟ್ಟು ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯಂತಹವರಿಗೆ ವಹಿಸಿದರೆ ನಿಮ್ಮ ಜವಾಬ್ದಾರಿಯೂ ಕಡಿಮೆಯಾಗುತ್ತದೆ ಮತ್ತು ನಿಮಗೆ ಬರತಕ್ಕ ಕೆಟ್ಟ ಹೆಸರು ತಪ್ಪುತ್ತದೆ. ಈ ಖಾತೆಯನ್ನು ಇಟ್ಟುಕೊಂಡಿರುವವರಿಗೆ ಕೆಟ್ಟ ಹೆಸರು ತಪ್ಪಿದ್ದಲ್ಲ. ಮಧ್ಯವರ್ತಿಗಳು ಯಾರಿದ್ದಾರೆ, ಅವರು ಮುಖ್ಯಮಂತ್ರಿಗಳ ಹೆಸರಿನಲ್ಲಿ ಒಂದೂವರೆ, ಎರಡು ಲಕ್ಷ ರೂಪಾಯಿಗಳನ್ನು ವಸೂಲು ಮಾಡಿ ತೆಗೆದುಕೊಂಡಿದ್ದಾರೆ, ಎಂದು ಹೇಳಿದ್ದನ್ನು ನಾನು ಏನು ಮಾಡಲಿಕ್ಕೂ ಸಾಧ್ಯವಿಲ್ಲ. ಎಂದು ಉತ್ತರ ತೆಗೆದುಕೊಂಡಿದ್ದೇನೆ. ಹೀಗೆ ಮಾಡಿದರೆ ಕೋಟ್ಯಾಂತರ ರೂಪಾಯಿಗಳು ಇದರಲ್ಲಿ ನಷ್ಟವಾಗುತದೆ ಈಗ ಇದರಲ್ಲಿ ೬೭ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದಾರೆ. ೬೭ ಕೋಟಿ ರೂಪಾಯಿಗಳು ಖರ್ಚಾಗಬೇಕಾದರೆ, ಇದರಲ್ಲಿ ಎಷ್ಟು ಅಪವ್ಯಯವಾಗಬಹುದೋ ? ಇದರ ಜೊತೆಗೆ, ನಿಮ್ಮ ಹೆಸರನ್ನು ಹೇಳಿಕೊಂಡು ಎಷ್ಟೋಜನ ಮಧ್ಯವರ್ತಿಗಳು ದುಡ್ಡನ್ನು ವಸೂಲು ಮಾಡಿಕೊಂಡು ನಿಮ್ಮ ಹೆಸರಿಗೆ ಕಳಂಕ ತರುತಾರೆ. ಆದ್ದರಿಂದ ನಾನು ತಮಗೆ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ'. ತಮ್ಮ ಈ ಖಾತೆಯನ್ನು ಮಲ್ಲಿಕಾರ್ಜುನಸ್ವಾಮಿಯವರಂತಹ ಮಂತ್ರಿಗಳಿಗೆ ವಹಿಸಿಕೊಟ್ಟು ನೀವು ಮುಕ್ತರಾದರೆ ನಿಮ್ಮ ಹೆಸರು ಉಳಿಯುತ್ತದೆ. ಇಲ್ಲದೇ ಹೋದರೆ ನಿಮಗೆ ಕಳಂಕ ತಪ್ಪಿದ್ದಲ್ಲ. ಇದಕ್ಕೆ ನೀವು ಎಷ್ಟೇ ರೀತಿಯಿಂದ ಸಮಾಧಾನ ಹೇಳಿದರೂ ಕೂಡ ಸದಸ್ಯರನ್ನು ನಂಬಿಸುವುದಕ್ಕಾಗುವುದಿಲ್ಲ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೫—೦೦ ಪಿ. ಎಂ.

† ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ) —ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಾನು ಮುಖ್ಯವಾಗಿ ಡಿಮ್ಯಾಂಡ್ ನಂಬರ್ (೧) ಲೆಜಿಸಲೇಚರ್ ಮತ್ತು ಎಲೆಕ್ಷನ್ ವಿಚಾರದಲ್ಲಿ ಪ್ರಾಸ್ತಾಪ ಮಾಡಬೇಕೆಂದು ಇಲ್ಲಿ ನಿಂತಿದ್ದೇನೆ. ಅದು ಏನು ಎಂದರೆ ಪ್ರಜಾಪ್ರಭುತ್ವದಲ್ಲಿ ಲೆಜಿಸಲೇಚರ್, ಎಕ್ಸಿಕ್ಯೂಟೀವ್ ಮತ್ತು ಜುಡಿಷಿರಿ ಈ ಮೂರು ಪ್ರಮುಖವಾದ ಅಂಗಗಳು. ಈ ಮೂರು ಅಂಗಗಳು ಪ್ರತ್ಯೇಕವಾಗಿರಬೇಕು. ಅದರಲ್ಲೂ ಶಾಸಕಾಂಗ ಏನು ಇದೆ ಇದಕ್ಕೆ ಬಹಳ ಹೆಚ್ಚಿನ ಮಹತ್ವ ಇದೆ. ಶಾಸನ ಮಾಡಿದುದನ್ನು ಜಾರಿಗೆ ಕೊಡತಕ್ಕವರು ಎಕ್ಸಿಕ್ಯೂಟೀವ್ ಏನಾದರೂ ಲೋಪದೋಷಗಳು ಇದ್ದರೆ ಅನ್ಯಾಯ ಆಗಿದ್ದರೆ, ಅದನ್ನು ಸರಿಪಡಿಸತಕ್ಕವರು ಜುಡಿಷಿಯರಿ. ಇಂಥಾದಲ್ಲಿ ಲೆಜಿಸಲೇಚರ್ ಬ್ರಾಂಚ್ ಏನು ಇದೆ ಈ ಬ್ರಾಂಚ್ ಪ್ರತ್ಯೇಕವಾಗಿ ಇರಬೇಕಾದುದು ನ್ಯಾಯ ಮತ್ತು ಸಮಂಜಸವಾಗಿದೆ. ನನಗೆ ತಿಳಿದು ಬಂದಿರುವ ಪ್ರಕಾರ ಎಲ್ಲಾ ರಾಜ್ಯಗಳಲ್ಲಿಯೂ ಸಹ ಶಾಸಕಾಂಗವನ್ನು ಪ್ರತ್ಯೇಕವಾಗಿ ಮಾಡಿದ್ದಾರೆ ಏತಕ್ಕೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದನ್ನು ಲಾ ಡಿಪಾರ್ಟ್‌ಮೆಂಟಿನ ಅಂಗವಾಗಿ ಮಾಡಿದ್ದಾರೆ. ಇದು ಸರಿಯಲ್ಲ. ಏತಕ್ಕೆ ಇಲ್ಲಿಯವರೆಗೆ ಈ ರೀತಿ ಆಯಿತೋ ಗೊತ್ತಿಲ್ಲ. ನನಗೆ ಒಂದು ವಿಚಾರ ತಿಳಿದು ಬಂದಿದೆ ಅದು ಏನು ಎಂದರೆ ಮಂತ್ರಿಮಂಡಲದಲ್ಲಿಯೂ ಸಹ ಇದನ್ನು ಪ್ರತ್ಯೇಕವಾಗಿ ಮಾಡಬೇಕು ಎಂದು ನಿರ್ಣಯ ತೆಗೆದುಕೊಂಡಿದ್ದಾರೆ. ಎಂದು ನಾನು ಕೇಳಿದ್ದೇನೆ, ಆದನ್ನು ಏತಕ್ಕೆ ಇಲ್ಲಿಯವರೆಗೆ ಜಾರಿಗೆ ಕೊಟ್ಟಿಲ್ಲವೋ ಅದು ಸಹ ಗೊತ್ತಿಲ್ಲ. ಶಾಸಕಾಂಗವು ಪ್ರತ್ಯೇಕವಾಗಿ ಇರಬೇಕಾದುದು ಶಾಸಕರ ಒಂದು ಆತ್ಮಗೌರವ ಮತ್ತು ಪ್ರತಿಷ್ಠೆಯ ಮಹತ್ವವು ಹೌದು. ಅದನ್ನು ಮಾನ್ಯ ಸಚಿವರಾದ ಶ್ರೀ ಕೃಷ್ಣರವರು ಮಾಡುತ್ತಾರೆಂದು ನಂಬಿದ್ದೇನೆ. ಅದು ಪ್ರತ್ಯೇಕವಾಗಿ ಇಲ್ಲದೇಹೋದರೆ ಸ್ಪೀಕರ್‌ರವರು ಈ ಇಲಾಖೆ

ಯಲ್ಲಿ ಒಂದು ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ: ಸಣ್ಣ ಪುಟ್ಟ ವಿಷಯಗಳಿಗೆಲ್ಲ ಆ ಡಿಪಾರ್ಟ್‌ಮೆಂಟಿನವರು ಕೊಕ್ಕೆ ಹಾಕುತ್ತಾರೆ. ಲೆಜಿಸಲೇಚರ್ ಸೆಕ್ರೆಟರಿಯವರು ಸಹ ತಮ್ಮ ಸಿಬ್ಬಂದಿ ಮೇಲೆ ಹೆಚ್ಚಿನ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಶಾಸಕಾಂಗವನ್ನು ಪ್ರತ್ಯೇಕವಾಗಿ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇನ್‌ಫಾರ್‌ಮೇಶನ್ ಮತ್ತು ಟೂರಿಸಮ್ ಇಲಾಖೆಯನ್ನು ಪ್ರತ್ಯೇಕಮಾಡಿದ್ದಾರೆ ಟೂರಿಸಮ್ ಇಲಾಖೆ ೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ಇಲಾಖೆ. ಹೀಗಿರುವಾಗ ಲೆಜಿಸಲೇಚರ್ ೫೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ಇಲಾಖೆ ಆಗಿರುವಾಗ ಅದು ಇಲಾಖೆ ಆಗಿರಬೇಕು. ಶಾಸಕಾಂಗಕ್ಕೆ ಹೆಚ್ಚಿನ ಮಹತ್ವ ಬೇಕೆಂದು ಹೇಳುತ್ತಾ ಇರುವಾಗ ಅದನ್ನು ಪ್ರತ್ಯೇಕವಾಗಿ ಮಾಡಬೇಕಾದುದು ನ್ಯಾಯವಾಗಿದೆ. ಇನ್ನೊಂದು ವಿಚಾರ ಏನು ಎಂದರೆ ಲೆಜಿಸಲೇಚರ್ ಹೋಂ ಅನ್ನು ಲೆಜಿಸಲೇಚರ್ ಬ್ರಾಂಚಿನಿಂದ ತೆಗೆದು ಪಿ ಡಬ್ಲ್ಯೂ ಡಿ ಇಲಾಖೆಗೆ ಕೊಟ್ಟಿದ್ದಾರೆ. ಈ ರೀತಿ ಕೊಟ್ಟಮೇಲೆ ಸ್ಥಿತಿಗತಿಗಳು ಉತ್ತಮವಾಗುವುದು. ಅಲ್ಲಿ ಒಳ್ಳೆಯ ಡಿಸಿಪ್ಲೀನ್ ಬರಬಹುದು. ಉತ್ತಮ ಆಹಾರ ದೊರಕಬಹುದು. ಅಲ್ಲಿ ಎಲ್ಲಾ ಅನುಕೂಲಗಳು ಸಮರ್ಪಕವಾದ ರೀತಿಯಲ್ಲಿ ನಡೆಯಬಹುದು ಎಂದು ತಿಳಿದುಕೊಂಡಿದ್ದೆವು. ನಮ್ಮ ಎಣಿಕೆ ಏನು ಇತ್ತು ಅದಕ್ಕೆ ತದ್ವಿರುದ್ಧವಾಗಿ ಆಗುತ್ತಾ ಇದೆ. ಆದುದರಿಂದ ಅದು ಲೆಜಿಸಲೇಚರ್ ಇಲಾಖೆಯ ಕಂಟ್ರೋಲಿನಲ್ಲಿ ಇದ್ದರೆ ಚೆನ್ನಾಗಿತ್ತು ಎಂದು ನಾನು ಭಾವಿಸುತ್ತೇನೆ. ಈ ಎಲ್ಲಾ ಕಾರಣಗಳಿಂದ ಕಾನೂನು ಇಲಾಖೆಯಿಂದ ಈ ಇಲಾಖೆಯನ್ನು ಪ್ರತ್ಯೇಕ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಹೇಳಬೇಕಾಗಿದೆ ಈ ಇಲಾಖೆಯಲ್ಲಿ ಇರತಕ್ಕ ಸ್ಟೆನೋಗ್ರಾಫರ್ಸ್ ಸಿಬ್ಬಂದಿ ಬಹಳ ಕಡಿಮೆ ಸೆಶನ್ ನಡೆಯುವಾಗ ಮತ್ತು ಇತರೆ ಕಾಲದಲ್ಲಿ ಅವರು ಬಹಳ ಕೆಲಸ ಮಾಡುತ್ತಾರೆ ಅವರ ಕೆಲಸ ಬಹಳ ಆಯಾಸಕರವಾದುದು ಮತ್ತು ಅವರು ಹೆಚ್ಚು ಶ್ರಮ ಪಡಬೇಕಾಗುತ್ತದೆ ಅವರಿಗೆ ಕೊಡತಕ್ಕ ಸಂಬಳ ಸಾರಿಗೆ ಅಷ್ಟೇನೂ ಸಮರ್ಪಕವಾಗಿಲ್ಲ. ಆದುದರಿಂದ ಸಿಬ್ಬಂದಿಯನ್ನು ಜಾಸ್ತಿ ಮಾಡಬೇಕು. ಕನ್ನಡ ಸ್ಟೆನೋಗಳು ಹೆಚ್ಚು ಆಗಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಡಿಮ್ಯಾಂಡ್ ನಂಬರ್ (೧)ರ ಮೇಲೆ ಕಳಕಳಿಯಿಂದ ಇಷ್ಟು ಪ್ರಾರ್ಥನೆ ಮಾಡಿ ಶ್ರೀ ಎಸ್. ಎಂ. ಕೃಷ್ಣರವರ ಕಾಲದಲ್ಲಿ ಶಾಸಕಾಂಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದು ಹೇಳುತ್ತೇನೆ.

ಕೈಗಾರಿಕೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಒಂದು ದೇಶ ಆರ್ಥಿಕವಾಗಿ ಅಭಿವೃದ್ಧಿ ಆಗಬೇಕಾದರೆ ಕೈಗಾರಿಕೆಯಿಂದಲೇ ಆಗಬೇಕು. ವ್ಯವಸಾಯದಿಂದ ಎಷ್ಟೇ ರೈತ ಕಷ್ಟಪಟ್ಟು ಕೆಲಸ ಮಾಡಿದರೂ ಸಹ ಹೆಚ್ಚಿನ ಉತ್ಪನ್ನವನ್ನು ತೆಗೆಯುವುದಕ್ಕೆ ಆಗಿಲ್ಲ. ಆದುದರಿಂದ ಸರ್. ಎಂ. ವಿಶ್ವೇಶ್ವರಯ್ಯನವರು ಇಂಡಸ್ಟ್ರಿಯಲೈಸ್ ಆರ್ ಪೆರಿಷ್ ಎಂದು ಹೇಳಿದರು. ಕೈಗಾರಿಕೆ ಅಭಿವೃದ್ಧಿ ಆಗಬೇಕು ಇಲ್ಲದಿದ್ದರೆ ದೇಶ ನಾಶವಾಗುತ್ತದೆ. ಎಂದು ಹೇಳಿದರೂ. ಅವರು ದಿವಾನರು ಆಗಿದ್ದ ಕಾಲದಲ್ಲಿ ಎಕನಾಮಿಕ ಕಾನ್‌ಫರೆನ್ಸ್ ಮೊದಲು ಸ್ಥಾಪನೆ ಮಾಡಿದರು. ಇದು ಕೈಗಾರಿಕೆಗೆ ತಳಹದಿಯಾಗಿ ಅವರ ಕಾಲದಲ್ಲಿ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆಯಿತು. ಮೈಸೂರು ದೇಶೀಯ ಸಂಸ್ಥಾನ ಆಗಿದ್ದರೂ. ಮಾದರಿ ಸಂಸ್ಥಾನ ಎಂದು ಅನ್ನಿಸಿಕೊಳ್ಳುವ ರೀತಿಯಲ್ಲಿ ಇಲ್ಲಿ ಕೈಗಾರಿಕೆಗಳು ಬೆಳೆದು ಬಂದವು. ಈಚೆಗೆ ಸಹ ನಮ್ಮ ದೇಶದಲ್ಲಿ ಕೈಗಾರಿಕೆಗಳು ಹೆಚ್ಚುತ್ತಾ ಇವೆ. ಆದರೆ ಯಾವ ಮಟ್ಟದಲ್ಲಿ ಅವು ಹೆಚ್ಚು ಬೇಕಾಗಿತ್ತೋ ಮತ್ತು ಅವುಗಳಿಂದ ಕರ್ನಾಟಕದ ಜನಕ್ಕೆ ಎಷ್ಟು ಅನುಕೂಲ ಆಗಬೇಕಾಗಿತ್ತೋ ಅಷ್ಟು ಅನುಕೂಲವಾಗುತ್ತಿಲ್ಲ ಎಂದೂ ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಾರಣ ಏನು ಎಂದರೆ ನಮ್ಮ ರಾಜ್ಯದಲ್ಲಿ ಅನೇಕ ವೈಶಿಷ್ಟ್ಯಗಳು ಇವೆ. ಉತ್ತಮವಾದ ಹವ ಇದೆ. ೨೦೦ ಮೈಲಿ ದೂರ ಕರಾವಳಿ ಪ್ರದೇಶ ಇದೆ. ಅರಣ್ಯ ಸಂಪತ್ತು ಇದೆ. ಕಚ್ಚಾಮಾಲು ಬೇಕಾದಷ್ಟು ಸಿಕ್ಕುತ್ತದೆ ಬಹುಮುಖ್ಯವಾಗಿ ಖನಿಜ ಸಂಪತ್ತು ಇದೆ. ವಿದ್ಯುಚ್ಛಕ್ತಿ ಇದೆ. ಅದನ್ನು ನಮ್ಮ ಜನ ಬಳಸಿಕೊಳ್ಳುತ್ತಾ ಇಲ್ಲ. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರು ಯಾರು ಎಂದರೆ ಇತರೆ ರಾಜ್ಯಗಳವರು. ಅವರು ಬಂದು ನಮ್ಮ ಜನರನ್ನು ಶೋಷಣೆ ಮಾಡುತ್ತಿದ್ದಾರೆ. ನಮ್ಮ ಜನಗಳಿಗೆ ಕೈಗಾರಿಕಾ ಸಂಸ್ಥೆಗಳಲ್ಲಿ ಸ್ಥಾನಮಾನವಿಲ್ಲ ಯಾವ ಒಂದು ಅಧಿಕಾರವನ್ನು ಸಹ ಕೊಡುವುದಿಲ್ಲ. ನಮ್ಮ ಜನರು ನಮ್ಮ ರಾಜ್ಯದ ನೀರನ್ನು ಕೊಡುತ್ತಾರೆ, ವಿದ್ಯುಚ್ಛಕ್ತಿ ಕೊಡುತ್ತಾರೆ ಇತರೆ ಎಲ್ಲಾ ಸೌಕರ್ಯಗಳನ್ನು ಮಾಡಿಕೊಟ್ಟರೂ ಸಹ ಕನ್ನಡಿಗರಿಗೆ ಸಾಕಷ್ಟು ಉದ್ಯೋಗಾವಕಾಶ ಕೊಡುತ್ತಾ ಇಲ್ಲ. ನಮ್ಮ ಸರಕಾರದವರು ಇದರ ಬಗ್ಗೆ ನಿಗಾ ವಹಿಸುತ್ತಾ ಇಲ್ಲ. ನಮ್ಮ ಜನಾಂಗಕ್ಕೆ ಇದರಿಂದ ಅನ್ಯಾಯವಾಗಿದೆ, ಎಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಆದುದರಿಂದ ಈಗ ಏನು ಅನ್ಯಾಯ ನಡೆಯುತ್ತಾ ಇದೆ ಅದನ್ನು ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ ಇದೇ ರೀತಿ ಸೆಂಟ್ರಲ್ ಗೌರ್ನ್ಮೆಂಟ್ ಸ್ಥಾಪಿಸಿರತಕ್ಕ ಭಾರಿ ಭಾರಿ ಕೈಗಾರಿಕೆಗಳಲ್ಲಿ ನಮ್ಮ ರಾಜ್ಯಕ್ಕೆ ಏನು ಪಾಲು ಬರಬೇಕು ಅದನ್ನು ದೊರಕಿಸಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಅವರನ್ನು ಕೇಳಿಕೊಳ್ಳುತ್ತೇನೆ. ಬಹು ಮುಖ್ಯವಾಗಿ

(ಶ್ರೀ ಕೆ. ಎಂ. ರುದ್ರಪ್ಪ)

ನಮ್ಮಲ್ಲಿ ಖನಿಜ ಸಂಪತ್ತು ಯಥೇಚ್ಛವಾಗಿದೆ. ಖನಿಜ ಸಂಪತ್ತಿನಲ್ಲಿ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ೨ನೆಯದು ಎಂದು ತಿಳಿಯುತ್ತೇನೆ ಬಹು ಮುಖ್ಯವಾಗಿ ಚಿನ್ನ ಸಿಕ್ಕುವುದು ಕರ್ನಾಟಕ ರಾಜ್ಯದಲ್ಲಿ ನಮ್ಮಲ್ಲಿ ಕಬ್ಬಿಣದ ಅದಿರು ಬೇಕಾದಷ್ಟು ಇದೆ. ಕಬ್ಬಿಣದ ಅದಿರನ್ನು ತೆಗೆಯಬೇಕಾದರೆ ಕುದುರೆ ಮುಖ ಯೋಜನೆಯನ್ನು ಕಾರ್ಯಗತ ಮಾಡಿದರೆ ಒಳ್ಳೆಯದಾಗುತ್ತದೆ. ಪಶ್ಚಿಮ ಕರಾವಳಿಗೆ ಹೆಚ್ಚಿನ ಮಹತ್ವ ಇದೆ, ಆದುದರಿಂದ ಫಾರಿನ್ ಎಕ್ಸ್ಚೇಂಜ್ ಬರುವುದಲ್ಲದೇ ಹೆಚ್ಚಿನ ಜನರಿಗೆ ಉದ್ಯೋಗ ಸಿಗುವಂಥಾಗುತ್ತದೆ. ಈಗ ವಿಜಯನಗರ ಸ್ಟೀಲ್ ಪ್ಲಾಂಟ್ ಏನು ಇದೆ. ಅದನ್ನು ನಮ್ಮ ರಾಜ್ಯ ಸರ್ಕಾರದವರು ಕೇಂದ್ರದವರೊಡನೆ ಹೋರಾಟ ನಡೆಸಿ ಬೇಗ ಕೆಲಸ ನಡೆಯುವಂತೆ ಮಾಡಬೇಕು. ಅದರಲ್ಲಿ ಹೆಚ್ಚಿನ ಪಾಲು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೈಯಲ್ಲಿ ಇರುವಂತೆ ನೋಡಬೇಕು. ಅಲ್ಲ. ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ದೊರಕುವಂತೆ ರಾಜ್ಯಸರ್ಕಾರದವರು ಮತ್ತು ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮ್ಯಾಂಗನೀಸ್ ಮತ್ತು ಕ್ರೋಮೈಟ್ ಅದಿರು ಸಾಕಷ್ಟು ನಮ್ಮ ರಾಜ್ಯದಲ್ಲಿ ಇದೆ. ಕ್ರೋಮೈಟ್ ಒರಿಸ್ಸಾ ರಾಜ್ಯ ಬಿಟ್ಟರೆ ಕರ್ನಾಟಕದಲ್ಲಿ ಸಿಕ್ಕುತ್ತದೆ. ಬೆಣಚುಕಲ್ಲೂ, ಸುಣ್ಣಕಲ್ಲೂ, ತಾಮ್ರ ಸೀಸ, ಬಾಕ್ಸೈಟ್ ಇತ್ಯಾದಿ ನಮ್ಮ ರಾಜ್ಯದಲ್ಲಿ ಸಿಕ್ಕುತ್ತದೆ. ಗಣಿ ಭೂಗರ್ಭ ಇಲಾಖೆಯವರು ಬಹಳ ಚೆನ್ನಾಗಿ ಕೆಲಸಮಾಡುತ್ತಾ ಇದ್ದಾರೆ. ಇದು ಅಸ್ತಿತ್ವಕ್ಕೆ ಬಂದಿದ್ದು ೧೯೫೮ನೇ ಇಸವಿಯಲ್ಲಿ. ಅವರು ಬಹಳ ಅಭಿನಂದನೀಯವಾದ ರೀತಿಯಲ್ಲಿ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ ಎಂದು ನಾನಾದರೂ ಭಾವಿಸುತ್ತೇನೆ. ಈಗ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಬಿಟ್ಟರೆ ಸಣ್ಣಕಾರ್ಖಾನೆಗಳು ನಮ್ಮ ದೇಶದಲ್ಲಿ ಸ್ಥಾಪನೆಯಾಗಬೇಕು. ಹೆಚ್ಚಿನ ಕಾರ್ಖಾನೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬೆಳೆಯುತ್ತವೆ. ವಿಕೇಂದ್ರೀಕರಣ ಆಗತಕ್ಕದ್ದು ನ್ಯಾಯವಾಗಿದೆ. ಏತಕ್ಕೆಂದರೆ ಹಾಸನ ಜಿಲ್ಲೆಯ ವಿಷಯವಾಗಿ ಒಂದು ಮಾತನ್ನು ಹೇಳುವುದಾದರೆ ಅದು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಲಾಗಿದೆ. ನನಗೆ ಗೊತ್ತಿರುವ ಹಾಗೆ ಯಥೇಚ್ಛವಾಗಿ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅಲ್ಲಿ ಅನುಕೂಲ ಇದ್ದರೂ ಸಹ ಸರ್ಕಾರದವರು ಇಲ್ಲಿಯವರೆಗೆ ಹೆಚ್ಚಿನ ಗಮನ ಕೊಡದೇ ಇರುವುದರಿಂದ ಅಲ್ಲಿ ಕೈಗಾರಿಕೆಗಳು ಬೆಳೆದು ಬಂದಿಲ್ಲ.

ಅಲ್ಲಿ ಸಣ್ಣದಾದಂಥ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಒಂದು ಇದೆ. ಅದೂ ಕೂಡ ನಷ್ಟದಲ್ಲಿ ನಡೆಯುತ್ತಿರುವುದನ್ನು ನೋಡಿದರೆ ವ್ಯಸನವಾಗುತ್ತದೆ. ಇಲ್ಲಿ ತಯಾರಾಗುವ ಉಪಕರಣಗಳಿಗೆ ಹೆಚ್ಚಿನ ಬೇಡಿಕೆ ಇದ್ದರೂ ಸಹ ನಷ್ಟದಲ್ಲಿ ನಡೆಯುತ್ತಿದೆ. ಇದನ್ನು ಹೋಗಲಾಡಿಸಲು ಕಾರ್ಖಾನೆಯನ್ನು ಎಕ್ಸ್‌ಪ್ಯಾಂಡ್ ಮಾಡಿ ಟ್ರಾಕ್ಟರುಗಳನ್ನು ಸಹ ತಯಾರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಸನ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಸಹಕಾರ ತತ್ವದ ಮೇಲೆ ಪ್ರಾರಂಭ ಮಾಡಬೇಕೆಂದು ಈಗಾಗಲೇ ೭ ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಲಾಗಿದೆ ಆದರೆ ಸರ್ಕಾರದವರು ಇಲ್ಲಿಯವರೆಗೆ ಬೋರ್ಡ್ ಮೆಂಬರ್ಸ್‌ನ್ನು ನಾಮಿನೇಟ್ ಮಾಡಿಲ್ಲ. ಅದನ್ನು ಮೊದಲು ಮಾಡಬೇಕು. ಮತ್ತು ಸಹಕಾರೀ ತತ್ವದ ಮೇಲೆ ನಡೆಯಲು ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಗೆ ಜಾಗ್ರತೆ ಲೈಸೆನ್ಸ್ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಈಗಾಗಲೇ ಬಂಡವಾಳಗಾರರೊಬ್ಬರು ಕೇಂದ್ರದಲ್ಲಿ ತಮ್ಮ ಪ್ರಭಾವವನ್ನು ಬೀರುವುದರ ಮೂಲಕ ಖಾಸಗಿಯಾಗಿ ಸಕ್ಕರೆ ಕಾರ್ಖಾನೆಯನ್ನು ಅಲ್ಲಿ ಸ್ಥಾಪನೆ ಮಾಡಲು ಲೈಸನ್ಸ್ ತೆಗೆದುಕೊಳ್ಳುವುದಕ್ಕೆ ಸಂಚು ಹಾಕಿದ್ದಾರೆಂದು ಕೇಳಿದ್ದೇವೆ. ಮತ್ತು ಪತ್ರಿಕೆಯಲ್ಲಿಯೂ ನೋಡಿದ್ದೇವೆ ಕೊಠಾರಿ ಕಂಪನಿಯವರು ಈ ರೀತಿ ಪ್ರಯತ್ನ ಮಾಡುತ್ತಿದ್ದಾರೆಂದು ಕೇಳಿದ್ದೇವೆ, ಅವರು ಬಳ್ಳಾರಿಯಲ್ಲಿ ಈಗಾಗಲೆ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದಾರೆ. ಆದ ಕಾರಣ ಅವರಿಗೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕು.

ಇನ್ನೂ ಅರಸೀಕೆರೆಯಲ್ಲಿ ತಾಮ್ರದ ಅದಿರು ಸಿಗುತ್ತದೆಂದು ತಜ್ಞರು ತಿಳಿಸಿದ್ದಾರೆ. ಆದಕಾರಣ ಆ ಅದಿರನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡಬೇಕು. ಅದೇ ರೀತಿ ಹೊಳೆನರಸೀಪುರದಲ್ಲಿ ಕೊರಂಡಮ್ ಸಿಗುತ್ತದೆ. ಅದನ್ನು ಸಹ ತೆಗೆಯುವುದಕ್ಕೆ ಏರ್ಪಾಡು ಮಾಡಬೇಕು. ಈಗ ಹೊಳೆನರಸೀಪುರದಲ್ಲಿ ಆಸ್‌ಬೆಸ್ಟಾಸ್ ಸೀಟ್ಸ್ ತಯಾರು ಮಾಡಲು ಒಂದು ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದಾರೆ. ಬಿಲ್ಡಿಂಗ್ ಸಹ ಕಟ್ಟಿದ್ದಾರೆ. ಅದರ ಕೆಲಸ ನಡೆಯುತ್ತಿಲ್ಲ, ಈ ಬಗ್ಗೆ ಮಾನ್ಯ ದೇವೇಗೌಡರಿಗೆ ಹೆಚ್ಚಿನ ಮಾಹಿತಿ ಗೊತ್ತಿರಬಹುದೆಂದು ಕಾಣುತ್ತದೆ. ಸರ್ಕಾರದ ಬಂಡವಾಳ ಹಾಕಿದಮೇಲೆ, ಅದನ್ನು ಸರಿಯಾಗಿ ನಡೆಸದಿದ್ದರೆ ಸರ್ಕಾರಕ್ಕೆ ನಷ್ಟವಾಗುತ್ತದೆ. ಆದಕಾರಣ ಅದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ ಒಂದು ಟೆಕ್ಸ್‌ಟೈಲ್ ಮಿಲ್ಲನ್ನು ಸ್ಥಾಪನೆಮಾಡಲು ಕೆ. ಮಲ್ಲಪ್ಪನವರು ಈ ಹಿಂದೆ ಒಬ್ಬರಿಗೆ ಲೈಸನ್ಸ್ ಕೊಟ್ಟಿದ್ದರು. ಆದರೆ ಯಾವುದೋ ಕಾರಣದಿಂದ ಅವರು ಲೈಸನ್ಸ್‌ನ್ನು ಸರಂಡರ್ ಮಾಡಿದರು, ಈಗಲೂ ಸಹ ಹಾಸನ ಜಿಲ್ಲೆಯಲ್ಲಿ ಇದನ್ನು ಸ್ಥಾಪನೆಮಾಡಲು ಒಳ್ಳೆಯ ಅವಕಾಶವಿದೆ, ಕಾರಣ, ಅರಸೀಕೆರೆ ಮತ್ತು ಬೇಲೂರಿನ ಸುತ್ತಮುತ್ತ ಉತ್ತಮವಾದ ಹತ್ತಿಯನ್ನು

ಬೆಳೆಯಲಾಗುತ್ತಿದೆ. ಇದನ್ನು ಉಪಯೋಗಿಸಿಕೊಂಡು ಅಲ್ಲಿ ಒಂದು ಟೆಕ್ಸ್‌ಟೈಲ್ ಮಿಲ್ಲನ್ನು ಸ್ಥಾಪಿಸಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದೇ ರೀತಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಲ್ಲಿ ಹಾಕುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಅದು ಫಾರೆಸ್ಟ್ ಏರಿಯಾ ಇರುವುದರಿಂದ ಮರಗೆಲಸದ ಮತ್ತು ಚಾಪೆ ಹೆಣೆಯುವಂತ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ. ನಮ್ಮ ಹಾಸನ ಜಿಲ್ಲೆ ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಹಿಂದುಳಿದುದರಿಂದ, ಸಣ್ಣಮಟ್ಟ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ಆ ಒಂದು ಕಳಂಕವನ್ನು ತಪ್ಪಿಸಬೇಕು ಮತ್ತು ಜನರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು, ಜೊತೆಗೆ ಅಲ್ಲಿಯ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಸನ ಜಿಲ್ಲೆಯಲ್ಲಿ ಕಟ್ಟಡಕ್ಕೆ ಬೇಕಾದ ಸಾಮಗ್ರಿಗಳು ಸಿಗುತ್ತದೆ. ಬಹು ಮುಖ್ಯವಾದ ಕಲ್ಲುಗಳು ಸಿಗುತ್ತವೆ. ಇಟ್ಟಿಗೆಯ ಬದಲು ಕಲ್ಲನ್ನು ಉಪಯೋಗಿಸಿ ಕಟ್ಟಡಗಳನ್ನು ಕಟ್ಟಿಸಿದರೆ ಖರ್ಚು ಒಂದೂವರೆಯಷ್ಟು ಜಾಸ್ತಿಯಾದರೂ ಸಹ ಕಟ್ಟಡಗಳು ಭದ್ರವಾಗಿರುತ್ತವೆ. ಕಟ್ಟಡಗಳಿಗೆ ಬೇಕಾದುದು ಒಳ್ಳೆಯ ಕಲ್ಲು ಹೊಳೆನರಸೀಪುರ ತಾಲ್ಲೂಕು, ಅರಸೀಕೆರೆ ತಾಲ್ಲೂಕು, ಮತ್ತು ಹಾಸನ ತಾಲ್ಲೂಕುಗಳಲ್ಲಿ ಯತೇಚ್ಛವಾಗಿ ಸಿಗುವುದರಿಂದ ಆ ಕಲ್ಲನ್ನು ಸಂಗ್ರಹ ಮಾಡಲು ಒಂದು ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕು. ಜೊತೆಗೆ ಅಲ್ಲಿ ಪಿಂಗಾಣಿ ಕೈಗಾರಿಕೆಯನ್ನು ಸ್ಥಾಪನೆಮಾಡಬಹುದು. ಏಕೆಂದರೆ ಒಳ್ಳೆಯ ಮಣ್ಣು ಸಿಗುತ್ತದೆ ಈಗ ಆ ಮಣ್ಣನ್ನು ಬೆಂಗಳೂರಿಗೆ ತಂದು ಪಿಂಗಾಣಿ ಸಾಮಾನುಗಳನ್ನು ತಯಾರು ಮಾಡುತ್ತಿರುವುದರಿಂದ ಖರ್ಚು ಜಾಸ್ತಿಯಾಗುತ್ತದೆ. ಆದಕಾರಣ ಅರಸೀಕೆರೆ ತಾಲ್ಲೂಕಿನಲ್ಲಿಯೇ ಒಂದು ಪಿಂಗಾಣಿ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯ ಕೈಗಾರಿಕೆ ದೃಷ್ಟಿಯಿಂದ ಬಹಳ ಹೆಸರಾಂತ ರಾಜ್ಯವಾದುದರಿಂದ, ಇನ್ನೂ ಮುಂದೆಯೂ ಸಹ ನಮ್ಮ ರಾಜ್ಯ ಕೈಗಾರಿಕೆಯಲ್ಲಿ ಹಿಂದೆ ಬೀಳದಂತೆ ನೋಡಿಕೊಳ್ಳಬೇಕು. ನಮ್ಮಲ್ಲಿ ವಿದ್ಯಾವಂತರಾದ ನಿರುದ್ಯೋಗಿಗಳು ಜಾಸ್ತಿ ಇರುವುದರಿಂದ, ಅವರಿಗೆ ಹೆಚ್ಚಿನ ಒಂದು ಉದ್ಯೋಗವನ್ನು ಕಲ್ಪಿಸಿಕೊಡಬೇಕಾದರೆ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಬೇಕಾಗುತ್ತದೆ. ಮುಖ್ಯವಾಗಿ ಈ ಕೈಗಾರಿಕಾ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆಯಾಗಿರುವುದರಿಂದ, ಇನ್ನೂ ಹೆಚ್ಚಿನ ಚುರುಕಿನಿಂದ-ಕೆಲಸ ಮಾಡಬೇಕಾಗಿದೆ. ಆ ರೀತಿ ಮಾಡಿದ್ದರೆ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವುದು ಕಷ್ಟವಾಗುತ್ತದೆ. ಎಲ್ಲರನ್ನೂ ವ್ಯವಸಾಯದಲ್ಲಿ ತೊಡಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಮಾನ್ಯ ಸಚಿವರು ಗಮನಿಸಿ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಿ: ನಮ್ಮ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಗಳನ್ನು ಕಲ್ಪಿಸಿಕೊಡುವುದರ ಮೂಲಕ ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗುವಂತೆ ನೋಡಿಕೊಳ್ಳಬೇಕೆಂದು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ. ಇಂದು ಸರಕಾರದವರು ಈ ಇಲಾಖೆಯಿಂದ ಎಷ್ಟು ಲಾಭವನ್ನು ನಿರೀಕ್ಷೆ ಮಾಡಿದ್ದರೋ ಅಷ್ಟು ಲಾಭ ಬರುತ್ತಿಲ್ಲ, ಇಂದು ನಮ್ಮ ರಾಜ್ಯದಲ್ಲಿ ಸರ್ಕಾರದವರು ನಡೆಸತಕ್ಕ ಕಾರ್ಖಾನೆಗಳು, ಖಾಸಗಿಯವರು ನಡೆಸತಕ್ಕ ಕಾರ್ಖಾನೆಗಳು, ಸಹಕಾರೀ ತತ್ವದ ಮೇಲೆ ನಡೆಸತಕ್ಕ ಕಾರ್ಖಾನೆಗಳು ಮತ್ತು ಖಾಸಗಿಯವರು ಮತ್ತು ಸರಕಾರದವರು ಒಟ್ಟಾಗಿ ಸೇರಿಕೊಂಡು ನಡೆಸತಕ್ಕ ಕಾರ್ಖಾನೆಗಳು ಎಂಬುದಾಗಿ ನಾಲ್ಕು ತರಹ ಕಾರ್ಖಾನೆಗಳು ಇವೆ. ಇಂದೂ ಖಾಸಗಿಯವರು ತಮ್ಮ ಕೈಗಾರಿಕೆಯನ್ನು ಲಾಭದಾಯಕವಾಗಿ ನಡೆಸುತ್ತಿರುವುದನ್ನು ನಾವು ನೋಡಬಹುದು. ಆದರೆ ಸರ್ಕಾರದವರು ಅದೇ ರೀತಿ ಲಾಭದಾಯಕವಾಗಿ ಏತಕ್ಕೆ ನಡೆಸುತ್ತಿಲ್ಲ? ಇದಕ್ಕೆ ಕಾರಣವನ್ನು ಯೋಚನೆ ಮಾಡಿದರೆ ಅಧಿಕಾರವರ್ಗದಲ್ಲಿ ಲೋಪದೋಷಗಳು ಇರುವುದು, ಟಾಪ್ ಹೆವಿ-ಅಡ್ಮಿನಿಸ್ಟ್ರೇಷನ್ ಇರುವುದು, ಮತ್ತು ಅಧಿಕಾರಿಗಳು ಇಕಾನಮಿಯನ್ನು ಸರಿಯಾಗಿ ಅನುಸರಿಸದಿರುವುದು. ಮಾನ್ಯ ಸಚಿವರು ಇದನ್ನೆಲ್ಲಾ ಗಮನಿಸಿ ಎಲ್ಲೆಲ್ಲಿ ಇಂತಹ ಒಂದು ತಪ್ಪುಗಳು ಕಂಡುಬರುತ್ತದೋ ಅಲ್ಲಿ ಅದನ್ನು ಸರಿಪಡಿಸುವ ಬಗ್ಗೆ ಉಗ್ರವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಏಕೆಂದರೆ ಈಗಾಗಲೇ ಮಾತನಾಡಿದ ಮಾನ್ಯ ಕಾಗೋಡು ತಿಮ್ಮಪ್ಪನವರು ಭದ್ರಾವತಿ ಕಾರ್ಖಾನೆಯ ವಿಷಯವಾಗಿ ಹೇಳಿದ್ದಾರೆ, ಸರ್ಕಾರದ ಗಮನಕ್ಕೆ ಬಂದ ಕೂಡಲೆ ಅಲ್ಲಿ ಸರಿಪಡಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲ ಅದನ್ನು ಸರ್ ಎಂ ವಿಶ್ವೇಶ್ವರಯ್ಯನವರು ಸ್ಥಾಪನೆ ಮಾಡಿದ್ದು ಆದಕಾರಣ ಅದು ಲಾಭದಾಯಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಈಗ ದಾಂಡೇಲಿಯಲ್ಲಿ ಒಂದು ಕಾಗದ ಕಾರ್ಖಾನೆ ಇದೆ, ಅವರು ಒಳ್ಳೆಯ ಲಾಭವನ್ನು ಮಾಡುತ್ತಿರುವುದಕ್ಕೆ ಕಾರಣ ಅವರು ಉತ್ತಮ ರೀತಿಯಿಂದ ನಡೆಸುತ್ತಿರುವುದು ಮತ್ತು ಅಲ್ಲಿಯ ನೌಕರರಿಗೆ ಒಳ್ಳೆಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದು. ಅದೇ ರೀತಿ ಭದ್ರಾವತಿ ಕಾಗದ ಕಾರ್ಖಾನೆ ಏತಕ್ಕೆ ನಡೆಯುತ್ತಿಲ್ಲ? ಇದನ್ನು ಸರ್ಕಾರದವರು ಪ್ರತಿಷ್ಠೆ ವಿಚಾರವಾಗಿ ತೆಗೆದು ಕೊಳ್ಳದೇ, ಯಾರು ಯಾರು ತಪ್ಪು ಮಾಡಿದ್ದಾರೆ ಅಂತವರ ಮೇಲೆ ಉಗ್ರವಾದ ಮತ್ತು ಕಠಿನವಾದ ಕ್ರಮವನ್ನು ತೆಗೆದುಕೊಳ್ಳುವುದರ ಮೂಲಕ ಅದು ಲಾಭಾದಾಯಕವಾಗಿ ನಡೆಯುವಂತೆ ಮತ್ತು ನಮ್ಮ ಜನರಿಗೆ ಅನುಕೂಲವಾಗುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯ ಕೈಗಾರಿಕೆಯ ವಿಷಯದಲ್ಲಿ ಏನು ಒಂದು ವೈಶಿಷ್ಟತೆಯನ್ನು ಪಡೆದಿದೆ, ಅದನ್ನು ಉಳಿಸಬೇಕು ಮತ್ತು ಇನ್ನೂ ಚೆನ್ನಾಗಿ ಬೆಳಸಬೇಕು. ಕೈಗಾರಿಕೆಯ ಅಭಿವೃದ್ಧಿಯಾಗಬೇಕಾದರೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿದರೆ ಮತ್ತೊಂದು ಕಡೆ ಕೈಗಾರಿಕೆ

(ಶ್ರೀ ಕೆ. ಎಂ. ರುದ್ರಪ್ಪ)

ಗಳನ್ನು ಬೆಳೆಸುವುದಕ್ಕೆ ಅವಕಾಶವಾಗುತ್ತದೆ. ಈ ಕಾರಣದಿಂದ ಕಾಳಿನದಿ ಯೋಜನೆಯನ್ನು ಜಾಗ್ರತೆ ಮುಗಿಸಲು ಕೇಂದ್ರಸರ್ಕಾರದ ಮೇಲೆ ಪ್ರಭಾವ ಬೀರಿ ಹೆಚ್ಚು ಹಣವನ್ನು ಪಡೆದುಕೊಳ್ಳಬೇಕು ಎಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಖ್ಯವಾಗಿ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಆ ರೀತಿ ಮಾಡಿದರೆ ಮಾತ್ರ ಹಳ್ಳಿಗಾಡಿನ ಜನರಿಗೆ ಬಹುಮಟ್ಟಿನ ಪ್ರಯೋಜನವಾಗುತ್ತದೆ. ಮತ್ತು ತರುಣ ವಿದ್ಯಾವಂತರು ಹೆಚ್ಚಿನ ನಫೆ ಪಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ, ನಮಗೆ ಮಾತನಾಡಲು ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಉಪಾಧ್ಯಕ್ಷರೇ ಈ ಬೇಡಿಕೆಗಳಲ್ಲಿ ಮೊದಲನೆಯ ಅಂಶ ನಮ್ಮ ಸ್ಟೇಟ್ ಲೆಜಿಸ್ಲೇಚರ್ ಮತ್ತು ಎಲೆಕ್ಷನ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಶ್ರೀಮಾನ್ ರುದ್ರಪ್ಪನವರು ನಮ್ಮೆಲ್ಲರ ಗಮನವನ್ನೂ ಸೆಳೆದು ಸ್ಟೇಟ್ ಲೆಜಿಸ್ಲೇಚರ್ ಅನ್ನು ಒಂದು ಬೇರೆ ಪ್ರತ್ಯೇಕ ಡಿಪಾರ್ಟ್‌ಮೆಂಟಾಗಿ ಇರಬೇಕು ಇದು ಬಹಳ ಸಮಂಜಸವಾದದ್ದು ಎಂದು ಹೇಳಿದರು, ಅದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಪಬ್ಲಿಕ್ ಅಂಡರ ಟೇಕಿಂಗ್ ಕಮಿಟಿಯವರು ಬೇರೆ ರಾಜ್ಯಗಳಿಗೆ ಹೋದಾಗ ಅಲ್ಲಿ ಈ ಲೆಜಿಸ್ಲೇಚರ್ ಡಿಪಾರ್ಟ್‌ಮೆಂಟನ್ನು ಒಂದು ಪ್ರತ್ಯೇಕ ಡಿಪಾರ್ಟ್‌ಮೆಂಟಾಗಿ ಮಾಡಬೇಕು ಎಂದು ಹೇಳುತ್ತಿದ್ದರು. ಇದರಿಂದಾಗಿ ದಕ್ಷತೆ ಹೆಚ್ಚಾಗುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಅಧಿಕಾರಿಗಳಿಗೆ ಸಮಂಜಸವಾದ ರೀತಿಯಲ್ಲಿ ಯೋಜನಾಬದ್ಧವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ಪ್ರಮೋಷನ್ ಸಿಕ್ಕುವುದಕ್ಕೆ ಅನುಕೂಲವಾಗಬಹುದು. ಈ ಎಲ್ಲಾ ದೃಷ್ಟಿಯಿಂದ ಮೆರಿಟ್ ಆಗಿ ಮುಖ್ಯವಾಗಿ ದಕ್ಷತೆಯ ದೃಷ್ಟಿಯಿಂದ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ಅನ್ನು ಒಂದು ಪ್ರತ್ಯೇಕ ಡಿಪಾರ್ಟ್‌ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಲೆಜಿಸ್ಲೇಚರ್‌ನಲ್ಲಿ ಎರಡು ಮೂರು ಪ್ರಶ್ನೆಗಳು ಇವೆ. ಇದರಲ್ಲಿ ನಮಗೆ ಸಂಬಂಧಪಟ್ಟ ಪ್ರಶ್ನೆ ಏನೆಂದರೆ ಈಗ ಬೆಂಗಳೂರು ನಗರದಲ್ಲಿ ಶಾಸಕರಿಗೆ ಲೆಜಿಸ್ಲೇಚರ್ ಹೋಮ್ ಮಾಡಿದ್ದಾರೆ. ಈ ಸಭೆಯಲ್ಲಿ ಕೆಲವು ರಾಜಕೀಯ ಪಕ್ಷಗಳು ಇವೆ. ಈಗ ರಾಜಕೀಯ ಪಕ್ಷಗಳಲ್ಲಿ ವಿರೋಧ ಪಕ್ಷದವರಿಗೆ ಒಂದು ಆಫೀಸನ್ನು ಮಾತ್ರ ಕೊಡಲಾಗಿದೆ ಒಂದೊಂದು ಪಕ್ಷಕ್ಕೂ ಸಹ ಬೇರೆ ರೀತಿಯಲ್ಲಿ ಕುಳಿತುಕೊಂಡು ಚರ್ಚೆ ಮಾಡುವುದಕ್ಕೆ ರೆಪ್ರಜೆಂಟೇಷನ್ ತೆಗೆದುಕೊಳ್ಳುವುದಕ್ಕೆ ಬೇರೇ ಆಫೀಸುಗಳನ್ನು ಕೊಟ್ಟು ಅನುಕೂಲ ಮಾಡಿಲ್ಲ. ತಮಿಳುನಾಡಿನಲ್ಲಿ ಒಂದೊಂದು ಪಕ್ಷಕ್ಕೂ ಕೂಡ ಒಂದೊಂದು ಆಫೀಸು ಮಾಡಿದ್ದಾರೆ. ಆದ್ದರಿಂದ ಅದೇ ರೀತಿ ಇಲ್ಲಿಯೂ ಕೂಡ ಒಂದೊಂದು ಪಕ್ಷಕ್ಕೂ ಕೂಡ ಬೇರೆ ಬೇರೆ ಒಂದೊಂದು ಆಫೀಸನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಆಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತೇನೆ. ಬರೀ ಆಫೀಸು ಮಾಡಿದರೆ ಸಾಕಾಗುವುದಿಲ್ಲ. ಆ ಆಫೀಸುಗಳಲ್ಲಿ ಟೈಪಿಸ್ಟ್ಸ್ ಮತ್ತು ಫರ್ನಿಚರ್ ಕೊಡಬೇಕು. ಈಗ ನಮ್ಮಲ್ಲಿ ೫-೬ ಪಾರ್ಟಿಗಳು ಇವೆ ನಾವು ಏನಾದರೂ ಟೈಪ್ ಮಾಡಿಸಬೇಕಾದರೆ, ಅಥವಾ ಯಾವುದಾದರೂ ನಕಲನ್ನು ಮಾಡಿಸಬೇಕಾದರೆ, ಟೈಪಿಸ್ಟ್‌ಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಲೆಜಿಸ್ಲೇಚರ್ ಆಫೀಸಿನ ಟೈಪಿಂಗ್ ಪೂಲಿಗೆ ಟೈಪ್ ಮಾಡಿಸುವುದಕ್ಕೆ ಹೋಗಬೇಕಾಗುತ್ತದೆ ಅಲ್ಲಿ ನಾವು ನಿಂತುಕೊಳ್ಳಬೇಕಾಗುತ್ತದೆ. ಅಲ್ಲಿ ಟೈಪಿಸ್ಟ್‌ಗಳಿಗೂ ಸಹ ತೊಂದರೆ ಇರುತ್ತದೆ. ಕಷ್ಟವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ —ಒಂದೊಂದು ಪಕ್ಷಕ್ಕೂ ಒಂದೊಂದು ಆಫೀಸು ಮಾಡಿಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಈಗ ಶ್ರೀಮಾನ್ ಬಂಗಾರಪ್ಪನವರದೂ ಒಂದು ಪಕ್ಷ ಅದು ಕ್ರಾಂತಿಕಾರಿ ಪಕ್ಷ ಸಾರ್ವತ್ರಿಕವಾಗಿ ಈ ತತ್ವವನ್ನು ಒಪ್ಪಿಕೊಂಡರೂ ಕೂಡ ವಿರೋಧಪಕ್ಷದವರು ಎಫೆಕ್ಟೀವ್ ಆಗಿ ಕೆಲಸ ಕಾರ್ಯಗಳಲ್ಲಿ ತೊಡಗ ಬೇಕಾದರೆ ಅವರಿಗೆ ಬೇಕಾದಂತಹ ಅನುಕೂಲತೆಯನ್ನು ಕಲ್ಪಿಸಿ ಕೊಡಬೇಕು. ಈ ಸಾಮಾನ್ಯ ಸೂಚನೆಯನ್ನು ನಾನು ಒಪ್ಪುತ್ತೇನೆ. ಒಂದೊಂದು ಪಕ್ಷಕ್ಕೂ ಒಬ್ಬೊಬ್ಬರಿಗೂ ಒಂದೊಂದು ಆಫೀಸು ಮಾಡಿಕೊಡಬೇಕು ಎಂದರೆ ಬಹಳ ತೊಂದರೆಯಾಗುತ್ತದೆ

ಶ್ರೀ ಕಾಗೋಡು ತಿಮ್ಮಪ್ಪ.—ಈಗ ನಾವೇನಾದರೂ ಮಾತನಾಡುವಾಗ ಏನಾದರೂ ವಿಷಯ ಬಂದರೆ ಮಾನ್ಯ ಮಂತ್ರಿಗಳು ಅದನ್ನು ಬರೆದು ಕಳುಹಿಸಿ ಎಂದು ಹೇಳುತ್ತಾರೆ ಅದನ್ನು ಟೈಪ್ ಮಾಡಿಸಬೇಕು, ಅಥವಾ ಇನ್ನೂ ಏನಾದರೂ ನಮಗೆ ಬೇಕಾದ್ದನ್ನು ಟೈಪ್ ಮಾಡಿಸಬೇಕು, ನಕಲು ಟೈಪ್ ಮಾಡಿಸಬೇಕು ಎಂದರೆ ಕಷ್ಟವಾಗುತ್ತದೆ. ಒಬ್ಬ ಮುಂದಕ ಇದ್ದಾನೆ. ಅವನು ಯಾವಾಗ ಹೋದರೂ ಸಿಕ್ಕುವುದಿಲ್ಲ ಆದ್ದರಿಂದ ತಕ್ಷಣ ಸದ್ಯಕ್ಕೆ ಸ್ಟೆನೋಗ್ರಾಫರ್ ಮತ್ತು ಟೈಪಿಸ್ಟ್‌ಗಳನ್ನು ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್,—ಮಾನ್ಯ ಸಚಿವರು ಇದನ್ನು ಗಮನಿಸಬೇಕು. ಅವರು ಗಮನಿಸಿದರೆ ಈ ಕೆಲಸ ಆಗುತ್ತದೆ. ಒಂದೊಂದು ಪಕ್ಷ ಹುಟ್ಟಿಕೊಂಡರೆ ಕಷ್ಟ ಆಗಬಹುದು. ಪ್ರಜಾಪ್ರಭುತ್ವ ಯಂಗದಲ್ಲಿ ಪಕ್ಷಗಳು ಬರುವುದು ಸ್ವಾಭಾವಿಕ- ವಾಸ್ತವಾಂಶಗಳು ಇದ್ದರೆ ಆ ಸಮಯದಲ್ಲಿ ಸೇರುತ್ತೇವೆ. ಪಾರ್ಲಿಮೆಂಟಿನಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣ ಅವರಿಗೆ ಗೊತ್ತಿರುವ ಹಾಗೆ ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಬೇರೆ ಬೇರೆ ಆಫೀಸುಗಳನ್ನು ಮಾಡಿಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿಯೂ ಬೇರೆ ಬೇರೆ ಪಕ್ಷಕ್ಕೆ ಒಂದೊಂದು ಪಕ್ಷಕ್ಕೂ ಕೂಡ ಬೇರೆ ಬೇರೆ ಆಫೀಸುಗಳನ್ನು ಮಾಡಿಕೊಟ್ಟು ಅದಕ್ಕೆ ಬೇಕಾದ ಫರ್ನಿಚರ್ ಮತ್ತು ಟೈಪಿಸ್ಟ್ ಇವುಗಳನ್ನು ಒದಗಿಸಬೇಕು ಎಂದು ನಾನು ಹೇಳುತ್ತೇನೆ. ಆಲ್ ಇಂಡಿಯಾ ರೆಕಗ್ನೈಜ್ ಪಾರ್ಟಿಗಳಿಗೆ ಪಾರ್ಲಿಮೆಂಟ್‌ನಲ್ಲಿ ಏನು ಅನುಕೂಲ ಮಾಡಿಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿಯೂ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಈಗ ಇಲ್ಲಿ ಲೋಕಲ್ ಎಂ. ಎಲ್. ಎ. ಗಳು ಇದ್ದಾರೆ ಇವರುಗಳಿಗೆ ಆಫೀಸು ಇಲ್ಲ. ರೂಮು ಇಲ್ಲ. ಬೆಂಗಳೂರಿನಲ್ಲಿರುವ ಎಂ. ಎಲ್. ಎ. ಗಳು ಲೆಜಿಸ್ಲೇಚರ್ ಹೋಮಿನಲ್ಲಿ ರೂಮು ತೆಗೆದುಕೊಳ್ಳುವ ಹಾಗಿಲ್ಲ. ಆದ್ದರಿಂದ ಬೆಂಗಳೂರಿನ,ಎಂ. ಎ. ಗಳಿಗೂ ಬೇರೆಯವರ ಹಾಗೆ ಲೆಜಿಸ್ಲೇಚರ್ ಹೋಮಿನಲ್ಲಿ ರೂಮು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಒಬ್ಬೊಬ್ಬರಿಗೂ ಒಂದೊಂದು ರೂಮು ಕೊಡಬೇಕು ಎಂದು ನಾನು ಹೇಳುತ್ತೇನೆ. ಎರಡು ಬೆಡ್‌ಗಳನ್ನು ಹಾಕಿ ಒಂದು ರೂಮು ಮಾಡಿದರೂ ಸರಿ. ಬೆಂಗಳೂರಿನಲ್ಲಿರತಕ್ಕ ೯ ಜನ ಲೋಕಲ್ ಎಂ. ಎಲ್, ಎ. ಗಳಿಗೆ ಒಂದೊಂದು ರೂಮು ಕೊಡಬೇಕು.

ಲೆಜಿಸ್ಲೇಚರ್ ರಿಪೋರ್ಟರುಗಳು ಸ್ಪೆಷಲ್ ಪೇ ಕೊಡಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದಾರೆ ಎಂದು ನನ್ನ ಅಭಿಪ್ರಾಯ, ಅನೇಕ ಮಂತ್ರಿಗಳು ಅವರಿಗೆ ಸ್ಪೆಷಲ್ ಪೇ ಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಅದು ಆಶ್ವಾಸನೆಯಾಗಿಯೇ ಉಳಿದಿದೆಯೇ ವಿನಾ ಅದನ್ನು ಕಾರ್ಯಗತ ಮಾಡಿಲ್ಲ. ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳುನಾಡು ಲೆಜಿಸ್ಲೇಚರುಗಳಲ್ಲ ರಿಪೋರ್ಟರುಗಳಿಗೂ ಸ್ಪೆಷಲ್ ಪೇ ಕೊಡುತ್ತಿದ್ದಾರೆ ಅದೇ ರೀತಿ ನಮ್ಮ ಲೆಜಿಸ್ಲೇಚರ್ ರಿಪೋರ್ಟರುಗಳಿಗೂ ಸ್ಪೆಷಲ್ ಪೇ ಅನ್ನು ಏತಕ್ಕೆ ಕೊಡಬಾರದು ? ಅದೂ ಅಲ್ಲದೆ ನಮ್ಮ ರಾಜ್ಯದಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್ ಮತ್ತು ಬೆಂಗಳೂರು ನಗರ ಕಾರ್ಪೋರೇಷನ್‌ನಲ್ಲಿ ಅಲ್ಲಿಯ ರಿಪೋರ್ಟರುಗಳಿಗೆ ಸ್ಪೆಷಲ್ ಪೇ ಕೊಡುತ್ತಿದ್ದಾರೆ. ಅದೇ ರೀತಿ ನಮ್ಮ ಲೆಜಿಸ್ಲೇಚರ್ ರಿಪೋರ್ಟರುಗಳಿಗೂ ಏತಕ್ಕೆ ಸ್ಪೆಷಲ್ ಪೇ ಅನ್ನು ಕೊಡಬಾರದು? ಇವರಿಗೂ ಅದೇ ರೀತಿ ಸ್ಪೆಷಲ್ ಪೇ ಕೊಡಬೇಕು. ಏತಕ್ಕೆಂದರೆ ಅವರು ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಲೆಜಿಸ್ಲೇಚರಿನ ಕನ್ನಡ ಮತ್ತು ಇಂಗ್ಲೀಷ್ ಸ್ಟೆನೋಗ್ರಾಫರ್ಸ್ ಮತ್ತು ರಿಪೋರ್ಟರುಗಳಿಗೆ ಹೆಚ್ಚಿನ ಇನ್‌ಸೆಂಟೀವ್ ಕೊಡುವುದಕ್ಕೆ ಸರ್ಕಾರದವರು ಯೋಚನೆ ಮಾಡಬೇಕು ಎಂದು ಈ ಸಮಯದಲ್ಲಿ ನಾನು ಒತ್ತಾಯ ಮಾಡುತ್ತೇನೆ

ಇನ್ನೊಂದು ವಿಷಯ ಹೇಳುತ್ತೇನೆ, ಸೆಷನ್ ನಡೆಯುವಾಗ ಅವರು ಓವರ್ ಟೈಮ್ ಕೆಲಸ ಮಾಡುತ್ತಾರೆ. ಅವರು ಬೆಳಿಗ್ಗೆಯಿಂದ ಸಾಯಂಕಾಲ ೭ ೧/೨, ೮ ೧/೨ ಗಂಟೆಯವರೆಗೂ ಕೆಲಸ ಮಾಡುತ್ತಾರೆ. ಹೀಗೆ ಅವರು ೫ ೧/೨ ಗಂಟೆಯ ಮೇಲೆ ಓವರ್ ಟೈಮ್ ಕೆಲಸ ಮಾಡಿದರೆ ಅವರಿಗೆ ಒಂದು ಗಂಟೆಗೆ ೫೦ ಪೈಸಾ ಓವರ್ ಟೈಮ್ಸ್ ಅಲೋಯನ್ಸ್ ಕೊಡುತಾರಂತೆ. ಈಗಿನ ಕಾಲದಲ್ಲಿ ೫೦ ಪೈಸಾ ಏತಕ್ಕೂ ಬರುವುದಿಲ್ಲ. ಒಂದು ಲೋಟ ಕಾಫಿ ಕೂಡ ಬರುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ—ಭಿಕ್ಷುಕರೂ ಕೂಡ ಅದನ್ನು ಮುಟ್ಟುವುದಿಲ್ಲ,

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಭಿಕ್ಷುಕರೂ ಕೂಡ ಅದನ್ನು ಮುಟ್ಟುವುದಿಲ್ಲ. ಆದ್ದರಿಂದ ಈಗ ರಿಪೋರ್ಟರುಗಳಿಗೆ ಕೊಡತಕ್ಕಂಥಾ ಓವರ್ ಟೈಂಅಲೋಯನ್ಸ್ ಬಹಳ ಕಡಿಮೆ. ಅದನ್ನು ಜಾಸ್ತಿ ಮಾಡಬೇಕು. ಎಷ್ಟು ಜಾಸ್ತಿ ಮಾಡಿದರೆ ಅಷ್ಟೂ ಒಳ್ಳೆಯದು. ಒಂದು ದಿವಸಕ್ಕೆ ೫ ರೂಪಾಯಿ ಕೊಡಿ ಅಥವಾ ೧೦ ರೂಪಾಯಿ ಕೊಡಿ.

ಇನ್ನೊಂದು ವಿಷಯ ಹೇಳಬೇಕಾಗಿದೆ. ಅದು ಏನೆಂದರೆ ಕೈಗಾರಿಕೆಗಳ ವಿಷಯ, ಕೈಗಾರಿಕಾ ಇಲಾಖೆ ಬಹಳ ದೊಡ್ಡದು. ಎಲ್ಲಾ ವಿಷಯಗಳನ್ನೂ ಮಾತನಾಡುವುದಕ್ಕೆ ವೇಳೆ ಇಲ್ಲ. ಒಂದು ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಣ್ಣನವರು ಮಾತನಾಡಿದರು. ಅವರು ಹೇಳಿದ ವಿಷಯ ಬಹಳ ಗಮನಾರ್ಹವಾದುದ್ದು ಆದ್ದರಿಂದ ಅದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಅದು ಏನೆಂದರೆ ಸ್ಪನ್ ಸಿಲ್ಕ್ ವಿಷಯ. ಚೆನ್ನಪಟ್ಟಣದ ಸ್ಪನ್ ಸಿಲ್ಕ್ ಕಾರ್ಖಾನೆ ಬಹಳ ದೊಡ್ಡ ಕಾರ್ಖಾನೆ. ಏಷ್ಯಾ ಖಂಡದಲ್ಲೇ ಇದು ಒಂದು ಮಾದರಿ ಕಾರ್ಖಾನೆ. ಈ ಕಾರ್ಖಾನೆಯಲ್ಲಿ ಹಿಂದಿನ ಕಾಲದಲ್ಲಿ ಬಹಳ ಲಾಭ ಮಾಡುತ್ತಿದ್ದರು, ಇವೊತ್ತಿನ ದಿವಸ ಈ ಕಾರ್ಖಾನೆಯಲ್ಲಿ ಕೆಲವು ಕಾರಣಗಳಿಂದ ಒಂದು ಷಿಫ್ಟ್‌ನಲ್ಲಿ ಕೆಲಸ ನಡೆಯುತ್ತಿದೆ. ಹಿಂದೆ ೨-೩ ಷಿಫ್ಟ್ ಕೆಲಸ ಮಾಡುತ್ತಿದ್ದರು. ಇದಕ್ಕೆ ಕಾರಣ ವೇಸ್ಟ್ ಸಿಲ್ಕ್ ಸಿಕ್ಕುತ್ತಾ

(ಶ್ರೀ ಎಂ. ಎಸ್. ಕೃಷ್ಣನ್)

ಇಲ್ಲ ಎಂದು ಹೇಳುತ್ತಾರೆ. ಹಾಗಾದರೆ ವೇಸ್ಟ್ ಸಿಲ್ಕಿನ ಲೆಕ್ಕ ತೆಗೆಯಬೇಕು. ವೇಸ್ಟ್ ಸಿಲ್ಕ್ ಬೆಂಗಳೂರು ಮತ್ತು ಇತರ ಕಡೆಗಳಲ್ಲಿ ಸಿಕ್ಕುತ್ತದೆ. ಅದು ಸಿಕ್ಕುವುದಿಲ್ಲ ಎಂದಲ್ಲ. ಸರ್ಕಾರದವರು ವೇಸ್ಟ್ ಸಿಲ್ಕ್ ಅನ್ನು ಎಕ್ಸ್‌ಪೋರ್ಟ್ ಮಾಡುತ್ತಾರೆ. ಆದ್ದರಿಂದ ವೇಸ್ಟ್ ಸಿಲ್ಕ್ ಸಿಕ್ಕುವುದಿಲ್ಲ. ಎಕ್ಸ್‌ಪೋರ್ಟ್ ಮಾಡುವುದನ್ನು ನಿಲ್ಲಿಸಿ ಇಲ್ಲಿ ವೇಸ್ಟ್ ಸಿಲ್ಕ್ ಸಿಕ್ಕುವ ಹಾಗೆ ಮಾಡಿದರೆ ಇಲ್ಲಿ ಕಾರ್ಖಾನೆ ಸರಿಯಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ, ಲಾಭವಾದರೆ ಎಷ್ಟು ಬರುತ್ತದೆ ಎಂದು ಲೆಕ್ಕಾಚಾರ ಹಾಕಿದರೆ ವೇಸ್ಟ್ ಸಿಲ್ಕ್ ಒಂದು ಕೆ. ಜಿ ಗೆ ೧೫–೨೦ ರೂಪಾಯಿಗಳಾಗುತ್ತದೆ, ಇಲ್ಲಿಯೇ ಸ್ಪನ್ ಸಿಲ್ಕ್ ಮಾಡಿದರೆ ಒಂದು ಕೆ. ಜಿ ಗೆ ೧೬೦ ರೂಪಾಯಿಗಳಂತೆ ಮಾರಾಟ ಮಾಡಬಹುದು. ಇದರಿಂದ ಇಷ್ಟೊಂದು ಲಾಭ ಬರುವುದಕ್ಕೆ ಅವಕಾಶ ಇದೆ. ಏತಕ್ಕೋಸ್ಕರ ಇದನ್ನು ಸರ್ಕಾರದವರು ಉಪಯೋಗ ಮಾಡಿಕೊಳ್ಳುವುದಿಲ್ಲ. ಇದನ್ನು ಉಪಯೋಗ ಮಾಡಿಕೊಳ್ಳದೆ ಅನ್ಯಾಯ ಮಾಡುತ್ತಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕು. ಈ ಸ್ಪನ್ ಸಿಲ್ಕ್ ಅನ್ನು ಎಕ್ಸ್‌ಪೋರ್ಟ್ ಮಾಡುವುದನ್ನು ನಿಲ್ಲಿಸಬೇಕು. ಇದು ಈ ಚನ್ನಪಟ್ಟಣದ ಕಾರ್ಖಾನೆ ಅತ್ಯುತ್ತಮವಾದ ಕಾರ್ಖಾನೆ. ಏಷ್ಯಾಖಂಡದಲ್ಲೇ ಅತ್ಯುತ್ತಮವಾದ ಕಾರ್ಖಾನೆ. ಇದನ್ನು ಉಳಿಸಬೇಕು ಮತ್ತು ಬೆಳೆಸಬೇಕು. ಸ್ಪನ್ ಸಿಲ್ಕ್ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಇದರೊಳಗೆ ಅವ್ಯವಹಾರ ಮತ್ತು ದುರ್ವ್ಯವಹಾರ ನಡೆಯುತ್ತಿದೆ. ಈ ಬಗ್ಗೆ ನಾನು ತಮಗೆ ಒಂದು ನಿದರ್ಶನ ಕೊಡುತ್ತೇನೆ. ಮದನ್‌ಲಾಲ್ ಕಂಪೆನಿಯವರಿಗೆ ೧೨ ಸಾವಿರ ಕೆ. ಜಿ. ಸ್ಪನ್ ಸಿಲ್ಕ್ ಅನ್ನು ಒಂದು ಕೆ. ಜಿ. ಗೆ ೧೩೦ ರೂಪಾಯಿಗಳಂತೆ ಮಾರಾಟ ಮಾಡಿದ್ದಾರೆ. ೧೬೦ ರೂಪಾಯಿಗಳಿಗೆ ಮಾರಾಟವಾಗುವುದನ್ನು ೧೩೦ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ ಅವರು ಅದನ್ನು ೧೫೦ ರೂಪಾಯಿಗಳಿಗೆ ಏರಿಸಿದರು. ಆದ್ದರಿಂದ ಈ ಸ್ಪನ್ ಸಿಲ್ಕ್ ಬಗ್ಗೆ ಯಾರ ಯಾರ ಕೈವಾಡ ನಡೆದಿದೆಯೋ ಯಾರ ಕೈ ಬೆಚ್ಚಗೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಇದರಲ್ಲಿ ನಡೆಯುತಕ್ಕ ದುರ್ವ್ಯವಹಾರ, ಮತ್ತು ಅವ್ಯವಹಾರಗಳನ್ನು ನಿಲ್ಲಿಸಬೇಕು ಎಂದು ನಾನು ಹೇಳುತ್ತೇನೆ.

೫–೩೦ ಪಿ. ಎಮ್.

ಇನ್ನು ಕೈಗಾರಿಕೆಯ ಶಾಖೆ ಬಗ್ಗೆ ಹೇಳಬೇಕೆಂದರೆ ಇದರಲ್ಲಿ ಕೆಲವು ಮೂಲಭೂತವಾದ ಸಮಸ್ಯೆಗಳಿವೆ. ಈಗ ಒಂದು ಒಳ್ಳೆಯ ಅಂಶ ನಮಗೆ ಕಂಡುಬಂದಿರುವುದು ಇವತ್ತಿನ ದಿವಸ ನಮಗೆ ತಾವು ಸಂಬಂಧಪಟ್ಟ ಇಲಾಖೆಗಳ ಅನ್ಯುಯಲ್ ರಿಪೋರ್ಟ್‌ನ್ನು ಕೊಟ್ಟಿದ್ದೀರಿ. ಇದು ಹಿಂದಿದ್ದ ರಿಪೋರ್ಟ್‌ಗಳಿಂದ ಬಹಳ ಚೆನ್ನಾಗಿದೆ, ಅದಕ್ಕಾಗಿ ತಾವು ಅಭಿನಂದನಾರ್ಹರು ಅದರಲ್ಲಿ ಬಹಳ ಚೆನ್ನಾಗಿ ಅಂಕಿಅಂಶಗಳನ್ನು ತಾವು ಕೊಟ್ಟಿದ್ದೀರಿ. ಈ ರೀತಿಯಾಗಿ ಅಂಕಿಅಂಶಗಳನ್ನು ಕೊಡುವುದಕ್ಕೆ ಹಿಂದಿನ ಸರ್ಕಾರಗಳವರು ಹಿಂಜರಿಯುತ್ತಿದ್ದರು. ಅನೇಕ ಕೈಗಾರಿಕೆಗಳಲ್ಲಿ ನೇಮಕಾತಿಗಳ ಬಗ್ಗೆ ನಮ್ಮ ರಾಜ್ಯದಲ್ಲಿ ಏನು ಧೋರಣೆ ಇರಬೇಕೆಂಬ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಕೇಂದ್ರ ಸರ್ಕಾರದವರು ಹೇಳಿದ ತೆ ಚಾಚೂ ತಪ್ಪದೆ ಪರಿಪಾಲಿಸಬೇಕೆಂದು ನೀವು ಹೇಳಿದರೂ ನೀವು ಅದರ ಬಗ್ಗೆ ಒಳ್ಳೆಯ ದೃಷ್ಟಿಕೋನದಿಂದ ನೇರವಾಗಿ ಆಲೋಚನೆ ಮಾಡಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

SRI S. M. KRISHNA.—Is it not the Industrial Policy Resolution of the Government of India binding on the State Governments ?

ಶ್ರೀ ಎಂ. ಎಸ್. ಕೃಷ್ಣನ್—ಇಂಡಸ್ಟ್ರಿಯಲ್ ಪಾಲಿಸಿ ರಿಸಲ್ಯೂಷನ್ ಕೇಂದ್ರ ಸರ್ಕಾರದ್ದು ದನ್ನು ಜಾರಿಗೆ ತರಬಾರದೆಂದು ನಾನು ಹೇಳುವುದಿಲ್ಲ. ತರಬೇಕು. ಆದರೆ it must be within the frame work of the Industrial Policy Resolution if it helps the State and the Industry. I know the hon'ble Minister is a dynamic Minister. He must see that more dynamic policies are introduced. That is what I am saying.

ಇದರಲ್ಲಿ ಒಂದೆರಡು ಅಂಶಗಳನ್ನು ಹೇಳಿದ್ದಾರೆ. ಇವತ್ತು ಈ ಒಂದು ವರದಿಯಲ್ಲಿ ಕೈಗಾರಿಕೆಗಳ ಪಟ್ಟಿಯೊಂದನ್ನು ಕೊಟ್ಟಿದ್ದಾರೆ. ನಮಗೆ ಇದರಿಂದೇನು ಗೊತ್ತಾಗುತ್ತಿದೆಯೆಂದರೆ ಹೊಸ ಕೈಗಾರಿಕೆಗಳು ಕೆಲವು ಇನ್ನೂ ಬರುತ್ತಾ, ಇವೆ ಇಲ್ಲಿಯೂ ಸಹ ಖಾಸಗೀ ಬಂಡವಾಳಗಾರರ ಕೈಗಾರಿಕೆಗಳು ಬರುತ್ತವೆಂದು ತಿಳಿಯುತ್ತವೆ. ಈ ದೇಶದಲ್ಲಿ ಈಗಿರತಕ್ಕ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ ನಿಜವಾಗಿಯೂ ನಮ್ಮ ದೇಶದಲ್ಲಿ ನಮ್ಮ ಕಾಲಿನ ಮೇಲೆಯೇ ನಿಲ್ಲಬೇಕೆಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಬರ

ಬೇಕು. ಆದನ್ನು ಪದೇಪದೇ ನಾವಿಲ್ಲಿ ಒತ್ತಾಯ ಮಾಡಿದ್ದೂ ಉಂಟು. ಅದಕ್ಕೋಸ್ಕರವೇ ಇಷ್ಟು ಕಾರ್ಖಾನೆಗಳನ್ನು ತೆಗೆದುಕೊಂಡಿದ್ದಾರೆಂದು ನಾನು ತಿಳಿದಿದ್ದೇನೆ. ಸಾರ್ವಜನಿಕ ಕ್ಷೇತ್ರಗಳು ಅಂದರೆ, ರೆವ್ಕೊ ಮತ್ತು ಎನ್. ಜಿ. ಎಫ್. ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಕೆಲವರು ಮಾತನಾಡುತ್ತಾ ಹೊಸದಾಗಿ ಬಂದಿರುವ ಕೈಗಾರಿಕೆಗಳು ಯಾವುದೂ ಕಾಣಲಿಲ್ಲವೆಂಬುದಾಗಿ ಹೇಳಿದರು. ಅದಕ್ಕೋಸ್ಕರ ಇವರು ಪ್ರೈವೇಟ್ ಸೆಕ್ಟರ್‌ನಲ್ಲಿ ಬೇರೆ, ಪಬ್ಲಿಕ್ ಸೆಕ್ಟರ್‌ನಲ್ಲಿ ಬೇರೆ ಏಕೆ ಕಾರ್ಖಾನೆಗಳನ್ನು ಮಾಡಬಾರದು? ಅದಕ್ಕೆ ಉತ್ತರ ಏನು ಹೇಳುತ್ತಾರೆಂದರೆ ಜಾಯಿಂಟ್ ವೆಂಚರ್ ಮಾಡುತ್ತೇವೆಂದು ಹೇಳುತ್ತಾರೆ. ಇದರ ಅರ್ಥವೇನು ? ತಾವು ಬಂಡವಾಳ ೨೬ ಅಥವಾ ೨೭ ಪರ್ಸೆಂಟ್ ಹಾಕುತ್ತೀರಿ. ಕೊನೆಯಲ್ಲಿ ಸೇಕಡ ೧೦ ಪರ್ಸೆಂಟ್ ಮಾತ್ರ ಲಾಭ ಬರುತ್ತದೆ. KSIIDC's Capital involved in this project is 3,300 lakhs and the envisaged participation of the project is Rs. 34 lakhs.

ಅಂದರೆ ಸೇಕಡ ೧೦ರಷ್ಟು ಲಾಭ ಆಯಿತು. ಈಗ ಖಾಸಗೀ ಮಾಲೀಕರನ್ನು ಜಾಸ್ತಿಯಾಗಿ ಪಡೆದು ಅವರಿಗೆ ಲಾಭ ಮಾಡಿಕೊಟ್ಟಿದ್ದೀರಿ. ಅದಕ್ಕೆ ನೀವೂ ಸಹ ಋಣವಾಗುತ್ತಿದ್ದೀರಿ. ಈ ಒಂದು ಜಾಯಿಂಟ್ ವೆಂಚರ್ ಬಗ್ಗೆ ಟಾಟಾ ಮುಂತಾದವರು ಒಂದು ಮೆಮೊರ್ಯಾಂಡಂ ಕೊಟ್ಟರು. ಕೇಂದ್ರ ಸರ್ಕಾರದವರು ಅದನ್ನು ಒಪ್ಪಿಕೊಂಡರೆ ನೀವು ಜಾರಿಗೆ ಇಲ್ಲಿ ತರುತ್ತೀರಿ. ನಮ್ಮ ದೇಶದಲ್ಲಿ ಗುತ್ತಿಗೆದಾರರಿಂದ ಹಾಗೂ ಶ್ರೀಮಂತರಿಂದ ಅನೇಕ ಕೈಗಾರಿಕೋದ್ಯಮಗಳನ್ನು ಬೆಳೆಸುವುದಕ್ಕೆ ಸರ್ಕಾರದ ಹಣವನ್ನು ಉಪಯೋಗಿಸುತ್ತಿದ್ದೀರಿ. ಹಣವನ್ನು ನಮಗೆ ಸರ್ಕಾರ ಕೊಡಲಿ, ನಾವು ಲಾಭಮಾಡುತ್ತೇವೆಂದು ಹೇಳುವ ಒಂದು ಪರಿಸ್ಥಿತಿ ಈಗ ಬಂದಿದೆ. ಅವರಿಗೆ ಕುಮುಕ್ಕು ಕೊಡುವ ರೀತಿಯಲ್ಲಿ ನಿಮ್ಮ ಧೋರಣೆ, ನಿಮ್ಮ ಪಾಲಿಸಿ ಬದಲಾವಣೆ ಇರಬಾರದು. ನಮ್ಮ ಕಾಲಿನ ಮೇಲೆ ನಾವು ನಿಲ್ಲಬೇಕು, ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಹೆಚ್ಚಿಗೆ ಬೆಳೆಯಬೇಕೆಂಬ ಧೋರಣೆಗೆ ತಕ್ಕ ಹಾಗೆ ಸರ್ಕಾರ ಈಗ ನಡೆಯುತ್ತಾ ಇಲ್ಲ. ಆ ಒಂದು ಧೋರಣೆಯನ್ನು ಅನುಸರಿಸುತ್ತಾ ಇಲ್ಲ. ಅದನ್ನು ಏಕೆ ಅನುಸರಿಸುತ್ತಾ ಇಲ್ಲವೆಂಬುದನ್ನು ಸರ್ಕಾರ ಸ್ಪಷ್ಟವಾಗಿ ಉತ್ತರ ಕೊಡುವಾಗ ಹೇಳಬೇಕು. ಅದನ್ನು ನಿಜವಾಗಿಯೂ ಸರ್ಕಾರ ಅನುಸರಿಸಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯ. ಅದರ ಜೊತೆಗೆ ಇನ್ನೊಂದು ಅಂಶ, ಪಂಜಾಬ್, ಹರಿಯಾನ, ಪಶ್ಚಿಮ ಬಂಗಾಳದಲ್ಲಿ ಬಹಳ ವ್ಯತ್ಯಾಸ ಇದೆ. ಅಲ್ಲಿರುವ ಸರ್ಕಾರಗಳು ಮುಟ್ಟಿದರೆ ಮುನಿ ಎಂಬಂತೆ ಇರುತ್ತವೆ. ಅದಕ್ಕೆ ಇಂಗ್ಲೀಷ್‌ನಲ್ಲಿ ಟಚ್ ಮಿ ನಾಟ್ ಪ್ಲಾಂಟ್ ಎಂದು ಹೇಳುತ್ತಾರೆ ಆ ರೀತಿಯಾಗಿ ಅಲ್ಲಿರುತ್ತಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಅಲ್ಲಿ ಯಂತ್ರಗಳಿಂದಲೂ ಸಹ ಬಹಳವಾಗಿ ಮುಂದುವರಿಯುತ್ತಾರೆ. ಅಲ್ಲಿ ಬರೀ ಸಮತಾವಾದ ಸಮಾಜ ರಚನೆಯ ನೀತಿಯನ್ನು ಅನುಸರಿಸಬೇಕೆಂದು ಇಟ್ಟುಕೊಂಡಿಲ್ಲ ನಿಮ್ಮ ಧೋರಣೆ ಬರೀ ಸಮತಾವಾದ ಸಮಾಜ ರಚನೆಯ ನೀತಿಯನ್ನು ಇಟ್ಟುಕೊಂಡಿದ್ದರೂ ರಾಷ್ಟ್ರದ ಜೊತೆಗೆ ಅವರ ಹಾಗೆ ಯಾವ ಸಂಪರ್ಕವನ್ನೂ ನೀವು ಅಷ್ಟಾಗಿ ಬೆಳೆಸಿಲ್ಲ ಸೋಷಿಯಾಲಿಸ್ಟ್ ಕಂಟ್ರೀಸ್‌ನಲ್ಲಿ ಕಡಿಮೆ ಇಂಟರೆಸ್ಟ್‌ನಿಂದ ಟೆಕ್ನಿಕಲ್ ನೋಹೌನ್ನು ಕೊಟ್ಟಿದ್ದರಿಂದ ಅಲ್ಲಿ ಅನೇಕ ಕೈಗಾರಿಕೆಗಳು ಹಾಗೂ ಕೀ ಪ್ರಾಜೆಕ್ಟ್ಸ್ ಬಹಳವಾಗಿ ಮುಂದಿವೆ. ಈಗ ಟೈರ್ ಪ್ಲಾಂಟ್ ಚೆಕೊಸ್ಲೊವಾಕಿಯಾದ ಕೊಲ್ಯಾಬೊರೇಷನ್ನಿನಿಂದ ಮೈಸೂರಿಗೆ ಬರುತ್ತಿದೆ. ಅದು ಬಿಟ್ಟರೆ ಬೇರೆ ಯಾವುದೂ ಕಂಡುಬರುತ್ತಾ ಇಲ್ಲ. ಸೋವಿಯಟ್ ರಷ್ಯದಿಂದ ಭಾರತ ದೇಶಕ್ಕೆ ೨೦ ವರ್ಷಗಳ ಒಪ್ಪಂದವಾದ ಮೇಲೆ ನಮ್ಮ ರಾಜ್ಯದಲ್ಲಿ ಯಾವ ರೀತಿ ಅವರಿಂದ ಉಪಯೋಗ ಮಾಡಿಕೊಳ್ಳಬೇಕೆಂಬುದು ಮುಖ್ಯ.

ಶ್ರೀ ಎಸ್. ಎಂ. ಕೃಷ್ಣ.—ಒಂದು ಟ್ರಾಕ್ಟರ್ ಕಂಪನಿ ಈಗ ರಷ್ಯನ್ ಕೊಲ್ಯಾಬೊರೇಷನ್ನನ್ನು ಕೇಳುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕಮ್ಯೂನಿಸ್ಟ್ ಆಗಿರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

S. M- KRISHNA.—I enterely agree with the hon Member that it should not be one-sided. Technology has been growing in every and contry it should grow. I do not attribute any motive at all.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಆ ದೃಷ್ಟಿಯಿಂದ ಮಾತನಾಡುತ್ತಾ ಇಲ್ಲ. The contents of the Socialist countries aid is different from the aid of capitalist countries, both in the matter of repayment, royalty, etc.,

(ಶ್ರೀ ಎಂ. ಎಸ್, ಕೃಷ್ಣನ್)

ಸೋವಿಯಟ್ ರಷ್ಯಾದಿಂದ ಭಾರತದೇಶಕ್ಕೆ ಆಗಿರುವ ೨೦ ವರ್ಷಗಳ ಒಪ್ಪಂದದ ಪ್ರಕಾರ ನಮ್ಮ ರಾಜ್ಯಕ್ಕೆ ಕೈಗಾರಿಕೆವಿಷಯಗಳನ್ನು ಯಾವ ರೀತಿಯಾಗಿ ತೆಗೆದುಕೊಂಡು ಬರಬೇಕೆಂಬುದನ್ನು ಆಳವಾಗಿ ನಾವು ಯೋಚನೆ ಮಾಡಬೇಕು. ನನ್ನ ಮಿತ್ರರು ಅನೇಕರು ಇದರ ಬಗ್ಗೆ ವಿಚಾರ ವಿನಿಮಯ ನಡೆಸಿ ಅನೇಕ ಅಂಶ ಗಳನ್ನು ಹೇಳಿದರು. ಅವನ್ನೆಲ್ಲಾ ತಾವು ಯೋಚನೆ ಮಾಡಬೇಕು.

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ವಿಷಯ. ಇದು ಬಹಳ ಮುಖ್ಯವಾದುದು ಇದು ನೇರವಾಗಿ ಮಾನ್ಯ ಶ್ರೀ ಕೃಷ್ಣ ಅವರಿಗೆ ಸಂಬಂಧಪಟ್ಟುದಲ್ಲ, ಈ ಒಂದು ಇಲಾಖೆಯನ್ನು ಈಗ ಮಾನ್ಯ ಶ್ರೀ ಕೌಜಲಗಿ ಯವರಿಗೆ ಕೊಟ್ಟಿದ್ದಾರೆ. ಆ ಇಲಾಖೆ ತಮ್ಮ ಕೈಕೆಳಗಿಲ್ಲ. ಅದನ್ನು ಬೈಫರ್‌ಕೇಟ್ ಮಾಡಿ ಇಂಡಿಪೆಂಡೆಂಟ್ ಚಾರ್ಜ್ ಆಗಿ ಒಬ್ಬ ಮಂತ್ರಿಗೆ ಕೊಟ್ಟಿದ್ದಾರೆ. ಆ ರೀತಿ ಇಂಡಿಪೇಂಡೆಂಟಾಗಿ ಕೊಟ್ಟಿರುವುದು ಸರಿ. ಅಡ್ಮಿನಿಸ್ಟ್ರೇಟರ್ ವಿಷಯ ಮಾತ್ರ ಸರಿಯಿಲ್ಲ. ಈ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಲಂಚಗುಳಿತನ, ಬೇರೆ ಇನ್ನಾವ ಇಲಾಖೆಯಲ್ಲಿಯೂ ನಡೆಯುತ್ತಾ ಇಲ್ಲ. ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಯಾರೇ ಮಂತ್ರಿಯಾಗಿರಲಿ ಅವರಿಗೆ ಅಲ್ಲಿ ಮರ್ಯಾದೆ ತರುವ ಹಾಗೆ ಇಲ್ಲ. ಇನ್ನು ರಾಮೆಟೀರಿಯಲ್ಸ್ ಸಾಕಷ್ಟು ಸಿಗುವುದಿಲ್ಲ. ಒಂದೊಂದು ಸಾರಿ ಸಾವಿರಾರು ರೂಪಾಯಿಗಳನ್ನು ಕೊಟ್ಟರೂ ಸಹ ಅವು ಸಿಗುತ್ತಾ ಇಲ್ಲ ನಾನು ಈಗ ಒಂದು ನಿದರ್ಶನವನ್ನು ಕೊಡುತ್ತೇನೆ. ೧೯೬೪ನೇ ಜನವರಿಯಲ್ಲಿ ೨ ಸಾವಿರ ಸ್ಟೇನ್‌ಲೆಸ್ ಸ್ಟೀಲ್‌ಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಎಂಟೈಟಲ್ ಮೆಂಟ್ಸ್‌ಗೆ ಆರ್ಡರ್ ಮಾಡಿರುವುದು ಆಗಿದೆ ಆ ರೀತಿಯಲ್ಲಿ ಬ್ಲಾಕ್‌ಮಾರ್ಕೆಟ್ ಮಾಡುತ್ತಾರೆ ಇದನ್ನು ಅಕ್ಕಾ ಚಾರ ಹಾಕಬೇಕು, ಅವನ ಎಂಟೈಟಲ್‌ಮೆಂಟ್ಸ್ ನೋಡಬೇಕು, ಎಂದು ಡೈರೆಕ್ಟರವರ ಡೈರೆಕ್ಟಿವ್ ಇದ್ದರೂ ಕೂಡ ಜಾಯಿಂಟ್ ಡೈರೆಕ್ಟರ್ ಅವರ ಡೈರೆಕ್ಟಿವ್‌ಗೆ ಧಿಕ್ಕರಿಸಿ ಎರಡು ಸಾವಿರ ಜನಗಳಿಗೆ ಎಂಟೈಟಲ್ ಮೆಂಟ್‌ಗೆ ಕೊಟ್ಟಿದ್ದಾರೆ. ಒಬ್ಬೊಬ್ಬರಿಂದ ಅದನ್ನು ಕೊಡುವುದಕ್ಕೆ ಮುಂಚೆಯೇ ೫೦೦ ರೂಪಾಯಿಗಳಿಂದ ೫ ಸಾವಿರ ರೂಪಾಯಿಗಳವರೆಗೆ ಕೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಕೇಳಿದ್ದಾರೋ, ಕೊಟ್ಟಿದ್ದಾರೋ ?

ಶ್ರೀ ಎಂ. ಎಸ್. ಕೃಷ್ಣನ್.—ಕೇಳಿದ್ದಾರೆ, ಕೊಟ್ಟಿದ್ದಾರೆ, ತೆಗೆದುಕೊಂಡಿದ್ದಾರೆ. ಆ ಹಣ ಹೀಗೆ ವಿತ ರಣೆಯಾಗಿದೆ, ನನಗೆ ಗೊತ್ತಿರುವ ಹಾಗೆ ಅಲ್ಲಿ ಆ ರೀತಿಯಾಗಿ ಮಾಡುತ್ತಿದ್ದಾರೆ. ಈ ದೂರು ಮಾನ್ಯ ಶ್ರೀ ಕೌಜಲಗಿಯವರಿಗೂ ಹೋಯಿತು. ಮಂತ್ರಿಗಳಿಂದ ಮಾನ್ಯ ಶ್ರೀ ಕೌಜಲಗಿಯವರು ಆಗ ಏನು ಮಾಡು ತ್ತಿದ್ದರೋ ಗೊತ್ತಿಲ್ಲ. ಅದನ್ನು ಒಪ್ಪಿಕೊಂಡರೋ ಏನೋ ಅದೂ ಕೂಡ ಗೊತ್ತಿಲ್ಲ. ಅನಂತರ ಮಾನ್ಯ ಶ್ರೀ ಕೌಜಲಗಿಯವರು ಡಿಪಾರ್ಟ್‌ಮೆಂಟ್ ಡೈರೆಕ್ಟರನ್ನು ಕರೆಸಿ, ಈ ವಿಚಾರವಾಗಿ ಮಾತನಾಡಿ, ಡೈರೆ ಕ್ಟರ್ ಅವರು ಬೇಡವೆಂದು ಹೇಳಿದರೂ ಜಾಯಿಂಟ್ ಡೈರೆಕ್ಟರ್ ಏಕೆ ಆ ರೀತಿ ಮಾಡಿದರು ಎಂಬುದಾಗಿ ಕೇಳಿದರು. ಈ ವಿಚಾರವನ್ನು ಸೆಕ್ರೆಟರಿಯವರಿಗೂ ಹೇಳಿದರೂ. ಆದರೆ ಇದುವರೆಗೆ ಅದರ ಬಗ್ಗೆ ಏನೂ ತೀರ್ಮಾನವಾಗಲಿಲ್ಲ. ಅದಕ್ಕೆ ಬದಲು ಎಂಟೈಟಲ್‌ಮೆಂಟ್ಸ್ ಕೊಟ್ಟಿದ್ದೇನೋ ಆಗಿದೆ. ಅದರಲ್ಲಿ ಬ್ಲಾಕ್ ಮಾರ್ಕೆಟ್ ಸಿಕ್ಕಾಪಟ್ಟೆ ಆಗಿದೆ. ಅಂತೂ ಅವರು ದುಡ್ಡು ಮಾಡಿಕೊಂಡಿದ್ದಾರೆ. ಅವರು ಐದು ಸಾವಿರವಲ್ಲ ಹತ್ತು ಸಾವಿರ ಬೇಕಾದರೂ ಕೊಡುತ್ತಾರೆ. ಕಾರಣ ಅವರು ಎಷ್ಟು ಕೊಡು ತ್ತಾರೋ ಅದಕ್ಕೆ ನೂರರಷ್ಟನ್ನು ಅವರು ಸಂಪಾದನೆ ಮಾಡಿಕೊಳ್ಳುತ್ತೇವೆಂಬ ಭರವಸೆ ಅವರಿಗಿದೆ. ಅಲ್ಲಿರತಕ್ಕ ಅಧಿಕಾರಿಗಳಲ್ಲೂ ಕೂಡ ಬೇಕಾದಷ್ಟು ದುರಭ್ಯಾಸಗಳು—ಭ್ರಷ್ಟಾಚಾರ ಇದೆ. ಇದಕ್ಕೆ ಕಾರಣ ತಾವು, ತಮ್ಮ ಇಲಾಖೆ. ಇದೆಲ್ಲಾ ಗೊತ್ತಾದ ಮೇಲೆ ಆ ಜಾಯಿಂಟ್ ಡೈರೆಕ್ಟರ್ ಲಿಂಗರಾಜ ಅರಸರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿದರು. ಹಾಗೆ ವರ್ಗ ಮಾಡಿದ್ದನ್ನು ಶ್ರೀ ಲಿಂಗರಾಜ ಅರಸರು ವಿರೋ ಧಿಸಿ ತಾನು ವರ್ಗಮಾಡಿದ ಸ್ಥಳಕ್ಕೆ ಹೋಗುವುದಿಲ್ಲವೆಂದು ವರ್ಗದ ಆರ್ಡರನ್ನು ಉಲ್ಲಂಘನೆ ಮಾಡಿ ಇದ್ದಲ್ಲೇ ಕುಳಿತುಕೊಂಡರು. ಅನಂತರ ಕೆಲವು ದಿನಗಳ ಮೇಲೆ ಧರ್ಮೇಂದ್ರರಾವ್ ಅನ್ನತಕ್ಕವರನ್ನು ಈ ಲಿಂಗರಾಜ ಅರಸರ ಸ್ಥಳಕ್ಕೆ ಹಾಕಿ, ಲಿಂಗರಾಜ ಅರಸರನ್ನು ಬೇರೆ ಒಂದು ಸ್ಟೋರ್‌ಗೆ ವರ್ಗಮಾಡಿದರು ಧರ್ಮೇಂದ್ರರಾವ್ ಅವರನ್ನು ವರ್ಗಮಾಡಿದಾಗ ಅವರಿಗೆ ಹೇಳಿದ್ದರಂತೆ ಆ ಲಿಂಗರಾಜ ಅರಸರು ಸಾಮಾನ್ಯ ವಾಗಿ ಆಫೀಸಿಗೆ ೧೦ ಗಂಟೆಗೆ ಬರುತ್ತಾರೆ, ನೀವೂ ಕೂಡ ೧೦ ಗಂಟೆಗೇ ಆಫೀಸಿಗೆ ಹೋದರೆ ಅವರು ರಿಲೀ ವಾಗುವುದಕ್ಕೆ ಒಪ್ಪುವುದಿಲ್ಲ. ಆದ್ದುದರಿಂದ ನೀವು ಆಫೀಸಿಗೆ ೯ ಗಂಟೆಗೇ ಹೋಗಿ ಆ ಕುರ್ಚಿಯನ್ನು ಹಿಡಿದು ಕುಳಿತು ಬಿಟ್ಟರೆ ಆಗ ಅವರು ರಿಲೀವಾಗಲೇಬೇಕು ರಿಲೀವಾಗುತ್ತಾರೆ ಎಂದು ಹೇಳಿ ಕಳುಹಿಸಿದ ರಂತೆ. ಆದರೆ ಆ ದಿವಸ ಲಿಂಗರಾಜ ಅರಸರು ಮಾಮೂಲಿನಂತೆ ೧೦ ಗಂಟೆಗೆ ಆಫೀಸಿಗೆ ಹೋಗದೆ ಬೆಳಗಿನ ೮ ಗಂಟೆಗೇ ಹೋಗಿ ಆಗಲೇ ಕುರ್ಚಿಯಲ್ಲಿ ಕುಳಿತಿದ್ದ ಕಾರಣ ಧರ್ಮೇಂದ್ರರಾವ್ ಅವರು ಬೆಳಿಗ್ಗೆ ೯ ಗಂಟೆಗೇ ಆಫೀಸಿಗೆ ಬಂದಾಗ್ಯೂ ಛಾರ್ಜನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲವಂತೆ. ಇಷ್ಟೆಲ್ಲ ಅದನಂತರ

ಕಡೆಗೆ ಲಿಂಗರಾಜ ಅರಸರನ್ನು ಫಿಜಿಕಲ್ಲಾಗಿ ಎಳೆದು ಹೊರಗೆಹಾಕಬೇಕಾಗಿ ಬಂದಿತಂತೆ. ಆದರೆ ಲಿಂಗರಾಜ ಅರಸರಾಗಲೀ ಒಬ್ಬ ಜಾಯಿಂಟ್ ಡೈರೆಕ್ಟರು ಅಥವಾ ಹೀಗೆ ಮಾಡಿದರಂತೆ. ಹಾಗೆ ಅವರು ಅಲ್ಲಿ ಆ ಕುರ್ಚಿಗೆ ಅಂಟಿಕೊಂಡು ಕುಳಿತುಕೊಳ್ಳುವುದಕ್ಕೇನೋ ರಹಸ್ಯ ಕಾರಣವಿರಬೇಕು ಸಕ್ಕರೆ ಇದ್ದ ಕಡೆ ಯಲ್ಲವೇ ನೊಣಗಳು ಮುತ್ತುವುದು ? ಮಾನ್ಯ ಸಚಿವರು ಈ ಕಾರ್ಯದಲ್ಲಿ ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಇಲಾಖೆಗೆ ಗೌರವ ಉಳಿಯುವುದಿಲ್ಲ. ಇನ್ನು ಈ ವರದಿಯ ಪುಟ ಆರರಲ್ಲಿ ಹೀಗೆ ಹೇಳಿದ್ದಾರೆ:—

"On behalf of S.S.I. units in the State, the Karnataka Small Industries Corporation has participated in several International Exhibitions such as Ghana International Fair (Ghana-Accra) Leipzig Spring Fair, Leipzig (GDR) Lagos International Fair, Lagos (Nigeria), India Trade Exhibion, Kuwait, Tripoli International Trade Fair Tripoli (Libya), Indian trade Exhibition, Singapur, Ideal Home Exhibition, London, (UK) Wholly Indian Exhibition, Caracar (Venezuela), Millan International Trade Fair, Milan (Italy) and 47th Brussels International Trade Fair, Bruzzels (Belgium).

ಸ್ವಾಮಿ ಈ ಲಿಸ್ಟನ್ನು ಯಾರಾದರೂ ಓದಿದರೆ ಘಾಬರಿಯಾಗಿಬಿಡುತ್ತಾರೆ. ಆದರೆ ಇದರ ನಿಜಾಂಶ ಏನೆಂದರೆ ಮ್ಯಾನೇಜಿಂಗ್ ಡೈರೆಕ್ಟರ್ ಪಟ್ನಾಯ್ಕರವರು ಇಡೀ ಪ್ರಪಂಚವನ್ನೇ ಸುತ್ತಿಕೊಂಡು ಬಂದವರು ಎಂದು. ಹಾಗೆ ಅವರು ಭೂಪ್ರದಕ್ಷಿಣೆಯನ್ನು ಮಾಡಿಕೊಂಡು ಬಂದುದರಿಂದ ರಾಜ್ಯದ ಸಣ್ಣ ಕೈಗಾರಿಕೆ ಗಳಿಗೆಷ್ಟರಮಟ್ಟಿಗೆ ಅನುಕೂಲವಾಗಿದೆ, ಅವುಗಳ ಅವುಗಳ ಅಭಿವೃದ್ಧಿಯಲ್ಲಿ ಎಷ್ಟು ಜಾಸ್ತಿಯಾಗಿದೆ ಎಂಬು ದನ್ನು ಮಾನ್ಯ ಸಚಿವರು ಉತ್ತರಕೊಡುವಾಗ ಇದನು ತಿಳಿಸಬೇಕು. ಹಾಗೆ ಆ ಪಟ್ನಾಯ್ಕರವರು ಪ್ರಪಂಚ ಪ್ರದಕ್ಷಿಣೆ ಹೋಗಿದ್ದ ಕಾಲದಲ್ಲಿ ಅಲ್ಲಿ ಸಚಿವರಾಗಿರತಕ್ಕ ಶ್ರೀ ಕೌಜಲ್ಗಿಯವರು ಮ್ಯಾನೇಜಿಂಗ್ ಡೈರೆಕ್ಟರಾಗಿ ಆಕ್ಟ್ ಮಾಡಿದ್ದಾರೆ.

SRI V. S. KOUJALGI.—I have not acted as the Managing Director.

SRI M. S. KRISHNAN. If he has not acted as the Managing Director, let him place records on the Table of the hous so that we could know who has issued the allotment orders whether it is the Joint Director or the Minister concerned who has issued so many allotment orders. That is why I am demanding that details may pleased befor the House about the entire question of 2,000 allotments of stainless sleel as well as why in which the Minister has conducted himself or the person who has acted during the period of the absence of the Director.

Another instance, I would like to bring to your notice. It is very difficult to get the allotment of E. C. grade alluminium. E.C. grade alluminium has been allotted to two blackmarketeers. ಇವರು ಇ. ಸಿ. ಗ್ರೇಡ್ ಅಲ್ಯೂಮಿನಿಯಂ ಅನ್ನು ಇಬ್ಬರಿಗೆ ಅಲಾಟ್ ಮಾಡಿದರು. ಆ ಇಬ್ಬರು ಯಾರು ಎಂದರೆ ಬ್ಲಾಕ್ ಮಾರ್ಕೆಟ್ಟಿಗೆ ಹೆಸರಾದಂಥವರು. ಒಬ್ಬರು ಪ್ರಕಾಶ್ ಕಂಡಕ್ಟರ್ ಎಂದು ಇನ್ನೊಬರು ಭಾರತ್ ಕಂಡಕ್ಟರ್ ಎಂದು. ಇವರಿಬ್ಬರೂ ಬ್ಲಾಕ್‌ಮಾರ್ಕೆಟಿಯರ್ಸ್ ಎಂಬುದನ್ನು ತಿಳಿದೂ ತಿಳಿದೂ ಅವರಿಗೇ ಆ ಅಲ್ಯೂಮಿನಿಯಂ ಅನ್ನು ಅಲಾಟ್‌ಮಾಡಿದ್ದಾರೆ. ಆದರೆ ಹಾಗೆ ಅಲಾಟ್‌ಮಾಡಿದ್ದು ಸರಿಯಲ್ಲ ಎಂದು ಡೈರೆಕ್ಟರು ಅದನ್ನು ಕ್ಯಾನಸಲ್ ಮಾಡಿದರು. ಹಾಗೆ ಡೈರೆಕ್ಟರು ಕ್ಯಾನಸಲ್ ಮಾಡಿದ್ದನ್ನು ಅಡಿ ಷನಲ್ ಡೈರೆಕ್ಟರು ಮತ್ತೆ ರೆಸ್ಟೋರ್ ಮಾಡಿದರು. ಅವರು ಏತಕ್ಕೆ ಹಾಗೆ ರೆಸ್ಟಾರ್ ಮಾಡಿದರು ? ಅವರು ದುಡ್ಡು ಕೊಟ್ಟರೆಂದು ರೆಸ್ಟೋರ್ ಮಾಡಿದರೇ ? ಹಾಗೆ ರಿಸ್ಟೋರ್ ಮಾಡಬೇಕಾಗಿದ್ದರೆ ಅವ ರೇನೋ ಕಾಂಗ್ರೆಸ್ ಮಾಡಿರಬೇಕಲ್ಲವೇ ? ಅಂತೂ ಈ ವ್ಯವಹಾರದಲ್ಲಿ ತುಂಬಾ ಅನುಮಾನ ಉಂಟಾಗಿದೆ. These people have been blacklisted for the wrongful use of steel and cement quota. The Regional Iron and Steel Controller initiated action against these people. ಅವರು ಕೂಡ ಇದೇ ರೀತಿ ಕೋಟಾವನ್ನು ಕ್ಯಾನಸಲ್

(SRI M. S. KRISHNAN)

ಮಾಡಿದರು. ತೋದರ್‌ಮಲ್ ಅಂಡ್ ಭಂಡಾರಿ ಅನ್ನೋರ್ತ್ಯವರಿಗೆ ಇ. ಸಿ. ಗ್ರೇಡ್ ಅಲ್ಯೂಮಿನಂ ಅನ್ನು ಅಲಾಟ್‌ಮಾಡಿದ್ದಾರೆ. ಇದಕ್ಕೆ ಯಾರು ಕಾರಣಕರ್ತರು ? ಅವರ ಮೇಲೆ ಸರಿಯಾದ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಅಲ್ಲಿ ಆಡಳಿತ ಇಬ್ಭಾಗವಾಗಿದೆ. The Director of Industries and Commerce seems to have been vertically divided.

ಇನ್ನು ಸರ್ಕಾರದ ಆಡಳಿತದಲ್ಲಿರತಕ್ಕ ಕೈಗಾರಿಕೆಗಳ ವಿಚಾರ ತೆಗೆದುಕೊಳ್ಳೋಣ : ಇಲ್ಲಿ ಒಂದು ದೊಡ್ಡ ಲಿಸ್ಟನ್ನೇ ಕೊಟ್ಟಿದ್ದಾರೆ. ಇವುಗಳಲ್ಲಿ ಸೋಪ್ ಫ್ಯಾಕ್ಟರಿ ಮತ್ತು ಗಂಧದ ಎಣ್ಣೆ ಫ್ಯಾಕ್ಟರಿಗಳೆರಡನ್ನು ಬಿಟ್ಟರೆ ಉಳಿದೆಲ್ಲಾ ಫ್ಯಾಕ್ಟರಿಗಳೂ ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಮಾನ್ಯ ಕೃಷ್ಣಾ ಅವರು ಮಂತ್ರಿಗಳಾಗಿ ಬಂದಮೇಲೆ ಈ ಕೈಗಾರಿಕೆಗಳಿಗೆ ಒಂದು ನವಚೈತನ್ಯವನ್ನು ತಂದು ತುಂಬುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಅಂಥಾದ್ದೇನೂ ನಡೆಯಲಿಲ್ಲ. ಎಲ್ಲವೂ ಈಗಲೂ ನಷ್ಟದಲ್ಲೇ ಕೆಲಸಮಾಡುತ್ತಿವೆ. ಈ ರೇಕೋ ಫ್ಯಾಕ್ಟರಿಯ ವಿಚಾರದಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯವರು ಒಂದು ವರದಿಯನ್ನು ಕೊಟ್ಟಮೇಲೆ ಇದಕ್ಕೆ ಒಂದು ಕೋಟಿರೂಪಾಯಿಗಳನ್ನು ನೇರವಾಗಿ ಕೊಟ್ಟಿದ್ದಾರೆ. ಆದರೆ ಆ ಹಣವೆಲ್ಲಾ ಎಲ್ಲಿಗೆ ಹೋಯಿತು ? ಅಲ್ಲಿಯ ಆ ಜನರಲ್ ಮ್ಯಾನೇಜರು ಫ್ಯಾಕ್ಟರಿಗೇ ಬರುವುದಿಲ್ಲ. ಅಲ್ಲಿ ಇನ್ನೂ ಯಾರು ಯಾರೋ ಟೆಕ್ನಿಕಲ್ ಅಡ್ವೈಜರು ಇತ್ಯಾದಿ ಅನೇಕರಿದ್ದಾರೆ. ಆದರೆ ಅವರೊಬ್ಬರೂ ಅಲ್ಲಿ ಕಾಣುತ್ತಿಲ್ಲ. ಅಲ್ಲಿ ಇನ್ನೂ ಅನೇಕ ಹಳೇ ಹೆಗ್ಗಣಗಳಿರುತ್ತವೆ ಅಲ್ಲಿ ಇರತಕ್ಕ ಸ್ಟಾಫಿನಲ್ಲಿ ಸರಿಯಾದ ಕೋಆರ್ಡಿನೇಷನ್ ಇಲ್ಲ ಅಲ್ಲಿಗೆ ಒಬ್ಬ ಸರಿಯಾದ ಒಳ್ಳೆಯ ಮ್ಯಾನೇಜಿಂಗ್ ಡೈರೆಕ್ಟರನ್ನು ಹಾಕಿದರೆ, ಮತ್ತು ಅಲ್ಲಿಯ ನೌಕರರ ಹಾಗೂ ವರ್ಕರುಗಳ ಸಹಕಾರ ಪಡೆದುಕೊಂಡು ಕೆಲಸ ಮಾಡಿದರೆ ಈಗಲೂ ಅಲ್ಲಿ ಲಾಭ ಗಳಿಸುವುದಕ್ಕೆ ಅವಕಾಶವಿದೆ. ಆದರೆ ಹಾಗೆ ಮಾಡದೆ ತಾವು ಈ ಕೈಗಾರಿಕೆಗಳನ್ನು ತಾತಾ—ಬಿರ್ಲಾರವರಿಗೆ ಕೊಡುವುದಕ್ಕೆ ಹೊರಟಿದ್ದಾರೆಂಬ ಸುದ್ದಿಯನ್ನು ಕೇಳುತ್ತಿದ್ದೇನೆ...

SRI M. S. KRISHNAN.—Nobody has said that and nobody can dare say it.

SRI M. S. KRISANAN.—A thing which was stated outside should not be stated on the floor of this House. Anyway I have got real apprehension that somebody might put presure.
ಶ್ರೀಮತಿ ಸುಧಾರೆಡ್ಡಿಯವರ ಹೆಸರನ್ನು ಬೆಂಗಳೂರು ನಗರದಲ್ಲಿ ಬೋರ್ಡಿನಮೇ ಹಾಕಿದ್ದಾರೆ. ಹಾಗೆ ಅದು ಬರಬಾರದು, ಅವರು ಬೆಂಗಳೂರಿನವರು. ಮೂರು ವರ್ಷದಿಂದೇನಾಗಿದೆ ಎಂಬುದನ್ನು ವಿಚಾರ ಮಾಡಬೇಕು. ರಿನೋವೇಷನ್‌ಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆಂಬ ಆರೋಪವಿದೆ, ದೆಹಲಿಯಲ್ಲಿ ಎಗ್ಜಿಬಿಷನ ನಲ್ಲಿ ಸಾವಿರಾರು ರೂಪಾಯಿ ಖರ್ಚಾಗಿದೆಯೆಂದು ಹೇಳುತ್ತಿದ್ದಾರೆ. ಡೈರೆಕ್ಟರುಗಳಲ್ಲಿ ಒಬ್ಬರಿಗೊಬ್ಬರಿಗೆ ಹೊಂದಾಣಿಕೆಯಿಲ್ಲ ಒಬ್ಬ ಡೈರೆಕ್ಟರು ಒಂದು ಕಡೆ ೨೦ ಸಾವಿರ ರೂಪಾಯಿಗಳ ಸಾಮಾನಿಗೆ ಆರ್ಡರ್ ಮಾಡುವರು, ಬೇರೆಯವರಿಗೆ ತಿಳಿಸುವುದಿಲ್ಲ, ಅದು ಮಾರಾಟವಾಗುವುದಿಲ್ಲ. ಕರ್ನಾಟಕ ಹ್ಯಾಂಡಿಕ್ರಾಫ್ಟ್ಸ್‌ನಲ್ಲಿ ಒಳ್ಳೆಯ ಆದಾಯ ಬರಬೇಕು, ಇದನ್ನು ನೋಡಿ ಸರಿಯಾದ ವ್ಯವಸ್ಥೆ ಮಾಡಬೇಕು,

ಇನ್ನು ವಿಜಯನಗರ ಸ್ಟೀಲ್‌ಪ್ಲಾಂಟಿನ ವಿಚಾರದಲ್ಲಿ ಒಂದೇ ಒಂದು ಮಾತು. ಇದಕ್ಕೆ ಎರಡು ಕೋಟಿ ರೂಪಾಯಿ ಮಂಜೂರು ಮಾಡಿದ್ದಾರೆ, ಇದು ಏತಕ್ಕೂ ಸಾಲದು ಒಂದು ವರ್ಷಕ್ಕೆ ೧೨ ರಿಂದ ೧೫ ಕೋಟಿಯವರೆಗಾದರೂ ಕೊಡದೇ ಹೋದರೆ ಏನು ಮಾಡುವುದಕ್ಕಾಗುವುದಿಲ್ಲ. ಅಷ್ಟನ್ನು ಒದಗಿಸಲು ಪ್ರಯತ್ನಮಾಡಿ ಸ್ಟೀಲ್ ಪ್ಲಾಂಟಿನ ಕೆಲಸ ಸರಿಯಾಗಿ ಮಾಡಲು ಅವಕಾಶಮಾಡಬೇಕು ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ ಶ್ರೀರಾಮುಲು (ಗಾಂಧಿನಗರ).—ಮಾನ್ಯ ಉಪಾಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆಗಳನ್ನು ಒಪ್ಪುತ್ತಾ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ ಇಲಾಖೆಯವರು ಒದಗಿಸಿರುವ ವರದಿ ನೋಡಿದರೆ ಕಳೆದ ವರ್ಷದ ವರದಿ ಮತ್ತು ಈ ವರ್ಷದ ವರದಿಯನ್ನು ನೋಡಿದರೆ ಉತ್ಪತ್ತಿ ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆಯಾಗಿದೆ. ಆದರೆ ಸ್ವಲ್ಪಮಟ್ಟಿಗೆ ಒಳ್ಳೆಯ ರೀತಿಯಿಂದ ಕೆಲಸವಾಗಿದೆ ಎಂದು ಹೇಳಬಹುದು. ಕಳೆದ ವರ್ಷ ಸ್ಟ್ರೈಕ್, ಲಾಕೌಟ್ ಮುಂತಾದವುಗಳಿಂದ ಸುಮಾರು ೧೭ ಕೋಟಿ ರೂಪಾಯಿ ನಷ್ಟವಾಗಿತ್ತು. ಈ ವರ್ಷ ವರದಿ ಪ್ರಕಾರ ೧೦ ಕೋಟಿ ೭೫ ಲಕ್ಷ ನಷ್ಟವಾಗಿದೆ. ಇದನ್ನು ನೋಡಿ ಸಂತೋಷ ಪಡುವಂತಿಲ್ಲ. ಪ್ರತಿವರ್ಷ ಯಾವಯಾವ ಇಲಾಖೆಯಿಂದ

ಅಥವ ಕಾರ್ಖಾನೆಯಿಂದ ಎಷ್ಟು ಉತ್ಪತ್ತಿ ಬರುತ್ತದೆ ಎಂದು ವರದಿ ಒಡಗಿಸುವುದು ಒಳ್ಳೆಯದು ಎಂದು ನಾನು ಹಿಂದೆಯೇ ಹೇಳಿದ್ದೇನೆ. ಆದರೆ ಆ ಪ್ರಕಾರ ಒದಗಿಸುತ್ತಿಲ್ಲ. ನಮ್ಮ ಮುಂದಿರುವ ವರದಿಯಿಂದ ಸರಕಾರಿ ಅಥವ ಖಾಸಗಿ ಅಥವ ಈ ಎರಡೂ ಕೈಗಾರಿಕೆಗಳಲ್ಲಿ ಪ್ರಗತಿಯೇನಾಗಿದೆ, ಸರಕಾರಿ ಅಧಿಕಾರಿಗಳು ಮಾಡಿರುವ ಉತ್ತಮವಾದ ಕೆಲಸವೇನು ಎಂದು ಸೂಕ್ಷ್ಮವಾಗಿ ನೋಡಿದರೆ ಏನೂ ಕಂಡು ಬರುವುದಿಲ್ಲ. ಈ ದೃಷ್ಟಿಯಿಂದ ಪ್ರತಿ ವರ್ಷ ವರದಿ ಕೊಡುವಾಗಿ ಬ್ಯಾಲೆನ್ಸ್ ಷೀಟ್ ಕೂಡ ಕೊಡುವುದು ಒಳ್ಳೆಯದು. ಆಗ ದಕ್ಷತೆಯನ್ನು ಸ್ವಲ್ಪಮಟ್ಟಿಗೆ ಅಳೆಯುವುದಕ್ಕೆ ಅವಕಾಶವಾಗುತ್ತದೆ. ಕಳೆದ ವಾರ ಒಂದು ಸಂದರ್ಭ ಬಂದಾಗ ಈ ಸಭೆಯಲ್ಲಿ ನನ್ನ ಪ್ರಶ್ನೆಗೆ ಉತ್ತರ ಹೇಳುತ್ತಾ ಒಂದು ಹತ್ತಿ ಗಿರಣಿಯಲ್ಲಿ ಸೇಕಡ ಎರಡೂವರೆಯಷ್ಟು ನಷ್ಟವಾಗುತ್ತಿದೆ ಎಂದು ಹೇಳಿದರು. ಇದು ಅಧಿಕೃತವಾಗಿ ಮ್ಯಾನೇಜ್‌ಮೆಂಟ್ ಕೊಟ್ಟಿರುವ ವರದಿ. ಸೇಕಡ ೨೩ ರಿಂದ ೩ ರವರೆಗೆ ಬಟ್ಟೆ ಡ್ಯಾಮೇಜ್ ಆಗಿದೆ. ಕೋಟೆಗಟ್ಟಲೆ ಕೋಆಪರೇಟಿವ್ ಮಿಲ್ಸ್ ಹಾಗೂ ಚಿಕ್ಕ ಮಿಲ್ಸ್ ಇವೆ. ಬಟ್ಟೆ ತಯಾರಿಕೆಯಲ್ಲಿ ಸೇಕಡ ೩ ರಷ್ಟು ನಷ್ಟವಾಗುವುದಾದರೆ ಹಣಕ್ಕೆ ಬಡ್ಡಿ ತಿರುಗಿಸಿ ಕೊಡುವುದು ಹೇಗೆ ? ಸೇಕಡ ೭೫ ರಲ್ಲಿ ೩೩ ಹೋದರೆ ಒಳ್ಳೆಯ ಬಟ್ಟೆ ಸೇಕಡ ಎಷ್ಟು ಉಳಿದಂತಾಯಿತು ? ಯಾರು ಸೇಕಡ ೭೫ ರಷ್ಟು ಉತ್ಪತ್ತಿ ಮಾಡುವರೋ ಅಲ್ಲಿ ನಷ್ಟವಾಗುತ್ತದೆಂದು ತಿಳಿಯಬಹುದು. ಈ ದೃಷ್ಟಿಯಿಂದ ನೋಡುವುದಾದರೆ ಇನ್ನು ಮುಂದೆ ಸರ್ಕಾರದವರು ನಡೆಸುವ ಅಥವ ಕೋಆಪರೇಟಿವ್ಸ್‌ನವರು ನಡೆಸುವ ಕೈಗಾರಿಕೆಗಳಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ ಎಂಬುದರಮೇಲೆ ಸರ್ಕಾರದ ಅಧಿಕಾರಿಯ ದೃಷ್ಟಿಯಿರಬೇಕು. ಆ ಕಡೆ ಹೆಚ್ಚು ದೃಷ್ಟಿಯಿಡದಿದ್ದರೆ ಬಹುಶಃ ವರ್ಷೇವರ್ಷೇ ನಷ್ಟವಾಗುತ್ತಲೇ ಹೋಗುವುದು. ಸರಕಾರ ಯಾವುದೇ ಕೈಗಾರಿಕೆ ನಡೆಸಿದರೂ ಒಳ್ಳೆಯ ಉತ್ಪತ್ತಿ ಬರುವುದಿಲ್ಲ ಎಂಬ ಭಾವನೆ ಮೂಡುವುದಕ್ಕೆ ಅವಕಾಶವಾಗಬಾರದು. ಈ ದೃಷ್ಟಿಯಿಂದ ಹೇಳುವುದಾದರೆ ಬಹುಶಃ ಸಾಕಷ್ಟು ಉತ್ಪತ್ತಿ ತೋರಿಸದಿರುವ ಅಧಿಕಾರಿಗಳಿಗೆ ಶಿಕ್ಷೆ ಕೊಡಲು ಅವರನ್ನು ಬೇರೆ ಕಡೆಗೆ ವರ್ಗ ಮಾಡಬಹುದು. ಆದರೆ ಇದರಿಂದ ಶಿಕ್ಷೆ ಮಾಡಿದಂತಾಗುವುದಿಲ್ಲ. ಆದುದರಿಂದ ಉತ್ಪತ್ತಿ ನೋಡಿ ಅಧಿಕಾರಿಗಳಿಗೆ ಪ್ರಮೋಷನ್ ಕೊಡಬೇಕು. ಸಾರ್ವಜನಿಕರ ಹಣಕ್ಕೆ ತಕ್ಕ ಪ್ರತಿಫಲ ಬರಬೇಕು. ಉತ್ಪತ್ತಿ ಜಾಸ್ತಿ ಮಾಡಿ ವರಮಾನ ಬರುವಂತೆ ಮಾಡಿದರೆ ಕಾರ್ಮಿಕರಿಗೆ ಸಂಬಳ ಮತ್ತು ಬೋನಸ್ ಜಾಸ್ತಿ ಕೊಡಬಹುದು. ಮೈಸೂರು ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು ಇದರ ೩ ವರ್ಷದ ವರದಿ ಅಂದರೆ ೧೯೬೭-೬೮, ೬೮-೬೯ ಮತ್ತು ೭೦-೭೧ ರ ವರದಿಗಳನ್ನು ನೋಡಿದರೆ ರಾಮೆಟೀರಿಯಲ್ಸ್ ಎಷ್ಟು ಉಪಯೋಗವಾಗಿದೆ, ಎಷ್ಟು ಲಾಭ ಬಂದಿದೆ ಎಂದು ಗೊತ್ತಾಗುವುದು. ಇದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ೧೯೬೭–೬೮ರಲ್ಲಿ ೧ ಕೋಟಿ ೫೭ ಲಕ್ಷದ ರಾಮೆಟೀರಿಯಲ್ಸ್ ಉಪಯೋಗವಾಗಿದೆ, ನೆಟ್ ಪ್ರಾಫಿಟ್ ೧೫ ಲಕ್ಷ ಬಂದಿದೆ. ೧೯೭೦–೭೧ ರಲ್ಲಿ ೧ ಕೋಟಿ ೯೫ ಲಕ್ಷದ ರಾಮೆಟೀರಿಯಲ್ಸ್ ಉಪಯೋಗ ಮಾಡಿ ನೆಟ್ ಪ್ರಾಫಿಟ್ ೧೨ ಲಕ್ಷ ಪಡೆಯಲಾಗಿದೆ. ಸುಮಾರು ೫೦ ಲಕ್ಷ ರೂಪಾಯಿಗಳ ರಾಮೆಟೀರಿಯಲ್ಸ್ ಹೆಚ್ಚಾಗಿ ಉಪಯೋಗ ಮಾಡಿದ್ದರೂ ೧೯೭೦–೭೧ ರಲ್ಲಿ ೬೭-೬೮ಕ್ಕಿಂತ ಲಾಭ ಕಡಮೆ. ಬಹುಶಃ ನೇರವಾಗಿ ಮಂತ್ರಿಗಳ ಮೇಲೆ ಇವರ ಜವಾಬ್ದಾರಿಯನ್ನು ಹೊರಿಸಲು ಇಷ್ಟಪಡುವುದಿಲ್ಲ. ಈಗಿನ ಮಂತ್ರಿಗಳಿದ್ದ ಕಾಲದಲ್ಲಿ ಇದಾಗಿಲ್ಲ.

ಸರ್ಕಾರಿ ಕಾರ್ಖಾನೆಗಳು ಯಾವರೀತಿ ನಡೆಯುತ್ತಿವೆ ಎನ್ನುವುದನ್ನು ಮಾತ್ರ ನಾನು ಇಲ್ಲಿ ಹೇಳಬೇಕಾಗಿದೆ. ೧೯೬೭ ರಿಂದ ಅವರು ಉಪಯೋಗಿಸಿರತಕ್ಕ ಕಚ್ಚಾ ಪದಾರ್ಥದ ಬೆಲೆ ಮತ್ತು ವ್ಯಾಪಾರದ ಪರ್ಸೆಂಟೇಜ್ ತೆಗೆದುಕೊಳ್ಳುವುದಾದರೆ ೧೯೬೭-೬೮ಕ್ಕೆ ೬.೫ ಪರ್ಸೆಂಟ್ ಇದ್ದುದು ೧೯೬೮-೬೯ರಲ್ಲಿ ೧೪ ಪರ್ಸೆಂಟ್‌ಗೆ ಬಂದಿದೆ. ೧೯೬೯-೭೦ರಲ್ಲಿ ೬.೨ ಪರ್ಸೆಂಟ್ ಆಗಿದೆ. ರಾ ಮೆಟೀರಿಯಲ್ ಉಪಯೋಗಿಸಿರುವುದು ಹೆಚ್ಚು ಕಡಮೆ ಎರಡು ಕೋಟಿ ರೂಪಾಯಿ ನಷ್ಟು ಮೂರುಕಾಲು ಕೋಟಿ ರೂಪಾಯಿ ವ್ಯಾಪಾರ ಮಾಡಿ ೧೨ ಲಕ್ಷ ರೂಪಾಯಿ ಲಾಭ ಬಂದಿರುವುದನ್ನು ನೋಡಿದರೆ ನನಗೆ ಅರ್ಥವಾಗುವುದಿಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ೧೯೬೮-೬೯ರಲ್ಲಿ ಎರಡು ಕೋಟಿ ೪೫ ಲಕ್ಷ ರೂಪಾಯಿ ನಷ್ಟು ವ್ಯಾಪಾರವಾಗಿದೆ, ೧೯೭೦-೭೧ರಲ್ಲಿ ಮೂರುಕಾಲು ಕೋಟಿ ರೂಪಾಯಿ ನಷ್ಟು ವ್ಯಾಪಾರವಾಗಿದೆ. ಆದರೆ ೧೯೬೮–೬೯ರಲ್ಲಿ ೩೩ ಲಕ್ಷ ರೂಪಾಯಿ ನೆಟ್ ಪ್ರಾಫಿಟ್ ಸಿಕ್ಕಿದೆ ಎಂದರೆ ಕಡಿಮೆ ವ್ಯಾಪಾರದಿಂದ ಹೆಚ್ಚು ಲಾಭ ಸಿಕ್ಕಿದೆ. ಏಕೆ ಹೀಗಾಗಿದೆ ಎನುವುದೂ ನಮಗೆ ಅರ್ಥವಾಗುತ್ತಿಲ್ಲ. ಕಚ್ಚಾಮಾಲಿನ ಬೆಲೆ ಜಾಸ್ತಿಯಾಯಿತು ಎನ್ನುವ ವಾದವನ್ನು ಹೇಳಬಹುದು. ಕಚ್ಚಾಮಾಲಿನ ಬೆಲೆ ಜಾಸ್ತಿಯಾದರೆ ಸೋಪಿನ ಮಾರಾಟದ ಬೆಲೆಯನ್ನೂ ಜಾಸ್ತಿ ಮಾಡಿದ್ದಾರೆ. ಆದುದರಿಂದ ಕಚ್ಚಾಮಾಲಿನ ಬೆಲೆ ಯಾವಾಗ ಜಾಸ್ತಿಯಾಯಿತೋ ಆವಾಗ ನಮ್ಮ ಸೋಪಿನ ಬೆಲೆಯೂ ಜಾಸ್ತಿಯಾಗಿದೆ, ಕಡಮೆ ದರಕ್ಕೆ ಮಾರಿಲ್ಲ. ಈ ದೃಷ್ಟಿಯಿಂದ ನೋಡಿದರೆ ಸುಮಾರು ೭೫ ಲಕ್ಷ ರೂಪಾಯಿ ನಷ್ಟು ಹೆಚ್ಚು ವ್ಯಾಪಾರವಾಗಿರುವಾಗ ಕಡಮೆ ಲಾಭ ಸಿಕ್ಕುವುದಾದರೆ ಸರ್ಕಾರಿ ಕಾರ್ಖಾನೆಗಳಲ್ಲಿ, ಅಲ್ಲಿನ ವಹಿವಾಟಿನಲ್ಲಿ ಏನು ದೋಷವಿದೆ, ಏನು ತಪ್ಪು ನಡೆದಿದೆ ಎನ್ನುವುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

(ಶ್ರೀ ಕೆ. ಶ್ರೀರಾಮುಲು)

ಬಹಳ ಬುದ್ಧಿವಂತಿಕೆಯಿಂದ ಈ ಬ್ಯಾಲೆನ್ಸ್ ಷೀಟನ್ನು ನಮಗೆ ಒದಗಿಸಿ ಕೊಟ್ಟಿದ್ದಾರೆಂದು ಹೇಳಬಹುದು. ವರದಿಯನ್ನು ಕೊಟ್ಟಿರುವುದು ೧೯೬೭-೬೮ ರಿಂದ ೧೯೭೦-೭೧ರ ವರೆಗಿನ ನಾಲ್ಕು ವರ್ಷಕ್ಕೆ ಸಂಬಂಧಪಟ್ಟಂತೆ. ಆದರೆ ಸಿಬ್ಬಂದಿಯ ಸಂಬಳ ಸಾರಿಗೆಯ ಲೆಕ್ಕವನ್ನು ಕೊಟ್ಟಿರುವುದು ೧೯೬೯-೭೦ ಮತ್ತು ೧೯೭೦-೭೧ ಈ ಎರಡು ವರ್ಷಗಳಿಗೆ ಮಾತ್ರ. ಇದರಿಂದ ಇನ್ನೆರಡು ವರ್ಷಗಳಲ್ಲಿ ಎಷ್ಟು ಸಂಬಳಸಾರಿಗೆಗಳನ್ನು ಕೊಟ್ಟಿದ್ದಾರೆಂಬುದನ್ನು ಹೇಗೆ ತಿಳಿಯುವುದು? ಬಹುಶಃ ಆ ಎರಡು ವರ್ಷಗಳಲ್ಲಿ ಕಡಮೆ ಸಂಬಳಗಳನ್ನು ಕೊಟ್ಟಿದ್ದು ಅದು ನಮಗೆ ಗೊತ್ತಾಗದೆ ಇರಲಿ ಎನ್ನುವ ಉದ್ದೇಶದಿಂದ ಹೀಗೆ ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ವರದಿಯಲ್ಲಿ ಲಾಭನಷ್ಟವನ್ನು ನಾಲ್ಕು ವರ್ಷಗಳಿಗೆ ಕೊಟ್ಟು ಸಂಬಳಸಾರಿಗೆಗಳ ವಿವರವನ್ನು ಎರಡು ವರ್ಷಗಳಿಗೆ ಮಾತ್ರ ಕೊಟ್ಟರೆ ಈ ವರದಿಯಲ್ಲಿನ ವಿಚಾರಗಳ ಬಗ್ಗೆ ನಾವು ಮಾತನಾಡುವುದಾದರೂ ಹೇಗೆ ಎನ್ನುವುದು ಅರ್ಥವಾಗುತ್ತಿಲ್ಲ. ಹೀಗಾಗಬಾರದು. ಮಾನ್ಯ ಮಂತ್ರಿಗಳು ಯುವಕರಿದ್ದಾರೆ. ಕಳೆದ ವರ್ಷ ಹೇಳಿದೆ, ಅನೇಕ ಕಾರಣಗಳಿಂದ ಅವರು ಈ ವಿಷಯಗಳಲ್ಲಿ ಕೈ ಹಾಕಬೇಕು, ಹೆಚ್ಚು ಶ್ರಮ ತೆಗೆದುಕೊಳ್ಳಬೇಕು ಎಂದು. ಕಾರ್ಖಾನೆಗಳು ಧರ್ಮ ಛತ್ರಗಳಾಗಬಾರದು. ಕೆಲವು ಅಧಿಕಾರಿಗಳಿಗೆ ಕೈಗಾರಿಕೆಗಳು ಧರ್ಮ ಛತ್ರಗಳಾಗಿವೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಲ್ಲಿರುವ ಗಿರಣಿಗಳ ವಿಷಯ. ಸಣ್ಣ ಸ್ಪೇರ್ ಪಾರ್ಟ್ಸ್, ಬೋಲ್ಟ್ಸ್ ಇವೆಲ್ಲ ಬೆಂಗಳೂರಿನಲ್ಲಿಯೇ ಸಿಕ್ಕುತ್ತವೆ. ಆದರೆ ಬೆಂಗಳೂರಿನಲ್ಲಿರುವ ಮಿನರ್ವ ಮಿಲ್ಸ್‌ಗೆ ಬೇಕಾದ ಬೋಲ್ಟ್ಸ್ ಎಲ್ಲಿಂದ ತರಿಸುತ್ತಾರೆಂದರೆ ಕಲ್ಕತ್ತದಿಂದ ತರಿಸುತ್ತಾರೆ. ಅಲ್ಲಿಂದ ಏಕೆ ತರಿಸಬೇಕು? ಬೆಂಗಳೂರಿನಲ್ಲಿ ಎರಡೂವರೆ ರೂಪಾಯಿಗೆ ಸಿಕ್ಕುವುದಕ್ಕೆ ಏಳೂವರೆ ರೂಪಾಯಿ ಕೊಟ್ಟು ಏಕೆ ತರಿಸಬೇಕು ಎನ್ನುವುದನ್ನು ಪರಿಶೀಲಿಸಿ ಮಾಡಬೇಕು. ಇಷ್ಟು ಮಾತ್ರವಲ್ಲ, ತಮ್ಮ ಗಿರಣಿಯಲ್ಲಿ ಆಗಬೇಕಾದ ಸಣ್ಣಪುಟ್ಟ ಕೆಲಸಗಳಿಗೆ ಒಂದು ವರ್ಕ್‌ಷಾಪಿಗೆ ಕೊಡುತ್ತಾರೆ. ಅವರು ಇನ್ನೊಂದು ವರ್ಕ್‌ಷಾಪಿಗೆ ಅದನ್ನು ವಹಿಸುತ್ತಾರೆ ಹೀಗೆ ಕೆಲಸಗಳು ನಡೆಯುತ್ತಿವೆ ಕೋಟ್ಯಾಂತರ ರೂಪಾಯಿ ದುಡ್ಡನ್ನು ಕೊಟ್ಟು ಗಿರಣಿಗಳನ್ನು ನಡೆಸುವುದು ಬಡವರಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ. ಆದರೆ ಅಲ್ಲಿರುವ ಅಧಿಕಾರಿಗಳು ಒಂದು ವರ್ಷಕಾಲ ಇರುತ್ತೇವೆ, ಆ ಕಾಲದಲ್ಲಿ ಏನೋ ಮಾಡಿಕೊಂಡು ಹೋಗೋಣ ಎಂದು ಆ ರೀತಿ ಮಾಡುವುದಾದರೆ ಬಹುಶಃ ಯಾವ ಕಾರ್ಖಾನೆಯೂ ಅಭಿವೃದ್ಧಿಗೆ ಬರುವುದಕ್ಕೆ ಸಾಧ್ಯವಿಲ್ಲ. ಇಂತ ಕಾರಣಗಳಿಂದ ನಷ್ಟವಾಗುವುದಾದರೆ ಅದಕ್ಕೆ ಅಧಿಕಾರವರ್ಗದವರು ಯಾರು ಅಲ್ಲಿ ಕೆಲಸ ಮಾಡುತ್ತಿರುತ್ತಾರೆ ಅವರದೇ ಜವಾಬ್ದಾರಿ ಎಂದು ಹೇಳದೆ ವಿಧಿ ಇಲ್ಲ. ಹೀಗೆ ಹೇಳುವಾಗ ಅಧಿಕಾರಿಗಳು ತಮ್ಮ ಹಿಂದಿನ ಅಭ್ಯಾಸವೇನಿದೆ ಅದನ್ನು ಬಿಡಬೇಕಾಗುತ್ತದೆ. ಕಾಲ ಬಹಳ ಮಟ್ಟಿಗೆ ಬದಲಾವಣೆಯಾಗಿದೆ. ಅದಕ್ಕೆ ಅವರೂ ಕೂಡ ಹೊಂದಿಕೊಂಡು ಹೋಗ ಬೇಕಾದ ಪರಿಸ್ಥಿತಿ ಬರಬೇಕಾಗಿದೆ. ಹಾಗೆ ಬಾರದೆ ಇದ್ದರೆ ಬಹುಶಃ ಅಶಾಂತಿಗೆ ಕಾರಣವಾಗುತ್ತದೆ.

ಮಾನ್ಯ ಮಂತ್ರಿಗಳ ಪ್ರಾಮಾಣಿಕವಾದ ಪ್ರಯತ್ನವೇನಿದೆ ಅದರ ಬಗ್ಗೆ ನನಗೆ ಯಾವುದೇ ತರಹದ ಭಿನ್ನಾಭಿಪ್ರಾಯವಿಲ್ಲ. ಅವರಿಗೆ ನನಗಿಂತ ಅನುಭವವಿದೆ. ಲಾಭ ಬರುವುದಕ್ಕೆ ಯಾವರೀತಿ ಮಾಡಬೇಕು ಎನ್ನುವುದು ಗೊತ್ತಿದೆ. ಲಾಭ ಎಷ್ಟು ಬಂದರು ಎಷ್ಟು ಜನರನ್ನು ಕೆಲಸಕ್ಕೆ ಸೇರಿಸಿಕೊಂಡರೆ ಆ ಲಾಭವನ್ನು ಅಡ್ಜಸ್ಟ್ ಮಾಡಿ ಕಡಮೆ ಮಾಡಬಹುದು ಎನ್ನುವುದೂ ಅಧಿಕಾರ ವರ್ಗದವರಿಗೆ ಗೊತ್ತಿದೆ. ಹೀಗಾಗುತ್ತಿರುವುದು ತಪ್ಪಬೇಕು. ಸರ್ಕಾರ ನಡೆಸುತ್ತಿರುವ ಕಾರ್ಖಾನೆಗಳಲ್ಲಿ ಒಂದೆರಡು ಕಾರ್ಖಾನೆ ಬಿಟ್ಟು ಎಲ್ಲ ಕಡೆಯೂ ಲಾಸ್ಸಾಗುತ್ತಿದೆ. ಅನೇಕ ವರ್ಷಗಳಿಂದ ಈ ಕಾರ್ಖಾನೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಆದರೂ ಏಕೆ ಲಾಸ್ಸಾಗಬೇಕು? ಖಾಸಗಿಯವರು ನಡೆಸುವ ಕಾರ್ಖಾನೆಗಳಲ್ಲಿ ಲಾಸ್ಸಾಗುತ್ತಿದೆಯೇ? ಅವರು ಎಷ್ಟು ಲಾಭ ಮಾಡುತ್ತಿದ್ದಾರೆ ಎನ್ನುವುದು ಮಾನ್ಯ ಮಂತ್ರಿಗಳಿಗೆ ಏಕೆ ಅರ್ಥವಾಗುವುದಿಲ್ಲ? ಕಳೆದ ವರ್ಷ ನಾವು ಕೇಳಿದಾಗ ಭದ್ರಾವತಿ ಕಾರ್ಖಾನೆಯಲ್ಲಿ ಲಾಭ ಎಷ್ಟು ಬರುತ್ತಿತ್ತು ಎಂದರೆ ಅದಕ್ಕೆ ಅಂಕಿ ಅಂಶಗಳು ಸಿಕ್ಕಲಿಲ್ಲ. ಈ ವರ್ಷ ನೋಡುವಾಗ ಸ್ವಲ್ಪ ಮಟ್ಟಿಗೆ ಸಂತೋಷದಾಯಕವಾಗಿರುವ ವಿಷಯಗಳು ಬಂದಿವೆ. ೧೯೭೧-೭೨ರಲ್ಲಿ ೨೫ ಲಕ್ಷ ರೂಪಾಯಿ, ೧೯೭೨-೭೩ರಲ್ಲಿ ೭೧ ಲಕ್ಷ ರೂಪಾಯಿ ಬಂದಿದ್ದು ೧೯೭೩-೭೪ಕ್ಕೆ ೧೫೦ ಲಕ್ಷ ರೂಪಾಯಿಗಳ ಲಾಭ ಬರುವುದಾಗಿ ಅಂದಾಜು ಮಾಡಿದ್ದಾರೆ. ಖಚಿತವಾಗಿ ಎಷ್ಟು ಲಾಭ ಬಂದಿದೆ ಎನ್ನುವುದು ಬೇಕು. ನಮ್ಮ ದೇಶದಲ್ಲಿ ಬರೀ ಅಂದಾಜಿನ ಮೇಲೆ ಮಾನ್ಯ ಮಂತ್ರಿಗಳೂ ನಾವೂ ಅನೇಕ ಸಂದರ್ಭಗಳಲ್ಲಿ ಬಹಳ ಹೇಳಿಕೊಂಡು ಬಂದಿದ್ದೇವೆ. ಆದರೆ ಅದಕ್ಕನುಗುಣವಾಗಿ ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳೂ ಕೂಡ ನಡೆದುಕೊಳ್ಳಬೇಕಾಗಿದೆ. ಅನೇಕ ಪ್ರಸಂಗಗಳು ನಡೆದಿದೆ ಎಂದು ಮಾನ್ಯ ಬಂಗಾರಪ್ಪನವರು ಅವರ ಭಾಷಣದಲ್ಲಿ ಹೇಳಿದ್ದಾರೆ. ಯಾವ ಅಧಿಕಾರಿಗಳು ತಪ್ಪು ಮಾಡಿದ್ದರೂ ಕೂಡ ತಪ್ಪು ಮಾಡಿದವರನ್ನು ಮನ್ನಿಸಿ ಎಂದು ಕೇಳುವವನು ನಾನಲ್ಲ. ಆದರೆ ತಪ್ಪು ಮಾಡದೆ ಇರತಕ್ಕ ವ್ಯಕ್ತಿಗಳಿಗೆ ಶಿಕ್ಷೆ ಕೊಟ್ಟು ತಪ್ಪಿಗೆ ಒಳಗಾದವರನ್ನು ಉಳಿಸಿಕೊಳ್ಳತಕ್ಕ ಪ್ರವೃತ್ತಿ ಏನಿದೆ ಅದು ಹೋಗಬೇಕು. ಹಿಂದೆ ಅನೇಕ ತಪ್ಪುಗಳು ನಡೆದಾಗ ನಿರಪರಾಧಿಗಳನ್ನು ಐದಾರು ವರ್ಷದಿಂದಲೂ ಕೂಡ ವಿಚಾರಣೆ

ಮಾಡದೆ ಇಟ್ಟುಕೊಂಡಿದ್ದಾರೆ. ಎಕ್ಸ್ ಮಿನಿಸ್ಟರ್ ಮಗ ಒಬ್ಬರು ಮಾಡಿದ ಅಪರಾಧಕ್ಕಾಗಿ ಅವರನ್ನು ವಿಚಾರಣೆ ಮಾಡುವುದಕ್ಕೆ ಆಗಿಲ್ಲ. ಅದರ ಬಗ್ಗೆ ವರದಿಯನ್ನು ತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆ ? ಯಾರು ಅದಕ್ಕೆ ಸಂಬಂಧ ಪಟ್ಟಿಲ್ಲ ಅವರನ್ನು ಶಿಕ್ಷೆಗೆ ಒಳಪಡಿಸಿ ನಾಲ್ಕೂವರೆ ವರ್ಷದಿಂದ ಏತಕ್ಕೆ ಇಟ್ಟಿದ್ದಾರೆ? ತಪ್ಪು ಮಾಡಿದ್ದರೆ ಆರು ತಿಂಗಳಲ್ಲಿ ವಿಚಾರಣೆ ಮಾಡಿ, ಇಂಥ ತಪ್ಪು ಮಾಡಿದ್ದೀರಿ ಎಂದು ಹೇಳಿ ಡಿಸ್ಮಿಸ್ ಮಾಡಿ ಹೋಗಿ ಎಂದು ಕಳುಹಿಸಬೇಕಾಗಿತ್ತು. ಯಾವ ನ್ಯಾಯ, ಇದು? ಎಲ್ಲಿ ಇವರ ಬಗ್ಗೆ ವಿಚಾರಣೆ ಮಾಡಿಬಿಟ್ಟರೆ ಯಾರ ಯಾರ ಮೇಲೆ ಬರುತ್ತೋ ಎಂದು ಇರಬಹುದು. ಈ ರೀತಿ ಮಾಡಲು ಹೋಗಬಾರದು. ನಮಗೆ ಒದಗಿಸಿರುವ ವರದಿಯಲ್ಲಿ ಭದ್ರಾವತಿ ಕಂಪನಿಯ ವರ್ಕಿಂಗ್ ರಿಸಲ್ಟುಗಳನ್ನು ತೋರಿಸುತ್ತ ಇದರಲ್ಲಿ ಬರುವ ಲಾಭ ಅಂದಾಜು ಸುಮಾರು ೧.೫೦ ೭೩-೭೪ನೇ ಸಾಲಿನಲ್ಲಿ ಬರಬಹುದು ಎಂದು ಹೇಳಿದ್ದಾರೆ. ಇದು ಸಾಲದು, ಇದು ಸುಮಾರು ಮೂರು ಕೋಟಿಯಷ್ಟಾದರೂ ಆಗಬೇಕಾಗಿತ್ತು. ನಾವು ಏನು ಒಂದು ಹಣ ಇದರಲ್ಲಿ ಹೂಡಿದ್ದೇವೆ ಅದಕ್ಕೆ ತಕ್ಕಂತೆ ಲಾಭ ಬರಬೇಕೆಂದು ಹೇಳುವುದು ಸ್ವಾಭಾವಿಕ. ನಮ್ಮ ಈ ಕಾರ್ಖಾನೆಯಲ್ಲಿ ಹೆಚ್ಚು ಕಡಮೆ ಹದಿನೈದು ಸಾವಿರ ಕಾರ್ಮಿಕರು ಇದ್ದಾರೆ. ಇಷ್ಟು ಜನರಿರುವಾಗ ಇವರಿಗೆಲ್ಲಾ ಎಷ್ಟು ಸಂಬಳಸಾರಿಗೆಯನ್ನು ಕೊಡಬೇಕು ಅದನ್ನು ಕೊಡಬೇಕು. ಅಷ್ಟೇ ಸಂಬಳವನ್ನು ಕೊಟ್ಟಮೇಲೆ ಅದಕ್ಕೆ ತಕ್ಕಂತೆ ಈ ಕಾರ್ಖಾನೆಯಲ್ಲಿ ಲಾಭ ಬರುವಂತೆ ಕೆಲಸಗಳನ್ನೂ ಮಾಡಬೇಕು. ಇದರಂತೆ ಅಂದಾಜು ಮಾಡಿದರೆ ನಮ್ಮ ಈ ಕಾರ್ಖಾನೆಯಲ್ಲಿ ಸುಮಾರು ಮೂರು ನಾಲ್ಕು ಕೋಟಿಗಳ ಮೇಲೆಯೇ ಲಾಭ ಬರಲೇಬೇಕು, ಆದರೆ ಇಲ್ಲಿ ಹೇಳಿರುವಂತೆ ೧೯೭೦-೭೧ನೇ ಸಾಲಿನಲ್ಲಿ ಲಕ್ಷಗಟ್ಟಲೆ ಹಣ ನಷ್ಟವಾಗಿದೆ ಎಂದು ಹೇಳುವುದನ್ನು ನೋಡಿದರೆ ತುಂಬಾ ಶೋಚನೀಯವಾಗುತ್ತದೆ. ಸಾರ್ವಜನಿಕರು ಹಾಕಿರುವ ಹಣಕ್ಕೆ ಭದ್ರತೆ ಬರಬೇಕಾದರೆ ಕಾರ್ಖಾನೆಗಳು ಹೆಚ್ಚು ಹೆಚ್ಚು ಲಾಭ ಬರುವಂತೆ ಇದರ ಕೆಲಸಗಳನ್ನು ಸಜ್ಜುಗೊಳಿಸಬೇಕು. ಹಾಗೆ ಈ ಕೈಗಾರಿಕೆಗಳಲ್ಲಿ ಲಾಭ ಪಡೆಯಲು ಸಾಧ್ಯವಾಗುತ್ತದೆ. ಅದರಂತೆ ಮಾಡಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಈ ವಿಚಾರದಲ್ಲಿ ಇಷ್ಟು ಹೇಳಿ ಇನ್ನು ಒಂದೇ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ವಿಷಯವನ್ನು ಗಮನಿಸಬೇಕು. ಸರ್ಕಾರದ ಕಾರ್ಖಾನೆಗಳಲ್ಲಿ ಅನೇಕ ಕಡೆ ಕೇಂದ್ರ ಸರಕಾರ ನಡೆಸುವ ಕಾರ್ಖಾನೆಗಳೂ ಇವೆ. ರಾಜ್ಯ ಸರಕಾರಗಳು ನಡೆಸುವ ಕಾರ್ಖಾನೆಗಳು ಇವೆ. ಹೀಗೆ ಸರಕಾರ ನಡೆಸುವಂತಹ ಕಾರ್ಖಾನೆಗಳಲ್ಲಿ ರಾಜಕೀಯ ಪಕ್ಷಗಳ ಪ್ರಭಾವ ಬರುಬರುತ್ತಾ ಜಾಸ್ತಿಯಾಗುತ್ತಿದೆ. ಉದಾಹರಣೆಗೆಯಾಗಿ ಹೇಳಬೇಕಾದರೆ ನಮ್ಮ ಬೆಂಗಳೂರಿನಲ್ಲಿರುವ ಹೆಚ್.ಎಂ.ಟಿ ಕಾರ್ಖಾನೆಯಲ್ಲಿ ಕಮ್ಯುನಿಸ್ಟು ಪಾರ್ಟಿಗೆ ಸೇರಿದ ಕಾರ್ಮಿಕವರ್ಗದವರೇ ಜಾಸ್ತಿಯಾಗಿದ್ದಾರೆ. ಇವರು ಫ್ಯಾಕ್ಟರಿಯೊಳಗೇನೆ ಕಮ್ಯುನಿಸ್ಟು ಪಾರ್ಟಿಯವರ ಫ್ಲಾಗನ್ನು ಹಾರಿಸಿಬಿಟ್ಟಿದ್ದಾರೆ. ಕಮ್ಯುನಿಸ್ಟು ಪಕ್ಷಗಳಂತೆ ಇತರ ರಾಜಕೀಯ ಪಕ್ಷಗಳೂ ಇರುವುದಿಲ್ಲವೇ. ಅವರುಗಳೂ ಹೀಗೆ ಅವರ ಪಾರ್ಟಿ ಫ್ಲಾಗ್‌ಗಳನ್ನು ಕಾರ್ಖಾನೆಯೊಳಗೆ ಹಾರಿಸಬಹುದೇ? ಪ್ರತಿಯೊಬ್ಬರೂ ಅವರವರ ಪಕ್ಷದ ಬಾವುಟಗಳನ್ನು ಹಾರಿಸುವುದಕ್ಕೆ ಹೋದರೆ ಕಾರ್ಖಾನೆಯ ಪ್ರಗತಿಗೆ ಸರಿಯಾಗಿರುತ್ತದೆಯೇ ? ಇದಕ್ಕೆಲ್ಲಾ ಏಕೆ ಅವಕಾಶ ಮಾಡಿಕೊಡುತ್ತೀರಿ ? ಇಂದು ರಾಜ್ಯದಲ್ಲಿ ನೂರಾರು ಪಕ್ಷಗಳು ಎಂದರೆ ಕಾಂಗ್ರೆಸ್, ಕಾಂಗ್ರೆಸ್ (ಒ) ಕಮ್ಯುನಿಸ್ಟರು, ಶ್ರೀ ಬಂಗಾರಪ್ಪನವರ ಪಕ್ಷದವರು ಹೀಗೆ ಬೇರೆ ಬೇರೆ ರಾಜಕೀಯ ಪಕ್ಷಗಳೂ ಇವೆ. ಇವರೆಲ್ಲಾರೂ ಅವರವರ ಬಾವುಟಗಳನ್ನು ಕಾರ್ಖಾನೆಗಳಲ್ಲಿ ಹಾರಿಸಲು ಸಾಧ್ಯವೇ ? ಇದಕ್ಕೆ ಅವಕಾಶ ಮಾಡಿಕೊಡುವುದು ಸರಿಯೇ ? ಪ್ರಶ್ನೆ ಯಾವ ಪಕ್ಷಕ್ಕೇ ಆಗಲೀ ಸಾರ್ವಜನಿಕರಿಂದ ದುಡ್ಡನ್ನು ಪಡೆದು ಕೋಟಿಗಟ್ಟಲೆ ವ್ಯವಹಾರ ನಡೆಸುತ್ತಿರುವ ಕಾರ್ಖಾನೆಗಳಲ್ಲಿ ತಮ್ಮ ಪಕ್ಷದ ಪ್ರಚಾರ ನಡೆಸುವುದಕ್ಕೆ ಅವಕಾಶ ಕೊಡಬಾರದು ಮತ್ತು ಯಾವುದೇ ದೃಷ್ಟಿ ಇದರೂ ಯಾವುದೇ ಪಕ್ಷಗಳ ಬಾವುಟಗಳನ್ನು ಹಾಕಿದರೆ ಅದನ್ನು ಕೂಡಲೇ ತೆಗೆಸಬೇಕು ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಹಾಗಿಲ್ಲದಿದ್ದರೆ ಇಲ್ಲದ ಗಲಾಟೆಗಳಾಗಲು ಅವಕಾಶವಾಗುತ್ತದೆ. ಇಂದು ಪ್ರಶ್ನೋತ್ತರ ವೇಳೆಯಾದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಸತ್ಯನಾರಾಯಣಸಿಂಗ್‌ರವರ ಕಳುಹಿಸಿದ್ದ ಒಂದು ಗಮನ ಸೆಳೆಯುವ ಸೂಚನೆ ಮೇಲೆ ಒಂದು ಹೇಳಿಕೆಯನ್ನು ಸಭೆಯಲ್ಲಿ ಕೊಟ್ಟರು. ಇದರಲ್ಲಿ ಒಂದು ಪಕ್ಷದ ಖಾದಿ ಟೋಪಿಯನ್ನು ಸುಡುವುದರಿಂದಾಗಿ ಯಾವ ರೀತಿ ಗಲಭೆಗಳಾದವು ಎನ್ನುವ ವಿವರಗಳನ್ನೂ ಇಲ್ಲಿ ತಿಳಿಸಿದರು. ಆದರೆ ಇದರ ಬಗ್ಗೆ ಮಾನ್ಯ ಸಚಿವರಾದ ಶ್ರೀ ಕೃಷ್ಣರವರು ಉತ್ತರ ಕೊಡುವಾಗ ಅವರು ಬೇರೆ ತರಹದಲ್ಲಿ ಹೇಳಿದರು. ಅವರು ಹೇಳಿದುದರ ಮೇಲೆ ನಾವು ಅವರ ಮೇಲೆ ಒಂದು ಪ್ರಿವಿಲೇಜು ಮೋಷನ್ನು ತರಲೂ ಸಾಧ್ಯವಿತ್ತು. ಕಾರ್ಖಾನೆಗಳ ಒಳಗೇ ಏತಕ್ಕೆ ಪ್ರತಿಯೊಂದು ಡಿಪಾರ್ಟುಮೆಂಟಿನಲ್ಲೂ ರಾಜಕೀಯ ಪಕ್ಷಗಳ ಫ್ಲಾಗನ್ನು ಹಾಕಲು ಅವಕಾಶ ಮಾಡಿಕೊಡಬೇಕು? ಇದು ಯಾವ ದೃಷ್ಟಿಯಿಂದಲೂ ಸರಿಯಲ್ಲ. ಇದರಿಂದ ಕಾರ್ಖಾನೆಯ ಉತ್ಪಾದನೆಗೆ ಧಕ್ಕೆ ಬರುವುದಿಲ್ಲವೇ ? ತಾವು ಇನ್ನೂ ಯುವಕರಾಗಿದ್ದೀರಿ ಮತ್ತು ಹೆಚ್ಚು ಹುಮ್ಮಸ್ಸಿನಿಂದ ಕೆಲಸ ಮಾಡುವವರೂ ಆಗಿದ್ದೀರಿ. ಇದಕ್ಕಾಗಿ ತಮಗೆ ನನ್ನ ಧನ್ಯವಾದಗಳನ್ನು ತಿಳಿಸಿ ತಮ್ಮ ಡಿಮ್ಯಾಂಡುಗಳಿಗೆ ಬೆಂಬಲ ಕೊಡುತ್ತೇವೆ ಮತ್ತು ಇನ್ನು ಹೆಚ್ಚು ಹೆಚ್ಚು ಪ್ರಗತಿಯನ್ನು ತಮ್ಮಿಂದ ನಿರೀಕ್ಷಿಸುತ್ತಿದ್ದೇವೆ. ಈ ದೃಷ್ಟಿಯಿಂದ ನಾನು ಹೇಳುವುದು ಮುಂದಿನ ವರ್ಷದಿಂದಾಲಾದರೂ ಪ್ರತಿ

(ಶ್ರೀ ಕೆ. ಶ್ರೀರಾಮುಲು)

ಯೊಂದು ಕಾರ್ಖಾನೆಯ ಬ್ಯಾಲೆನ್ಸ್ ಷೀಟುಗಳನ್ನು ಸಭೆಯ ಎಲ್ಲ ಸದಸ್ಯರಿಗೂ ಒದಗಿಸಿ ಕೊಟ್ಟರೆ ಅದರಲ್ಲಿರುವ ಲೋಪದೋಷಗಳೇನು ಎನ್ನುವುದನ್ನು ನೋಡಿ ಇಲ್ಲಿ ಮಾತಾಡಬಹುದು. ಹಾಗಿಲ್ಲದೆ ಇದರ ಚಿತ್ರ ನಮಗೆ ದೊರೆಯದಿದ್ದರೆ ಹೆಚ್ಚು ಮಾತಾಡಲು ಆಗುವುದಿಲ್ಲ. ಬೆಂಗಳೂರು ಸೋಪ್ ಫ್ಯಾಕ್ಟರಿಯವರು ಬ್ಯಾಲೆನ್ಸ್ ಷೀಟು ಕೊಟ್ಟಿರುವ ಹಾಗೆ ಮೈಸೂರು ಸೋಪು ಫ್ಯಾಕ್ಟರಿಯವರಿಂದಲೂ ಕೊಡಿಸುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ಭಾಷಣವನ್ನು ಮುಗಿಸುತ್ತೇನೆ.

MR. DEPUTY SPEAKR.—The Discussion on these Demands will be resumed tomorrow. Now, the House will adjourn and meet tomorrow at One of the Clock.

The House adjourned at Fifteen Minutes Past Six of the Clock to meet again at One of the Clock on Friday, the 3rd May 1974.

WD 652—GPB—550—24-9-1974